ತೇಜಸ್ವಿಯವರ ಪರಿಸರದ ಕಥೆಗಳು

ಕನ್ನಡ ಸಾಹಿತ್ಯಾಧ್ಯಯನ ವಿಭಾಗದಲ್ಲಿ
ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ

ಸಂಶೋಧಕರು
ವಿಜಯಶ್ರೀ ಬಿ.

ಮಾರ್ಗದರ್ಶಕರು
ಮಲ್ಲಿಕಾರ್ಜುನ ವಣೇನೂರು

ಕನ್ನಡ ಸಾಹಿತ್ಯಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭-೨೦೦೮

274

ತೇಜಸ್ವಿಯವರ ಪರಿಸರದ ಕಥೆಗಳು

ಕನ್ನಡ ಸಾಹಿತ್ಯಾಧ್ಯಯನ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ಸಂಪ್ರಬಂಧ

ಸಂಶೋಧಕರು
ವಿಜಯಶ್ರೀ ಡಿ.

ಮಾರ್ಗದರ್ಶಕರು
ಮಲ್ಲಿಕಾರ್ಜುನ ವಣೇನೂರು

ಕನ್ನಡ ಸಾಹಿತ್ಯಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೭ - ೨೦೦೮

ಸಂಶೋಧಕರ ಪ್ರಮಾಣ ಪತ್ರ

ತೇಜಸ್ವಿಯವರ ಪರಿಸರದ ಕಥೆಗಳು ಎಂಬ ಸಂಪ್ರಬಂಧವನ್ನು ಮಲ್ಲಿಕಾರ್ಜುನ ವಣೇನೂರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಭಾಷಾ ನಿಕಾಯದ ಕನ್ನಡ ಸಾಹಿತ್ಯಾಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ವಿಜಯಶ್ರೀ. ಡಿ.

(ವಿಜಯಶ್ರೀ ಡಿ.)
ಎಂ.ಫಿಲ್. ವಿದ್ಯಾರ್ಥಿನಿ
ಕನ್ನಡ ಸಾಹಿತ್ಯಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ದಿನಾಂಕ:

ಸ್ಥಳ: ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

ತೇಜಸ್ವಿಯವರ ಪರಿಸರದ ಕಥೆಗಳು ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ **ವಿಜಯಶ್ರೀ ಡಿ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ:

ಸ್ಥಳ: ವಿದ್ಯಾರಣ್ಯ

ಮಲ್ಲಿಕಾರ್ಜುನ ವಣೇನೂರು
ಕನ್ನಡ ಸಾಹಿತ್ಯಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ





ಅಧ್ಯಾಯ ಒಂದು


ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ತೇಜಸ್ವಿಯವರ ಬರಹವನ್ನು ಒಂದು ನಿರ್ಧಿಷ್ಟ ಚೌಕಟ್ಟಿನಲ್ಲಿಟ್ಟು ಅಧ್ಯಯನ ಮಾಡಲು ಸಾಧ್ಯವಿಲ್ಲ ಅವರ ಬರಹಗಳಲ್ಲಿ ಕ್ರಿಯಾಶೀಲ ಪ್ರವೃತ್ತಿಯೇ ಹೆಚ್ಚಿರುವುದರಿಂದ ಅದನ್ನು ಓದಿಕೊಂಡಂತೆಲ್ಲಾ. ಹೊಸ ಓದಿಗೆ ಹೆಚ್ಚಿನ ಅವಕಾಶವನ್ನು ಮಾಡಿಕೊಟ್ಟಂತಿರುತ್ತದೆ

ತೇಜಸ್ವಿಯಂಥಾ ಒಬ್ಬ ಲೇಖಕ ನಮಗೆ ಇಷ್ಟವಾಗುವುದು ಅವರ ಮಾತಿನಿಂದಲ್ಲ. ಅವರ ನೇರ ದಿಟ್ಟ ವರ್ತನೆಯಿಂದ ಮತ್ತು ಸರಳ ವಿಶಿಷ್ಟ ಬರವಣಿಗೆಯಿಂದ.

ಕನ್ನಡ ಸಾಹಿತ್ಯದಲ್ಲಿ ವಿಜ್ಞಾನ ಮತ್ತು ಅದರ ಪ್ರಾಯೋಗಿಕ ಅಂಶಗಳನ್ನು ಅಧ್ಯಯನ ಮಾಡಿ ಬರೆದವರಲ್ಲಿ ಕಾರಂತರು ಮೊದಲಿಗರಾದರೆ, ತೇಜಸ್ವಿಯವರು ಮತ್ತೊಬ್ಬ ಲೇಖಕರೆಂಬುದು ಗೊತ್ತಾಗುತ್ತದೆ. ತೇಜಸ್ವಿಯವರೇ ಕೆಲವೊಂದು ಸಾರಿ ಈ ಮಾತನ್ನು ಒಪ್ಪಿಕೊಂಡಿದ್ದಾರೆ. ಕಾರಂತರ ಜೀವನದೃಷ್ಟಿಯ ಪ್ರಭಾವ ನನ್ನ ಮೇಲಾಗಿದೆ ಎಂದು ಹೇಳಿದ್ದಾರೆ. ತನಗೆ ಇಷ್ಟ ಬಂದ ರೀತಿಯಲ್ಲಿ ಬದುಕಲು ಪ್ರಯತ್ನಿಸಿದವರು ಮತ್ತು ಸರಳ ವಿಶಿಷ್ಟ ವೈಜ್ಞಾನಿಕ ದೃಷ್ಟಿಕೋನದಿಂದ ಸಾಹಿತ್ಯದಲ್ಲಿ ಹೊಸ ವಿಚಾರಗಳಿಗೆ ಅವಕಾಶ ಮಾಡಿಕೊಟ್ಟವರು ತೇಜಸ್ವಿಯವರು.

ಸಾಹಿತ್ಯವನ್ನು ಕೇವಲ ಭಾವನಾತ್ಮಕವಾಗಿ, ಕಲಾತ್ಮಕವಾಗಿ, ನೋಡಿಕೊಂಡು ಬೆಳೆಸಿಕೊಂಡು ಬಂದವರನ್ನು ಹಾಗೆ ಇರುವವರನ್ನು ನಾವು ಬಹಳಷ್ಟು ಲೇಖಕರಲ್ಲಿ ಕಾಣುತ್ತೇವೆ. ಆದರೆ ಸಮಾಜದಲ್ಲಿ ಪ್ರಕೃತಿಯಲ್ಲಿ ಬರುವ ಎಲ್ಲಾ ಘಟನೆಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಆಲೋಚಿಸಿ ಅವುಗಳಿಗೆ ಸಾಹಿತ್ಯ ರೂಪ ಕೊಟ್ಟು ಓದುಗರ ಮುಂದಿಡುವ ಪ್ರಯತ್ನವನ್ನು ತೇಜಸ್ವಿ ಬಹಳ ಯಶಸ್ವಿಯಾಗಿ ಮಾಡಿದ್ದಾರೆ. ಅವರು ಓದುಗರಿಗೆ ಇಷ್ಟವಾಗುವುದೇ ಅವರ ಸರಳ ರೀತಿಯ ಬರವಣಿಗೆಯಿಂದ.



ಯಾವುದೇ ಕ್ಲಿಷ್ಟ ಪದಗಳ ವ್ಯಾಕರಣ ಛಂದಸ್ಸುಗಳ ಆಡಂಬರವಿಲ್ಲದೇ, ಸರಳ ರೀತಿಯ ಭಾಷಾ ಶೈಲಿಯಿಂದ ನಿರೂಪಣೆಯಿಂದ ಓದುಗರ ಗಮನ ಸೆಳೆಯುತ್ತಾರೆ. ಕೇವಲ ಒಂದು ವರ್ಗದ ಜನರು ಮಾತ್ರ ಅರ್ಥಮಾಡುಕೊಳ್ಳುತ್ತಿದ್ದ ನವ್ಯ ಸಾಹಿತ್ಯ ಘಟ್ಟದಲ್ಲಿ ತಮ್ಮ ಬರವಣಿಗೆಯನ್ನು ಆರಂಭಿಸಿದ ತೇಜಸ್ವಿ ಮಾತ್ರ ಹೇಗೆ ಭಿನ್ನ ರೀತಿಯಲ್ಲಿ ತಮ್ಮ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು ಎಂಬುದು ಹಲವರಲ್ಲಿ ಈಗಲೂ ಪ್ರಶ್ನೆಯಾಗಿ ಕಾಡುತ್ತದೆ.

ನವ್ಯ ಸಾಹಿತ್ಯ ಕಾಲಘಟ್ಟದಿಂದ ತೇಜಸ್ವಿ ಬಹಳ ಬೇಗ ಹೊರಬಂದರೂ, ಇತರ ನವ್ಯ ಲೇಖಕರ ಹಾಗೆ ವಸ್ತುನಿಷ್ಟ ವಾಸ್ತವವಾದೀ ಲೇಖಕರಾಗಿ ನಮ್ಮ ಪರಂಪರೆ, ಜಾತಿ, ಧರ್ಮ ಇವುಗಳ ವಿರುದ್ಧ ಒಂದು ನಾಟಕೀಯ ನಿಲುವು ರೂಪಿಸಿಕೊಂಡವರು.

ಚಲನಶೀಲ ಜಗತ್ತಿನ ನಿರ್ದಯತೆಯಲ್ಲಿ ಆದರ್ಶಗಳು ಕುಸಿದು ಬಿದ್ದು ಅದನ್ನು ನಂಬಿಕೊಂಡಿದ್ದವರ ಹತಾಶೆ ಕೂಡ ತೇಜಸ್ವಿಯರ ಅನಿಸಿಕೆಯಲ್ಲಿ ಸೇರಿದೆ ಜೊತೆಗೆ ಅವುಗಳು ಪರಿಪಕ್ವಗೊಂಡಿದೆ. ನವ್ಯ ಮಾರ್ಗವನ್ನು ಧಿಕ್ಕರಿಸುವ ನಿರ್ಧಾರ ಕೈಗೊಂಡದ್ದು ೧೯೭೩ ರಲ್ಲಿ. ಆಗ ತಾವು ಪ್ರಕಟಿಸಿದ ಅಬಚೂರಿನ ಪೋಸ್ಟಾಫೀಸು ಕಥಾಸಂಕಲನದಲ್ಲಿ ತೇಜಸ್ವಿ ಹೊಸ ಮಾರ್ಗವನ್ನು ಅನ್ವೇಷಿಸಬೇಕಾಗಿರುವ ಅನಿವಾರ್ಯತೆಯನ್ನು ವಿವರಿಸಿದ್ದಾರೆ.

ನವ್ಯ ಸಾಹಿತ್ಯ ಸಂಪ್ರಾದಯವನ್ನು ತ್ಯಜಿಸಬೇಕಾಗಿದ್ದಕ್ಕೆ ತೇಜಸ್ವಿ ಮೂರು ಕಾರಣಗಳನ್ನು ಕೊಡುತ್ತಾರೆ.

ಮೊದಲನೆಯ ಕಾರಣ ನವ್ಯ ಮಾರ್ಗದ ಸಾಹಿತ್ಯಿಕ ಶೈಲಿ ಮತ್ತು ತಂತ್ರಗಳು ಎರಡನೆಯದು ಉಪಾಧ್ಯಾಯರಿಂದಲೆ ಆಗುವ ಸಾಹಿತ್ಯ ಸೃಷ್ಟಿ ಮೂರನೆಯದು ಕೇವಲ ಸಾಹಿತ್ಯದ ಮಟ್ಟಿಗೆ ಸೀಮಿತಗೊಂಡ ಕ್ರಾಂತಿಕಾರಕತನ.

ತೇಜಸ್ವಿಯವರ ವಿಶೇಷ ಗಮನವಿರುವುದು ಪರಿಸರದ ಮೇಲೆ. ಪರಿಸರದ ಮೇಲೆ ನನಗೆ ಹೆಚ್ಚು ಆಸಕ್ತಿ ಹುಟ್ಟಲು ಕಾರಣ ನನ್ನ ತಂದೆ ಕುವೆಂಪು ಎಂದೂ, ಚಿಕ್ಕಂದಿನಲ್ಲಿ ಕಂಡ ಪರಿಸರದ ವಿಸ್ಮಯಗಳೆಲ್ಲಾ ಹೇಗೆ ಕ್ರಮೇಣ ಆಸಕ್ತಿ ವಿಷಯಗಳಾಗಿ ನನ್ನಲ್ಲಿ ಬೆಳೆದವು ಎಂಬುದಕ್ಕೆ ಅವರ ಪರಿಸರದ ಕತೆಗಳ ಸಂಕಲನದ ಮೊದಲ ಭಾಗದಲ್ಲಿ ವಿವರಣೆಯನ್ನು ನೀಡುತ್ತಾರೆ.

ಪರಿಸರದ ಕತೆ ಸಂಕಲನವನ್ನು ಪ್ರಕೃತಿ ಮತ್ತು ಪರಿಸರದ ಬಗ್ಗೆ ನನಗೆ ಮೊದಲು ಕುತೂಹಲ ಮೂಡಿಸಿದ ನನ್ನ ತಂದೆಯವರಿಗೆ ಎಂದು ಆ ಪುಸ್ತಕದಲ್ಲಿ ಅರ್ಪಣೆ ಮಾಡಿದ್ದಾರೆ.



ತೇಜಸ್ವಿ ನಗರ ಜೀವನದಿಂದ ಬೇಸತ್ತು ಕಾಡಿಗೆ ಹೋಗಿ ನೆಲೆಸಿದ್ದಾರೆ. ಎಂಬ ಅಭಿಪ್ರಾಯವಿತ್ತು ಅವರೆ ಹೇಳುವಂತೆ

ನಾನು ಮಲೆನಾಡಿನ ಮೂಡಿಗೆರೆಯಲ್ಲಿ ಕಾಡು ತೆಗೆದುಕೊಂಡು ಕಾಫಿತೋಟ ಮಾಡಲು ನಿರ್ಧಸಿದ್ದು ವಾಸ್ತವವಾಗಿ ಕಾಫಿತೋಟದ ಲಾಭಕ್ಕಾಗಲೀ, ಹಳ್ಳಿಗೆ ಹಿಂದಿರುಗುವ ಆದರ್ಶಕ್ಕಾಗಲೀ, ವ್ಯವಸಾಯದ ಮೇಲಿನ ಪ್ರೀತಿಯಿಂದಾಗಲೀ ಖಂಡಿತ ಅಲ್ಲ. ಯಾರ ಹಂಗು ಭಯ ಬೈಯ್ಗುಳಗಳ ಕಾಟವಿಲ್ಲದೆ ಕಾಡು ಮೇಡು ಅಲೆದುಕೊಂಡು ಇರಬಹುದೆಂಬುದೇ ಬಹು ಮುಖ್ಯ ಕಾರಣ.

ಸುಮ್ಮನೇ ಕೋವಿ ಹೆಗಲಿಗೇರಿಸಿಕೊಂಡು ಕಿವಿ ಜೊತೆ ಕಾಡೊಳಗೆ ಅಲೆಯುತ್ತಾ ಮೈ ಕೈ ತರಚಿಕೊಂಡು ಮುಳ್ಳು ಚುಚ್ಚಿಸಿಕೊಂಡು ಸುಸ್ತಾಗಿ ಹಿಂದಿರುಗುವುದು ಯಾವ ತರದ ಸಂತೋಷವೋ ಇಂದಿಗೂ ನನಗೆ ಅರ್ಥವಾಗುತ್ತಿಲ್ಲ ಬಹುಶಃ ಇತತರರಿಗೂ ಅರ್ಥ ಮಾಡಿಸಲಾರೆ ಎಂದು ಹೇಳಿದ್ದಾರೆ.

> ನಾನು ಕಾಡುಕೊಂಡ ಅನಂತರದ ಎಷ್ಟೋ ಅನುಭವಗಳನ್ನು ಗೆಳೆಯರೊಡನೆ ಹಂಚುತ್ತಾ ಕ್ವಚಿತ್ತಾಗಿ ಹೇಳಿದ್ದೇನೆ ಆದರೆ ಅವುಗಳನ್ನು ಬರೆಯಬೇಕೆಂದು ಈವರೆಗೂ ನನಗೆ ಅನ್ನಿಸಿರಲಿಲ್ಲ. ಏಕೆಂದರೆ ಅವು ಯಾವುವೂ ಉಲ್ಲೇಖರ್ಹವಾದ ಅಸಾಧಾರಣ ಅನುಭವಗಳಾಗಿ ಇರಲಿಲ್ಲ. ಆದರೆ ಪರಿಸರದ ಬಗ್ಗೆ ಆಸ್ಥೆ, ಕುತೂಹಲಗಳು ಮೂಡಿದ ನಾನೊಬ್ಬ ಪರಿಸರವಾದಿಯಾಗಿ ರೂಪುಗೊಂಡ ಹಾದಿ ಇದು.
>
> ಪರಿಸರ ಸಂರಕ್ಷಣೆಯ ಬಗ್ಗೆ ವೈಜ್ಞಾನಿಕ ಪಾಠಗಳಷ್ಟೆ ಈ ನಡೆದು ಬಂದ ದಾರಿಯ್ನು ತಿಳಿಯುವುದು ಅಗತ್ಯವೆನಿಸುತ್ತದೆ.
>
> ನಾನು ಹೇಳಿರುವ ಚಿಕ್ಕ ಚಿಕ್ಕ ಘಟನೆಗಳಿಗೂ, ಪರಿಸರವಾದಕ್ಕೂ ಯಾವುದೇ ಸಂಬಂಧವನ್ನು ನೇರವಾಗಿ ತೋರಿಸಲಾರೆ ಆದರೆ ಇದು ನಡೆದು ಬಂದ ದಾರಿ ಮಾತ್ರ ಎಂದು ಹೇಳಬಲ್ಲೆ.

ತೇಜಸ್ವಿಯವರ ಜೀವನಾಸಕ್ತಿಯಂತೆಯೇ ಅವರ ವಿಜ್ಞಾನಾಸಕ್ತಿ ಕುತೂಹಲಗಳು ಅಧ್ಯಯನ ವಿಷಯಗಳಾಗಬಲ್ಲವು. ನೀರಸ ವಸ್ತುವಿನಂತೆ ಜನ ಸಾಮಾನ್ಯರಿಂದ ದೂರ ಉಳಿದು ಬಿಡುವ ವೈಜ್ಞಾನಿಕ ಸತ್ಯಗಳು ಇವರ ಕಾದಂಬರಿ ಕಥೆಗಳಲ್ಲಿ ಗರಿಬಿಚ್ಚಿ ಹಾರುತ್ತವೆ.



ಅವರ ಅನುಭವದಿಂದ ಪರಿಸರದಿಂದ ಕಂಡುಕೊಂಡ ಸತ್ಯಗಳನ್ನು ಮನದಾಳದ ಮಾತುಗಳನ್ನು ಬಿಚ್ಚಿಡುತ್ತಾ ಹೋಗುತ್ತಾರೆ. ಕಾಡುಗಳನ್ನು ನಾಶ ಮಾಡಿದಾಗ ಅಲ್ಲಿರುವ ಪ್ರಾಣಿಗಳನ್ನು ಅವುಗಳ ಪರಿಸರವನ್ನು ಧ್ವಂಸ ಮಾಡಿದಾಗ ರಹಸ್ಯ ಗೌಪ್ಯ ಅಧ್ಭುತಗಳ ನಿರಂತರ ನಿಧಿಯೊಂದನ್ನು ನಮ್ಮ ಕಿರಿಯ ಜನಾಂಗ ಕಳೆದುಕೊಂಡಂತೆ ಮನಸ್ಸು ಖಿನ್ನವಾಗುತ್ತದೆ. ಈ ದುರಂತದ ದುಃಖವನ್ನು ಅಂಕಿ ಸಂಖ್ಯೆಗಳ ಆಧಾರದ ಮೇಲೆ, ಸಿದ್ಧಾಂತಗಳ ಮುಖಾಂತರ ವಿಶ್ಲೇಷಿಸಿ ಪರಿಸರ ಸಂರಕ್ಷಣೆಯ ಬಗ್ಗೆ ಜನರಿಗೆ ಹೇಳಲು ಮನಸ್ಸೇ ಬರುವುದಿಲ್ಲ.

ಏಕೆಂದರೆ ನಾನು ಕಂಡಂತೆ ಕಾಡನ್ನು ಕಂಡಿಲ್ಲದ ಅನುಭವಿಸದ ಮನಸ್ಸುಗಳಿಗೆ ನನ್ನ ಮನಸ್ಸಿನ ದುಗುಡವನ್ನು, ನಿರ್ಜೀವ ಅಂಕಿ ಸಂಖ್ಯೆಗಳ ವಿಶ್ಲೇಷಣೆಯ ಮುಖಾಂತರ ಹೆಳಿ ಹೇಗೆ ಪ್ರತಿಸ್ಪಂದನ ಉಂಟುಮಾಡಲಿ, ಎಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಈ ರೀತಿಯ ಪ್ರತಿಸ್ಪಂದನ್ನು ಉಂಟುಮಾಡಲು ಪರಿಸರದ ಕತೆಗಳು ಪುಸ್ತಕವನ್ನು ಓದುಗರ ಮುಂದಿಡುವ ಪ್ರಯತ್ನವನ್ನು ಮಾಡಿದ್ದಾರೆ.

ಇದಕ್ಕಾಗಿ ತೇಜಸ್ವಿ ಕತೆಗಳನ್ನು ಹೇಳುವ ರೀತಿ. ತೋರುವ ಪ್ರಸಂಗಗಳನ್ನು, ಸನ್ನಿವೇಶಗಳನ್ನು, ವ್ಯಕ್ತಿಚಿತ್ರಗಳನ್ನು ಉಪಯೋಗಿಸಿಕೊಂಡು ಅವುಗಳ ಮೂಲಕ ಕತೆಗಳನ್ನು ಹೇಳುತ್ತಾ ಹೋಗುತ್ತಾರೆ. ಆದರೆ ಪ್ರಕೃತಿ ಪ್ರಾಣಿಗಳ ಬಗ್ಗೆ ಅನಗತ್ಯ ಕುತೂಹಲ ಇರಕೂಡದು ಎಂಬ ಪುಕವೋಕನ ಮಾತೊಂದನ್ನು ತೇಜಸ್ವಿ ಕತೆಗಳಲ್ಲಿ ಅಲ್ಲಲ್ಲಿ ಪ್ರಸ್ತಾಪಿಸಿದ್ದಾರೆ. ಪರಿಸರದ ಬಗ್ಗೆ ಪ್ರಾಣಿಗಳ ವಿಚಾರದಲ್ಲಿ ತಿಳಿದುಕೊಳ್ಳುವ ಆಸಕ್ತಿ ಇರಬೇಕು ನಿಜ. ಆದರೆ ಎಷ್ಟು ಅಗತ್ಯವೋ ನಮಗೆ ಎಷ್ಟು ಗ್ರಹಿಸಲು ಸಾಧ್ಯವೋ ಅಷ್ಟನ್ನು ಮಾತ್ರ ತಿಳಿದುಕೊಳ್ಳಬೇಕು. ಇದನ್ನೆಲ್ಲಾ ಸಂಪೂರ್ಣ ತಿಳಿಯುತ್ತೇನೆಂದು ಹೋಗುವುದು ಮೂರ್ಖತನವೇ ಸರಿ. ಸುಮ್ಮನೆ ನಮಗೆ ಅಗತ್ಯ ಇದ್ದಷ್ಟನ್ನು ಮಾತ್ರ ತಿಳಿದುಕೊಂಡು ಮಿಕ್ಕುದ್ದನ್ನು ನೋಡಿ ಆಶ್ಚರ್ಯ ಪಡುತ್ತಾ ಇದ್ದು ಬಿಡುವುದು ಒಳ್ಳೆಯದು.

ಪ್ರಕೃತಿ ಎಂದರೆ ಕುವೆಂಪು ಮತ್ತು ತೇಜಸ್ವಿ ಇಬ್ಬರಿಗೂ ವಿಶೇಷ ಪ್ರೀತಿ ಒಲವು. ಪ್ರಕೃತಿ ಎಂದರೆ ಕುವೆಂಪು ಅವರಿಗೆ ಅದೊಂದು ತಪಸ್ಸು. ಆರಾಧನ ಮನೋಭಾವ. ಆದರೆ ತೇಜಸ್ವಿಯವರದು ಭಿನ್ನ ದೃಷ್ಟಿಕೋನ. ಪ್ರಕೃತಿ ಎಂದರೆ ವಿಸ್ಮಯ, ಬೆರಗು, ಸೃಷ್ಟಿಯ ರಹಸ್ಯ ತಿಳಿಯುವ ಕುತೂಹಲ ಪ್ರಕೃತಿಯ ವಾಸ್ತವತೆಗೆ ಹೆಚ್ಚು ಒತ್ತು ನೀಡಿದ್ದಾರೆ. ನಿಗೂಢ ಸತ್ಯಗಳ ಶೋಧನೆ, ವೈಜ್ಞಾನಿಕ ದೃಷ್ಟಿಕೋನದಿಂದ ಪ್ರಕೃತಿ ರಹಸ್ಯಗಳನ್ನು ಅನಾವರಣಗೊಳಿಸಿದ್ದಾರೆ.

ಪರಿಸರ ಎಂದರೆ ತೇಜಸ್ವಿಯವರ ಪ್ರಕಾರ ಕೇವಲ ಕಾಡು, ನದಿ, ಹಕ್ಕಿ, ಪ್ರಾಣಿಪಕ್ಷಿಗಳಲ್ಲ. ನಾವು ನಿತ್ಯ ಜೀವಿಸುತ್ತಿರುವವ ಸಮಾಜ, ಅದರೊಳಗಿನ ಜನರು ಎಲ್ಲರೂ ಎಂದು ಭಾವಿಸುತ್ತಾರೆ. ಆದ್ದರಿಂದ



ಅವರ ಕಥೆ ಕಾದಂಬರಿಗಳಲ್ಲಿ ಬರುವ ಹೆಚ್ಚಿನ ಪಾತ್ರಗಳೆಲ್ಲವೂ ಅವರ ದಿನನಿತ್ಯ ಜೀವನದಲ್ಲಿ ಕಂಡ ಜನಸಾಮಾನ್ಯರು ಹಾಗೂ ಒಡನಾಡಿಗಳೇ. ಶ್ರೀ ಸಾಮಾನ್ಯರನ್ನು ತಮ್ಮ ಕಥೆಗಳ ಕೇಂದ್ರವನ್ನಾಗಿಟ್ಟುಕೊಂಡು ಕಥೆ ಹೆಣೆಯುವ ಕಲೆಗಾರಿಕೆಯಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಸೃಷ್ಟಿಯ ರಹಸ್ಯದ ಬಗ್ಗೆ ಹೆಚ್ಚು ಆಸಕ್ತಿ, ಅವುಗಳ ರಹಸ್ಯ ಅರಿಯುವ ವಿಶ್ಲೇಷಣೆಯಲ್ಲಿ ವೈಜ್ಞಾನಿಕ ಮನೋಭಾವ, ವೈಚಾರಿಕತೆ ಹಾಗೂ ವಾಸ್ತವದ ನೆಲಗಟ್ಟಿಗೆ ಹೆಚ್ಚು ಒತ್ತು ನೀಡಿದ್ದಾರೆ.

ನವಿರಾದ ಹಾಸ್ಯ, ಸರಳ ಭಾಷಾಶೈಲಿ ತೇಜಸ್ವಿಯವರ ಎಲ್ಲಾ ಕೃತಿಗಳಲ್ಲಿ ಕಾಣಬಹುದು. ವರ್ತಮಾನದ ಮೇಲೆ ನಿಂತು ಬದುಕನ್ನು ಗ್ರಹಿಸಿದಂತೆ ಬಿಚ್ಚಿಡಲು ಪ್ರಯತ್ನಿಸುತ್ತಾರೆ. ಅವರ ಕಥೆಗಳಲ್ಲಿ ಬದುಕಿನ ನಿಗೂಢಕ್ಕೆ ಮತ್ತು ಸರಳತೆಗಳ ಮುಖಾಮುಖಿ ಎದುರಾಗುತ್ತವೆ.

ಕನ್ನಡದ ಬಹುಮುಖ್ಯ ಕಥೆಗಾರರಾಗಿ, ಕಾದಂಬರಿಕಾರರಾಗಿ, ತಮ್ಮ ಅನುಭವಗಳ ಹೊಸ ಲೋಕವನ್ನು ಓದುಗರ ಮುಂದೆ ತಂದು ನಿಲ್ಲಿಸುತ್ತಾರೆ. ಓದುಗರನ್ನು ಚಿಂತನೆಗೆ ಹಚ್ಚುತ್ತಲೇ ಅವರ ಮುಂದೆ ವಿಸ್ಮಯ ಲೋಕವನ್ನು ತೆರೆದಿಡುತ್ತಾರೆ. ಓದುಗರ ಕುತೂಹಲವನ್ನು ಕೆರಳಿಸುತ್ತಾ ತಣಿಸುತ್ತಾ ಹೊಸ ಶೋಧನೆ ನಡೆಸುತ್ತಾರೆ.

ಕೆಲವು ಲೇಖಕರು ಸಾಹಿತ್ಯದಲ್ಲಿ ಮಾತ್ರ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಆದರೆ ತೇಜಸ್ವಿ ಎಲ್ಲರಿಗಿಂತ ಭಿನ್ನವಾಗಿ ಕಾಣಲು ಕಾರಣ ಸಾಹಿತ್ಯದ ಜೊತೆಗೆ ಕೃಷಿ, ಚಿತ್ರಕಲೆ, ಪರಿಸರ, ಫೋಟೋಗ್ರಫಿ, ಸಂಗೀತ, ಕಂಪ್ಯೂಟರ್, ಪ್ರಾಣಿಪಕ್ಷಿಗಳ ಜೀವನ ಅಧ್ಯಯನ, ಶಿಕಾರಿ, ಹೀಗೆ ಹಲವು ಹವ್ಯಾಸಗಳನ್ನು ರೂಢಿಸಿಕೊಂಡು ಕ್ರಿಯಾಶೀಲರಾದುದರ ಪರಿಣಾಮವಾಗಿದೆ.

ಅಂಥಹ ಒಂದು ಕನ್ನಡದ ಬೇರಾವ ಲೇಖಕರಿಗೂ ದಕ್ಕದ ಅನುಭವಲೋಕ ಮತ್ತು ಕ್ರಿಯಾಶೀಲತೆಯಿಂದಾಗಿ ಹುಟ್ಟಿದ ಕಥಾಸಂಕಲನವೆ ಪರಿಸರದ ಕತೆಗಳು. ಈ ಕತೆಗಳನ್ನು ತೇಜಸ್ವಿಯರು ಆತ್ಮಚರಿತ್ರೆಯ ಕೆಲವು ಪುಟಗಳೆಂದು ಓದಬಹುದು. ತೇಜಸ್ವಿಯರ ಸಾಹಿತ್ಯ ಸೃಷ್ಟಿಯ ಪ್ರೇರಣೆಗಳನ್ನು ಅಭ್ಯಾಸ ಮಾಡ ಬಯಸುವವರು ಈ ಕೃತಿಯನ್ನು ಅಗತ್ಯ ಅಭ್ಯಾಸ ಮಾಡಬೇಕು.

ಈ ಕತೆಗಳಲ್ಲಿ ತೇಜಸ್ವಿ ಬಾಲ್ಯದ ಕೆಲವು ಘಟನೆಗಳನ್ನು ಓದುಗರ ಮುಂದೆ ಇಟ್ಟಿದ್ದಾರೆ. ಅದರ ಮುಂದಿನ ಕೆಲವು ಅಧ್ಯಾಯಗಳಲ್ಲಿ ತೇಜಸ್ವಿ ತಮ್ಮ ಮಕ್ಕಳಿಗೆ ಜೀವಜಗತ್ತಿನ ಬಗ್ಗೆ ಬೋಧಿಸುವ ಪ್ರಸಂಗಗಳು ದಾಖಲಾಗಿವೆ.

ಪರಿಸರದ ಬಗ್ಗೆ ಬರೆಯುತ್ತಾ ಲೇಖಕರು ತಮ್ಮ ಮನೆ, ಸ್ನೇಹಿತರು ಆಳುಕಾಳುಗಳ ಬಗ್ಗೆ, ತಮ್ಮ ವೃತ್ತಿ ಹವ್ಯಾಸ ಸಾಹಸಗಳ ಬಗ್ಗೆ ನೆನಪುಗಳನ್ನು ಬಿಚ್ಚಿಡುತ್ತಾ ಹೋಗಿದ್ದಾರೆ. ಹಾಗಾಗಿ ಪರಿಸರದ ಕತೆಯಲ್ಲಿ



ಮರ, ಗಿಡ, ಪಶು ಪಕ್ಷಿಗಳ ಜಗತ್ತಿನಂತೆ ಒಂದು ಮನುಷ್ಯ ಪರಿಸರವೂ ತೇಜಸ್ವಿಯವರ ಮಾನಸಿಕ ಲೋಕದ ಒಳಪರಿಸರವೂ ಏಕಕಾಲದಲ್ಲಿ ಬಿಡಿಸಿಕೊಳ್ಳುತ್ತಾ ಹೋಗುತ್ತದೆ.


ಇದರಿಂದಾಗಿ ಬರವಣಿಗೆಗೆ ವಿಶೇಷವಾದ ಲವಲವಿಕೆ ಜೀವಂತಿಕೆ ಬಂದುಬಿಟ್ಟಿದೆ. ತೇಜಸ್ವಿಯವರ ಹಾಸ್ಯ ಶೈಲಿಯ ನಿರೂಪಣೆ ಇಡೀ ಕತೆಗಳನ್ನು ಪುಸ್ತಕವನ್ನು ಹೊಸದಾಗಿ ಕಾಣಲು ಅವಕಾಶವಿದೆ. ಹಾಸ್ಯ ವಿನೋದ ತೇಜಸ್ವಿಯವರ ಬರವಣಿಗೆಯಲ್ಲಿ ಕೇವಲ ಒಂದು ತಾಂತ್ರಿಕ ಉಪಕರಣವಾಗಿ ಬಳಕೆಯಾಗಿರುವುದಿಲ್ಲ. ಅದು ಅವರು ಅನುಭವವನ್ನು ಗ್ರಹಿಸುವ ಮತ್ತು ಅಭಿವ್ಯಕ್ತಿಸುವ ತಾತ್ವಿಕತೆಗೆ ಸಂಬಂಧಿಸಿದ್ದು. ಪರಿಸರದ ಕತೆಗಳನ್ನು ಬರೆಯುವಾಗ ತೇಜಸ್ವಿ ಅತೀ ಬುದ್ದಿವಂತಿಕೆಯಿಂದ ತಜ್ಞರಾಗಿ ಬರೆಯುತ್ತಿಲ್ಲ. ಅನುಭವಸ್ಥರಾಗಿ ಒಂದೊಂದು ಅನುಭವಗಳನ್ನು ಕತೆಗಳಲ್ಲಿ ಹಂಚಿಕೊಂಡಿದ್ದಾರೆ.

ತೇಜಸ್ವಿಯವರಿಗಿರುವಂತೆ ಪರಿಸರದ ಕುರಿತಾದ ಅಪಾರ ತಿಳುವಳಿಕೆ, ಹಾಸ್ಯಪ್ರಜ್ಞೆ, ಪ್ರತಿಭೆಗಳಿಲ್ಲದೆ ಬೇರೆ ಯಾರಾದರೂ ಇಂತಹ ಬರವಣಿಗೆಗಳನ್ನು ಮಾಡಿದ್ದರೆ ಅವು ನೀರಸ ವರದಿಗಳಾಗಿಬಿಡುತ್ತಿದ್ದವು. ಆದರೆ ತೇಜಸ್ವಿಯವರ ಬರವಣಿಗೆ ಇಲ್ಲಿ ಅದ್ಭುತವಾದ ಕತೆಗಳಾಗಿ ಅರಳಿಕೊಂಡಿವೆ. ಹೀಗಾಗಿ ಪರಿಸರದ ಕತೆ ಕೃತಿಯು ಕನ್ನಡದ ಅಪರೂಪದ ಮಹತ್ವದ ಕಲಾಕೃತಿಯಾಗಿ ಅರಳಿದೆ.

ತೇಜಸ್ವಿ ಈ ಕ್ಷಣದ ಸತ್ಯ ಮತ್ತು ವಾಸ್ತವ ಜಗತ್ತಿನಲ್ಲಿ ಬದುಕಲು ಇಷ್ಟಪಡುತ್ತಾರೆ. ಅದು ಅವರ ಜೀವನದ ಆದರ್ಶವೂ ಕೂಡ ಅವರು ಯಾರ ಹೊಗಳಿಕೆಯ ಮಾತುಗಳಿಗೆ ಉತ್ಸವ ಮೂರ್ತಿಯಾಗುವುದಿಲ್ಲ. ಆಧುನಿಕರಣ ಮತ್ತು ಜಾಗತೀಕರಣದ ಬಗ್ಗೆ ಆಸಕ್ತಿ ವಹಿಸುತ್ತಾರೆ.


ಕಾಲಕ್ಕೆ ತಕ್ಕಂತೆ ಸಾಹಿತ್ಯದಲ್ಲಿ ಅನೇಕ ಬದಲಾವಣೆಯನ್ನು ತರಲು ಪ್ರಯತ್ನಿಸಿದವರು. ಸಮಾಜದ ವಸ್ತುಸ್ಥಿತಿಯ ಬಗ್ಗೆ ಕಾಳಜಿ ಇರುವ ಲೇಖಕ. ಅವರ ಗುಣ ಮತ್ತು ಸರಳತೆಗಳೇ ಅವರ ಬಗ್ಗೆ ಇನ್ನಷ್ಟು ಅಭಿಮಾನ ಮೂಡಿಸಿ ಕನ್ನಡದ ಓದುಗರು ತೇಜಸ್ವಿ ಹೊಸದೇನನ್ನು ಬರೆದರು ಎಂದು ಆಸೆಗಣ್ಣಿನಿಂದ ಕಾದು ನೋಡುವಂತೆ ಮಾಡಿದೆ.

ಆಯಾ ಕಾಲಕ್ಕೆ ತನಗೆ ಸರಿಕಗಂಡದ್ದನ್ನು ಮಾಡುತ್ತಾ, ಅಭಿವ್ಯಕ್ತಿಸುತ್ತಾ ಬಂದಿರುವ ತೇಜಸ್ವಿ ತಮ್ಮ ಬರಹಗಳ ವೈವಿದ್ಯತೆ ಮತ್ತು ಜೀವಂತಿಕೆಯ ಕಾರಣಕ್ಕೆ ಅತ್ಯಂತ ಜನಪ್ರಿಯರೂ ಹೌದು.



ಅಧ್ಯಾಯ ಎರಡು

ತೇಜಸ್ವಿಯವರ ಸೃಷ್ಟಿಕ್ರಿಯೆಯ ಹಿಂದಿನ ಪ್ರೇರಣೆ ಮತ್ತು ತಾತ್ವಿಕತೆ





ಅಧ್ಯಾಯ ಎರಡು

ತೇಜಸ್ವಿಯವರ ಸೃಷ್ಟಿಕ್ರಿಯೆಯ ಹಿಂದಿನ ಪ್ರೇರಣೆ ಮತ್ತು ತಾತ್ವಿಕತೆ

ವಿಸ್ಮಯಕರ ವೈಜ್ಞಾನಿಕ ವಿಷಯಗಳನ್ನು ಕನ್ನಡದಲ್ಲಿ ತೇಜಸ್ವಿ ಮಾತ್ರ ತಮ್ಮ ಸೃಜನಶೀಲ ಬರವಣಿಗೆಯಲ್ಲಿ ಹಿಡಿದಿಡಲು ಸಾಧ್ಯ. ಅವರ ಕತೆಗಳಲ್ಲಿ ಬರುವ ಮನುಷ್ಯರ ಬದುಕು ಜೀವನವನ್ನು ತಮ್ಮ ನಿಸರ್ಗದ ಅನುಭವದಿಂದ ನೋಡಲು ಪ್ರಯತ್ನಿಸಿದ್ದಾರೆ. ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದ ಮನುಷ್ಯರನ್ನು ತಮ್ಮದೇ ಆದ ಶೈಲಿಯಲ್ಲಿ ನಿರೂಪಣೆ ಮಾಡಿ ಅವರ ಜೀವನ ವಿಧಾನಗಳನ್ನು ಅರ್ಥೈಸಲು ಪ್ರಯತ್ನಿಸಿದ್ದಾರೆ. ಅವರಿಂದ ಹೊಸ ವಿಷಯಗಳನ್ನು ಹೊರತರಲು ಹುಡುಕಾಟ ನಡೆಸಿದ್ದಾರೆ.

ಅವರಿಂದ ತಿಳಿದುಕೊಂಡ ಅನೇಕ ವಿಚಾರಗಳನ್ನು ತುಂಬಾ ಗಂಭೀರವಾಗಿ ಪರಿಗಣಿಸಿ ಅವುಗಳನ್ನು ತಾತ್ವಿಕ ಚೌಕಟ್ಟಿನಲ್ಲಿಟ್ಟು ನೋಡಿದರೂ, ಓದುಗರ ಮುಂದಿಡುವಾಗ ತಮ್ಮ ಎಂದಿನ ಹಾಸ್ಯ ಶೈಲಿಯ ದಾಟಿಯಲ್ಲಿ ತನ್ನ ಸುತ್ತಲಿನ ಲೋಕವನ್ನು ಜೀವನ ಪ್ರೀತಿಯಿಂದ ಕಂಡಿರುವುದು ವಿಶಿಷ್ಟವೆನಿಸುತ್ತದೆ.

ಅನೇಕರು ಇವರ ಕತೆಗಳನ್ನು ಗಂಭೀರವಾಗಿ ಪರಿಗಣಿಸಿದಷ್ಟು, ಕತೆಗಳಲ್ಲಿ ಬರುವ ಪಾತ್ರಗಳನ್ನು ಗಂಭೀರವಾಗಿ ನೋಡುವುದಿಲ್ಲ. ನಿರಾಕರಿಸಿದ್ದಾರೆ. ತೇಜಸ್ವಿಯವರು ಹೇಳುವ ವಿಷಯಗಳಲ್ಲಿನ ಹಿಂದಿನ ತಾತ್ವಿಕತೆಯನ್ನು ಸರಿಯಾಗಿ ಗ್ರಹಿಸುವುದಿಲ್ಲ. ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಿಲ್ಲ. ಕರ್ವಾಲೊ ಕಾದಂಬರಿಯಲ್ಲಿ ಬರುವ ಮಂದಣ್ಣನ ಪಾತ್ರವನ್ನು ಕೇವಲ ಹಾಸ್ಯಮಯವಾಗಿ ನೋಡುತ್ತಾರೆ. ಆದರೆ ತೇಜಸ್ವಿ ಮಂದಣ್ಣನ ಮೂಲಕವೇ ಅನಂತ ವಿಶ್ವಸೃಷ್ಟಿಯ ಅನೇಕ ರಹಸ್ಯಗಳನ್ನು ಅವನ ಅನುಭವದ ಜಗತ್ತಿನಿಂದ ಹೊರತರಲು ಪ್ರಯತ್ನಿಸಿದ್ದಾರೆ.

ಒಂದು ಸಂದರ್ಶನದಲ್ಲಿ ತೇಜಸ್ವಿ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆಯನ್ನು ಕೇಳಿದಾಗ, ಅದು ತಮ್ಮ ಎಂದಿನ ಶೈಲಿಯಲ್ಲೇ ಉತ್ತರಿಸಿದ್ದರು.



ನಾನು ಕತೆಯನ್ನು ಬರೆಯುವಾಗ ತುಂಬಾ ಗಂಭೀರವಾಗಿಯೇ ಬರೆದಿರುತ್ತೇನೆ. ಆದರೆ ಜನ ನಾನು ಹೇಳುವ ವಿಷಯದ ಹಿಂದಿನ ಉದ್ದೇಶವೇನೆಂಬುದನ್ನು ತಿಳಿದುಕೊಳ್ಳುವುದನ್ನು ಬಿಟ್ಟು, ಚಾರ್ಲಿಚಾಪ್ಲಿನ್ ಸಿನಿಮಾ ನೋಡೋ ಥರಾ ನೋಡಿ ಓದಿ, ತುಂಬಾ ತಮಾಶೆಯಾಗಿದೆ ಎಂದು ತುಂಬಾ ಲಘುವಾಗಿ ಕೂಡ ಅರ್ಥೈಸುವವರಿದ್ದಾರೆ.

ನಿಸರ್ಗವನ್ನು ತೇಜಸ್ವಿ ಕೇವಲ ಪರಿಸರವಾದಿಯ ಕಾಳಜಿಯಿಂದ ಕಂಡವರಲ್ಲ. ಸೃಷ್ಟಿಯ ರಹಸ್ಯಗಳನ್ನು ತಿಳಿಯಲು ಹೊರಡುವ ಲೇಖಕ ಎಂದಿಗೂ ಸರಳ ತೀರ್ಮಾನಗಳನ್ನು ಮಾಡಿ ಅವುಗಳ ಒಪ್ಪಂದಗಳಿಗೆ ಸಿಕ್ಕಿ ಬೀಳುವುದಿಲ್ಲ. ನಿಸರ್ಗದಲ್ಲಿ ಸಿಗುವ ವಿಚಾರಗಳಿಗೆ ಯಾವುದು ಮೊದಲು ಕೊನೆಯೆಂಬುದೇ ಇರುವುದಿಲ್ಲ ಎಂಬ ಸತ್ಯವನ್ನು ತಿಳಿದ ತೇಜಸ್ವಿ ತಮ್ಮ ವಿಚಾರಗಳನ್ನು ಬರಹದಲ್ಲಿ ತರುವ ಪ್ರಯತ್ನ ಮಾಡಿದ್ದಾರೆ.

ತೇಜಸ್ವಿ ಕೇವಲ ಪರಿಸರದ ಮೇಲಿನ ಕಾಳಜಿಯಿಂದ ಪರಿಸರ ವಿಜ್ಞಾನಿಯಾಗಿದ್ದರೆ, ಅವರು ಒಂದು ನಿರ್ಧಿಷ್ಟ ಸಾಮಾಜಿಕ ವ್ಯವಸ್ಥೆಯ ಚೌಕಟ್ಟಿನೊಳಗೆ ಬಂಧಿಯಾಗುತ್ತಿದ್ದರು. ಹೀಗಾಗಿದ್ದರೆ ಅದು ತೇಜಸ್ವಿಯವರ ವ್ಯಕ್ತಿತ್ವದ ಪ್ರವೃತ್ತಿಯನ್ನೇ ಬದಲಾಯಿಸಿಬಿಡುತ್ತಿತ್ತು. ಕಾರಂತರು ತಮ್ಮ ಜ್ಞಾನಾಸಕ್ತಿಯಿಂದ ಓದಿ ತಿಳಿದುಕೊಂಡು, ವಿಜ್ಞಾನದ ಬಗ್ಗೆ ಬರೆದರೆ, ತೇಜಸ್ವಿ ಒಬ್ಬ ವಿಜ್ಞಾನಿಯಂತೆ ಕುತೂಹಲ ವಹಿಸಿ ಅದರ ಬಗ್ಗೆ ಆಳವಾದ ಅಧ್ಯಯನ ನಡೆಸಿ ಮಾಹಿತಿ ಸಂಗ್ರಹಿಸಿ ಅದನ್ನು ಯಥಾಪ್ರಕಾರ ನಕಲು ಮಾಡದೆ, ತಮ್ಮ ಅನುಭವದ ಜೀವನದೃಷ್ಟಿಯಿಂದ ಹೊಸದಾಗಿ ಅಭಿವ್ಯಕ್ತಿಸಿದ್ದಾರೆ.

ಕನ್ನಡ ಭಾಷೆಯ ಸಂವಹನ ಸಾಧ್ಯತೆಯನ್ನು ವಿಸ್ತರಿಸಿದ್ದು ಸಾಧಾರಣ ಸಂಗತಿಯಲ್ಲ. ಅನುವಾದ ಎಂದರೆ ಕೇವಲ ಕಾವ್ಯ ಕತೆ ಕಾದಂಬರಿಗಳಿಗೆ ಸೀಮಿತವಾಗಿದ್ದನ್ನು ತಪ್ಪಿಸಿ ಸಮಾಜ ವಿಜ್ಞಾನಗಳ ಬೇರೆ ಬೇರೆ ನಿರೂಪಣೆಗಳನ್ನು ಕನ್ನಡದ ಅಂಗಳಕ್ಕೆ ತರುವ ಮೂಲಕ ನಮ್ಮ ಕಾಲದ ಅರಿವನ್ನು ತೇಜಸ್ವಿ ಹೆಚ್ಚಿಸಿದ್ದಾರೆ.

ವಿಜ್ಞಾನ ತಂತ್ರಜ್ಞಾನ ಮಾನವಿಕ ಶಾಸ್ತ್ರಗಳ ಗದ್ಯ ಹೇಗಿರಬೇಕು ಎಂಬುದಕ್ಕೆ ತೇಜಸ್ವಿಯವರು ರೂಪಿಸಿದ ಅನುಸೃಷ್ಟಿ ಬರಹಗಳನ್ನು ಗಮನಿಸಬೇಕು. ಬಹುಶಃ ಭಾರತದ ಯಾವ ಭಾಷೆಯಲ್ಲೂ ತೇಜಸ್ವಿಯವರಷ್ಟು ಗಾಢವಾಗಿ ಇಂತಹ ಪ್ರಾಥಮಿಕ ತಿಳುವಳಿಕೆಯ ಬರಹಗಳನ್ನು ಮಾಡಿಲ್ಲ ಎಂದು ಭಾವಿಸಬಹುದು. ಕಾರಂತರು ಈ ರೀತಿಯ ಪ್ರಯತ್ನವನ್ನು ಮೊದಲಿಗೆ ಮಾಡಿದ್ದರಾದರೂ ಅವರ ನಿರೂಪಣೆಗಳು ಈ ಕಾಲಕ್ಕೆ ಸೀಮಿತ ಮಾಹಿತಿಗಳೆನಿಸುತ್ತವೆ. ತೇಜಸ್ವಿ ಸ್ವಂತಿಕೆಯ ಬಲದ ಮೇಲೆ ಮನುಷ್ಯನ ನಾಗರೀಕತೆಯ ಎಲ್ಲಾ ಶೋಧದ ಕತೆಗಳನ್ನು ಅಚ್ಚರಿಯಾಗುವಂತೆ ನಮ್ಮೊಳಗೆ ಪ್ರತಿಧ್ವನಿಸುವಂತೆ ಮಾಡುತ್ತಾರೆ.



ತೇಜಸ್ವಿ ಸಮಾಜವನ್ನು ಗ್ರಹಿಸುತ್ತಿದ್ದ ರೀತಿ ಎಲ್ಲರಿಗಿಂತ ಭಿನ್ನ ಎಂದೇ ಹೇಳಬಹುದು. ಇಂದಿನ ಸಮಾಜದ ಎಲ್ಲಾ ವಿಷಯಗಳಿಗೂ ಅವರು ಸ್ಪಂದಿಸುತ್ತಿದ್ದ ರೀತಿ ಅವರ ವಿಚಾರ ನಿಲುವುಗಳು ತರ್ಕಾತೀತ. ಇದರಿಂದೆಲ್ಲಾ ಮೀರುವ ಎಚ್ಚರವನ್ನು ಅವರು ತಮ್ಮೊಳಗೆ ಹುದುಗಿಸಿಕೊಂಡಿದ್ದರಿಂದಲೇ ಎಲ್ಲಾ ಮಿತಿಗಳನ್ನು ದಾಟಿ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡರು.

ಇದರಿಂದಾಗಿಯೇ ತೇಜಸ್ವಿ ಕನ್ನಡ ಭಾಷೆಯ ಸಾಹಿತ್ಯವನ್ನು ಅಪಾರವಾಗಿ ವಿಸ್ತರಿಸಲು ಪ್ರಯತ್ನಿಸಿದ್ದಾರೆ. ಆದ್ದರಿಂದ ಇವರ ಬರವಣಿಗೆ ವಾಸ್ತವಕ್ಕೆ ಹತ್ತಿರವಾದುದು. ಹೇಳಬೇಕಾದ ವಿಷಯಗಳಲ್ಲಿ ಅದರ ಪರಿಣಾಮ ಮತ್ತು ಅದ್ಭುತ ಗ್ರಹಿಕೆಗಳಿರುತ್ತವೆ. ನಿಗೂಢ ಮನುಷ್ಯರು, ಕುಬಿ ಮತ್ತು ಇಯಾಲ ಕತೆಗಳಲ್ಲಿ ಕೆಲವೊಂದು ಅಂಶಗಳನ್ನು ಗಮನಿಸಬಹುದು.

ಕಿರಗೂರಿನ ಗಯ್ಯಾಳಿಗಳು ಕಥಾಸಂಕಲನದ ನಿರೂಪಣೆ ಇದಕ್ಕೆ ಒಳ್ಳೆಯ ಉದಾಹರಣೆ. ವಾಸ್ತವದ ವಿವರಗಳ ಮೂಲಕ ಕಥೆ ಹೆಣೆಯಲ್ಪಟ್ಟಿದೆ. ಈ ಕತೆಗಳಲ್ಲಿ ತೇಜಸ್ವಿಯವರ ಫ್ಯಾಂಟಸಿ, ನಿರೂಪಣಾ ವಿಸ್ಮಯ ಶೈಲಿ, ಮಾಂತ್ರಿಕ ಭಾಷೆ ಎಲ್ಲವನ್ನು ಒಂದೇ ಸಾರಿ ಗಮನಿಸಬಹುದು. ಕತೆಯಲ್ಲಿ ಎಲ್ಲಾ ಅಂಶಗಳು ಒಂದೇ ಸಾರಿ ಪ್ರವೇಶ ಮಾಡುತ್ತವೆ. ಭಾವನೆಗಳು ತೆರೆದುಕೊಳ್ಳುತ್ತವೆ. ಸೀಮಿತ ಅರ್ಥಕ್ಕೆ ನಿಲ್ಲುವುದಿಲ್ಲ. ಸಾಮಾಜಿಕ ನಿರೂಪಣೆಗಳ ಗದ್ದಲದಿಂದ ಮರೆಗೆ ಸರಿದ ತೇಜಸ್ವಿ ನಿಗೂಢ ಮೌನದಲ್ಲಿ ಮನುಷ್ಯನ ಸಾಧ್ಯತೆಯನ್ನು ಕಂಡುಕೊಂಡವರು. ತೇಜಸ್ವಿಯವರ ಸೃಜನಶೀಲ ಬರವಣಿಗೆಯ ಶಕ್ತಿ ಅವರ ಸ್ವಂತಿಕೆಯಿಂದ ರೂಪಿಸಿಕೊಂಡಿದ್ದು ಎಂದರೆ ತಪ್ಪಾಗಲಾರದು. ಏಕೆಂದರೆ ಯಾವೊಬ್ಬ ಲೇಖಕರು ಅವರನ್ನು ಪ್ರಭಾವಿಸಲು ಸಾಧ್ಯವಿರಲಿಲ್ಲ.

ತನ್ನ ಸೃಜನಶೀಲ ಬರವಣಿಗೆಗೆ ಕುವೆಂಪು, ಕಾರಂತ ಸ್ಫೂರ್ತಿ ಎಂದು ಅವರೇ ಹೇಳಿಕೊಂಡಿದ್ದಾರೆ. ಆದರೆ ಅವರಿಂದ ಪಡೆದುಕೊಂಡಿದ್ದು ಅಲ್ಪ ಮಾತ್ರ. ಅವರು ಸಾಹಿತ್ಯ ವಿಚಾರಗಳ ತರ್ಕಕ್ಕೆ ಎಂದೂ ಬದ್ಧರಾಗಿರಲಿಲ್ಲ. ತೇಜಸ್ವಿಯವರ ಬರವಣಿಗೆಗಳಲ್ಲಿ ಹೊಸ ಒಳನೋಟಗಳನ್ನು ಹುಡುಕಬೇಕು ಎಂಬುದು ಪ್ರಶ್ನೆಯಲ್ಲ. ಯಾಕೆಂದರೆ ಅವರ ಒಟ್ಟು ಸಾಹಿತ್ಯಿಕ ಹಾಗೂ ವೈಚಾರಿಕ ಬರವಣಿಗೆಯಲ್ಲಿ ವ್ಯಕ್ತವಾಗುವ ಧೋರಣೆಯೇ ಅತ್ಯಂತ ಹೊಸತನದಿಂದ ಕೂಡಿದ್ದಾಗಿದೆ.

ಅವರ ಸೈದ್ಧಾಂತಿಕ ಮತ್ತು ವೈಚಾರಿಕತೆಯಲ್ಲಿ ಗೊಂದಲವಿಲ್ಲ; ದ್ವಂದ್ವವಿಲ್ಲ; ಸ್ಪಷ್ಟತೆ ಇದೆ. ನೇರ ಹಾಗೂ ಸರಳ ನಿರೂಪಣೆ ಇದೆ. ಕಾದಂಬರಿಗಳಲ್ಲಿ ವ್ಯಕ್ತವಾಗುವ ಭಾವದಲ್ಲಿ ಅವರ ತಾಜಾತನದ ದಟ್ಟ ಅನುಭವವಿದೆ. ಗ್ರಹಿಕೆಯು ಹೊಸತನದಿಂದ ಕೂಡಿದೆ.[9]



ಜನರಿಗೆ ಪರಿಸರದ ಬಗ್ಗೆ ಒಂದು ರೀತಿಯ ಪ್ರತಿಸ್ಪಂದನೆಯ ಭಾವನೆಯನ್ನು ಉಂಟುಮಾಡುವುದೇ ಪರಿಸರದ ಕಥೆಗಳು ಪುಸ್ತಕದ ಉದ್ದೇಶ. ಇದಕ್ಕಾಗಿ ತೇಜಸ್ವಿ ಕಥೆಯನ್ನು ತೋರುವ ಪ್ರಸಂಗಗಳನ್ನು ಸನ್ನಿವೇಶಗಳನ್ನು ವ್ಯಕ್ತಿಚಿತ್ರಗಳನ್ನು ಉಪಯೋಗಿಸಿಕೊಂಡು ಅವುಗಳ ಮೂಲಕ ಕತೆಗಳನ್ನು ಹೇಳುತ್ತಾ ಹೋಗುತ್ತಾರೆ. ಈ ಕತೆಗಳಲ್ಲಿ ಗಿಡ ಬೇರೆ ಅಲ್ಲ. ಪ್ರಾಣಿ ಬೇರೆ ಅಲ್ಲ. ಅವರೆಲ್ಲರೂ ಒಂದೇ ಕತೆಯ ಸನ್ನಿವೇಶದ ಅಷ್ಟೇ ಏಕೆ ಜೀವನ ಸನ್ನಿವೇಶದ ಅಭಿನ್ನ ಭಾಗಗಳಾಗಿದ್ದಾರೆ.[೨]

ಪರಿಸರದ ಕತೆ ಪುಸ್ತಕವನ್ನು ಒಂದು ನಿರ್ದಿಷ್ಟ ಸಾಹಿತ್ಯ ಪ್ರಕಾರಕ್ಕೆ ಹೋಲಿಸುವುದು ಕಷ್ಟಕರ. ಅದನ್ನು ಕಥೆಗಳೆಂದು, ಪ್ರಬಂಧಗಳೆಂದು ಲೇಖಕರ ಆತ್ಮಚರಿತ್ರೆ ಎಂದು ಪರಿಗಣಿಸಿ ಓದಬಹುದು. ತೇಜಸ್ವಿಯವರ ಸೃಷ್ಟಿಶೀಲ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಬೇಕೆನಿಸಿದರೆ, ವ್ಯಕ್ತಿವಿಶಿಷ್ಟ ಸಿದ್ಧಾಂತ ೧೯೬೪ ಹೊಸದಿಗಂತದ ಕಡೆಗೆ ೧೯೭೧ ಇನ್ನು ಕೆಲವು ವಿಮರ್ಶಾ ಬರಹಗಳನ್ನು ಗಮನಿಸಬೇಕು. ಸೃಷ್ಟಿ, ಸಾವು, ಪ್ರೇಮ, ಪ್ರಣಯ, ಮದುವೆ, ಸಾಹಿತ್ಯ, ಸಂಸ್ಕೃತಿ, ಸಮಾಜ ಇತ್ಯಾದಿಗಳ ಬಗ್ಗೆ ಈ ಬರಹಗಳಲ್ಲೆಲ್ಲಾ ಅವರು ತಮ್ಮದೇ ಆದ ವ್ಯಕ್ತಿವಿಶಿಷ್ಟವಾದ ಸಿದ್ಧಾಂತ, ತತ್ವಗಳನ್ನು ಮಂಡಿಸುತ್ತಾರೆ. ಈ ತತ್ವಗಳನ್ನು ಪರಿಶೀಲಿಸಲು ತಮ್ಮದೆ ಆದ ಸೃಜನಶೀಲ ಕಥೆ, ನಾಟಕ, ಕಾದಂಬರಿಗಳನ್ನು ಪ್ರಾಯೋಗಿಕ ನೆಲೆಗಳನ್ನಾಗಿ ಮಾಡಿಕೊಳ್ಳುತ್ತಾರೆ. ತಮ್ಮ ಈ ಕೃತಿಗಳನ್ನು ತಮ್ಮ ತತ್ವಗಳನ್ನು ಅರ್ಥೈಸಲು ಅವುಗಳ ವಸ್ತುಗಳನ್ನು ಒಮ್ಮೊಮ್ಮೆ ಅತಿರೇಕದ ಅಂಚಿನವರೆಗೂ ಒಯ್ಯುವುದನ್ನು ಕಾಣಬಹುದು. ಸೃಷ್ಟಿಶೀಲ ಬರಹಗಾರ ಅನೇಕ ವೇಳೆ ತನ್ನ ಸಿದ್ಧಾಂತ, ತತ್ವ, ತರ್ಕ ಇತ್ಯಾದಿಗಳ ಇತಿಮಿತಿಗಳನ್ನು ತಿಳಿಯಲು ಈ ಅತಿರೇಕದ ಗ್ರಹಿಕೆ ಅನಿವಾರ್ಯ ಎನ್ನುತ್ತಾರೆ. ಮತ್ತು ಈ ರೀತಿ ಮಿತಿಮೀರಿಯೆ ಮಿತಿಯನ್ನು ಅರಿಯಬೇಕಾದ ಅನಿವಾರ್ಯತೆ ಎಲ್ಲಾ ಸೃಷ್ಟಿಶೀಲ ಕಲಾವಿದರಿಗೆ ಅನಿವಾರ್ಯ ಎಂದೂ ಅವರು ಹೇಳುತ್ತಾರೆ. ಸೃಷ್ಟಿ, ಸಾವು, ಕಾಮ, ಮದುವೆ, ಪ್ರೇಮ, ಪ್ರಕೃತಿ, ಬದುಕು ಇತ್ಯಾದಿಗಳ ಬಗ್ಗೆ ತೇಜಸ್ವಿಯವರು ತಮ್ಮದೆಯಾದ ವಿಶಿಷ್ಟ ತಾತ್ವಿಕತೆಯನ್ನು ಹೊಂದಿದ್ದಾರೆ. ಅವರ ಪ್ರಕಾರ ಬರೆಯುವುದು ಎಂದರೆ ಸೃಷ್ಟಿಸೋದು.

ತೇಜಸ್ವಿ ತಮ್ಮ ಭೌದ್ಧಿಕ ಮತ್ತು ಸೃಜನಶೀಲ ಪ್ರೇರಣೆಗಳನ್ನು ದೈನಂದಿನ ಬದುಕಿನ ಪರಿಸರದಿಂದ ನೇರವಾಗಿ ಪಡೆದುಕೊಳ್ಳುತ್ತಾರೆ. ಬಹುಮುಖಿ ಓದಿನಿಂದ ಪಡೆದ ಆಳವಾದ ಜ್ಞಾನವನ್ನು ಬದುಕಿನ ಅವಲೋಕನದಿಂದ ಪಡೆದ ಅನುಭವವನ್ನು ಕಸಿ ಮಾಡಿ ತಮ್ಮ ಬರವಣಿಗೆಯನ್ನು ಹೊಸದೊಂದು ಲಯದಲ್ಲಿ ರೂಢಿಸಿಕೊಂಡಿದ್ದಾರೆ. ಯಾವುದನ್ನು ಏಕಮುಖವಾಗಿ ಆರಾಧಿಸದ ಇಲ್ಲವೆ ತಿರಸ್ಕರಿಸದೆ, ಎಲ್ಲವನ್ನು ಸಮಗ್ರವಾಗಿ ಇಡಿಯಾಗಿ ಹಿಡಿಯಲು ತೇಜಸ್ವಿ ಮಾಡುವ ಯತ್ನ ಅವರ ಬರವಣಿಗೆಯ ಸ್ವರೂಪಕ್ಕೆ ಮಾದರಿಯಂತಿದೆ.



ಅರ್ಥಕ್ಕೆ ಸಿಗದ ಒಂದು ವ್ಯವಸ್ಥೆಯಲ್ಲಿನ ಮನುಷ್ಯನ ಪಾಡನ್ನು ಧ್ಯಾನಿಸುವ, ತತ್ವಶಾಸ್ತ್ರಕ್ಕೆ ಸಮೀಪದ ಚಿಂತನೆ ನಡೆಸುವ ಜಾಡಿನಲ್ಲಿ ತೇಜಸ್ವಿ ನಮ್ಮ ಕಾಲದ ಬಹುದೊಡ್ಡ ಅಸಂಗತ ಲೇಖಕರಂತೆ ಕಂಡುಬರುತ್ತಾರೆ. ಅಸಂಗತತೆ ಎಂಬುದನ್ನು ಒಂದು ತತ್ವವಾಗಿ ಗ್ರಹಿಸಿದಾಗ ಹುಟ್ಟುವ ಕಾಣ್ಕೆಯೇ ತೇಜಸ್ವಿ ಜೀವನದರ್ಶನದ ಪ್ರಮುಖ ಅಂಶ. ಅದು ಸೃಷ್ಟಿಯ ನಿಗೂಢತೆ ಮತ್ತು ಯಾವುದೇ ವ್ಯವಸ್ಥೆಗೆ ಸುಲಭವಾಗಿ ಹೊಂದಿಸಲಾಗದ ಬಹುರೂಪ ವ್ಯೂಹದೊಳಗೆ ಮನುಷ್ಯ ಚಟುವಟಿಕೆಗಳ ಸೀಮಿತತೆಯನ್ನು ಅರಿಯುವ ಯತ್ನ.

ತೇಜಸ್ವಿ ಮನುಷ್ಯನ ಪ್ರಯತ್ನಗಳನ್ನು ಅವುಗಳ ಇತಿಮಿತಿಗಳಲ್ಲಿ ಚಿತ್ರಿಸುತ್ತಾರೆಯೇ ಹೊರತು ಅವುಗಳನ್ನು ಸಿನಿಕತನದಿಂದ ನೋಡುವುದಿಲ್ಲ. ಇದೇ ಸತ್ಯ, ಇದೇ ಅರ್ಥ ಎಂಬ ಅಹಂಕಾರವನ್ನು ಮಾತ್ರ ಖಂಡಿಸುತ್ತಾರೆ. ಜೀವನವನ್ನು ಕುರಿತ ಜಿಜ್ಞಾಸೆ ಅಂತಿಮವಾಗಿ ನಮ್ಮನ್ನು ಜೀವನ ವಿಮುಖರನ್ನಾಗಿ ಮಾಡಬಾರದು. ಹಾಗೆಯೇ ನಮ್ಮ ಚಟುವಟಿಕೆಗಳೇ ಏಕಮಾತ್ರ ಸತ್ಯವೆಂಬ ಭ್ರಮೆಯಲ್ಲಿ ಜೀವನದ ಅಗಾಧತೆ ಮತ್ತು ವೈಶಾಲ್ಯಗಳು ನಮ್ಮ ಕಣ್ಣು ತಪ್ಪಿ ಹೋಗಬಾರದು. ಜೀವನದ ಅರ್ಥ ಅದನ್ನು ಶೋಧಿಸುವವರ ವೈಯಕ್ತಿಕ, ಸಾಮಾಜಿಕ, ರಾಜಕೀಯ ಮತ್ತು ಐತಿಹಾಸಿಕ ಸಂದರ್ಭಗಳಿಗೆ ಸಾಪೇಕ್ಷವಾಗಿರಬಹುದು ಎಂಬ ವಿನಯ ಅತಿ ಮುಖ್ಯ.

ನವ್ಯ ಸಾಹಿತ್ಯ ಮತ್ತು ವಿಮರ್ಶೆ, ಕೃತಿಯ ಕೇಂದ್ರದ ಬಗ್ಗೆ ವಿಶೇಷ ಒತ್ತು ನೀಡುತ್ತಾ ಜೀವನದ ಎಲ್ಲಾ ಸಂಗತಿಗಳನ್ನು ಒಂದು ಕೇಂದ್ರಕ್ಕೆ ಬಂಧಿಸುವ ವ್ಯರ್ಥ ಪ್ರಯತ್ನವೆಂಬ ಅಭಿಪ್ರಾಯ ಬಹುಶಃ ತೇಜಸ್ವಿಯವರನ್ನು ಹೊಸ ತಾತ್ವಿಕ ಹೋರಾಟವೊಂದಕ್ಕೆ ಅಣಿಗೊಳಿಸಿದೆ. ಕೃತಿಯೊಂದಕ್ಕೆ ಒಂದೇ ಕೇಂದ್ರವಿರಬೇಕೆಂದಿಲ್ಲ. ಅಥವಾ ಒಂದೇ ಅರ್ಥವಿರಬೇಕೆಂದಿಲ್ಲ. ಹಲವು ಬಗೆಯ ಓದುಗಳು ಕೃತಿಗೂ ಹಲವು ನೆಲೆಯ ಕಾಣ್ಕೆಗಳು ಬದುಕಿಗೂ ಅನ್ವಯ ಎಂದು ಭಾವಿಸಿದ ಕೂಡಲೇ ಗ್ರಹಿಕೆಯ ವಿಧಾನ ಮತ್ತು ಅಭಿವ್ಯಕ್ತಿಯ ಸ್ವರೂಪಗಳೇ ಬದಲಾಗಿ ಹೋಗುತ್ತವೆ.

ಅಬಚೂರಿನ ಪೋಸ್ಟಾಫೀಸು ಸಂಕಲನದ ಕತೆಗಳಲ್ಲಿ, ತೇಜಸ್ವಿಯವರ ಈ ಹಿಂದಿನ ಬರಹಗಳಿಗೆ ಹೋಲಿಸಿದಾಗ ಮತ್ತೊಂದು ಪ್ರಮುಖ ಬದಲಾವಣೆ ಕಂಡುಬರುತ್ತದೆ. ಹುಲಿಯೂರಿನ ಸರಹದ್ದು, ಸ್ವರೂಪ, ನಿಗೂಢ ಮನುಷ್ಯರು ಯಮಳ ಪ್ರಶ್ನೆಗಳಂತಹ ಕೃತಿಗಳಲ್ಲಿ ಸಾಮಾಜಿಕ ಅಥವಾ ಸಾಂಸ್ಕೃತಿಕ ಪರಿಸರ ಅಷ್ಟಾಗಿ ಮುಖ್ಯವಾಗುವುದಿಲ್ಲ. ಒಂದು ರೀತಿಯಲ್ಲಿ ಅವು ಶುದ್ಧ ಮಾನವೀಯ ಕಥನಗಳು, ಸ್ವರೂಪ ಮತ್ತು ನಿಗೂಢಮನುಷ್ಯರು ರಚನೆಗಳಿಗೆ ಕಾಲ ದೇಶಗಳ ಹಂಗು ಕೂಡ ಇಲ್ಲ. ಆದರೆ, ಅಬಚೂರಿನ ಪೋಸ್ಟಾಫೀಸು ಸಂಕಲನದಲ್ಲಿ ಇತಿಹಾಸವೂ ನಿರ್ಣಾಯಕ ಪ್ರವೇಶ ಮಾಡಿದೆ. ಮನುಷ್ಯನ ಸಾಮಾಜಿಕ,



ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಮೂಲಗಳನ್ನು ಇಲ್ಲಿನ ಕತೆಗಳು ಶೋಧಿಸ ಹೊರಡುತ್ತವೆ. ಆಧುನಿಕತೆಯ ಪ್ರವೇಶದಿಂದಾಗಿ ನಮ್ಮ ಗ್ರಾಮೀಣ ಬದುಕಿನಲ್ಲಾದ ಪಲ್ಲಟಗಳ ಸಾಂಸ್ಕೃತಿಕ ಕಥನಗಳನ್ನಾಗಿಯೂ ಇದನ್ನು ಅಭ್ಯಾಸ ಮಾಡಬಹುದು. ಕಾಲದ ಸ್ಥಿತ್ಯಂತರದಲ್ಲಿ ಇಲ್ಲಿನ ಪಾತ್ರಗಳು ಎದುರಿಸಿದ ಹೊಸ ಆತಂಕಗಳು ಮತ್ತು ಆಘಾತಗಳು ಕೇವಲ ಅವರ ಬದುಕಿನ ವ್ಯಕ್ತಿ ವಿಶಿಷ್ಟ ಅನುಭವಗಳಲ್ಲಿ ಪಡಿಮೂಡಿದವುಗಳಾಗಿವೆ. ಅವು ನಿರ್ಧಿಷ್ಟ ಸಾಮಾಜಿಕ ವರ್ಗಗಳ ಸಾಮಾನ್ಯ ಸತ್ಯಗಳೂ ಹೌದು. ಇಷ್ಟಾದರೂ ತೇಜಸ್ವಿ ಈ ಹಂತದ ಬರವಣಿಗೆಯಲ್ಲಿ ಮನುಷ್ಯನ ಸಾಮಾಜಿಕ ಲೋಕದಾಚೆಗಿನ ವಿಶಾಲ ವಾಸ್ತವದ ಆಯಾಮವನ್ನು ಕಡೆಗಣಿಸಿಲ್ಲ.

ಭೌತಪ್ರಪಂಚವೊಂದೇ ವಾಸ್ತವವೆಂದು ಅವರು ಯಾವತ್ತು ನಂಬಿಲ್ಲ. ತೇಜಸ್ವಿ ತಮ್ಮ ಕಥನಗಳಲ್ಲಿ ವಿಧಿ, ಕರ್ಮಜ್ಞಾನ, ಹಣೆಬರಹ, ಗ್ರಹಗತಿ ಮುಂತಾದ ಪದಗಳನ್ನು ಮತ್ತೆ ಮತ್ತೆ ಬಳಸುತ್ತಾರೆ. ಆದರೆ ಇಂಥ ಪದಗಳಿಗೆ ಯಾವುದೇ ನಿರ್ಧಿಷ್ಟ ಮತ ಧರ್ಮದ ಸೋಂಕು ಇಲ್ಲದಿರುವುದು ಗಮನಾರ್ಹ. ಈ ದೃಷ್ಟಿಯಿಂದ ನೋಡಿದಾಗ ತೇಜಸ್ವಿ ಬರವಣಿಗೆ ಕೇವಲ ಮನುಷ್ಯ ಕೇಂದ್ರವಲ್ಲ ಎನಿಸುತ್ತದೆ. ಮನುಷ್ಯನ ಎಲ್ಲ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೂ ಅವರು ಮನುಷ್ಯನನ್ನೇ ಸೃಷ್ಟಿಯ ಕೇಂದ್ರವೆಂಬಂತೆ ನೋಡುವುದಿಲ್ಲ ಎಂಬುದೇ ಕುತೂಹಲಕಾರಿ.[೫]

ಅಬಚೂರಿನ ಪೋಸ್ಟಾಫೀಸು, ಕುಬಿ ಮತ್ತು ಇಯಾಲ, ಕಿರಗೂರಿನ ಗಯ್ಯಾಳಿಗಳು, ಕೃಷ್ಣೇಗೌಡನ ಆನೆ, ಕರ್ವಾಲೊ, ಚಿದಂಬರ ರಹಸ್ಯ ಮುಂತಾದ ಕೃತಿಗಳಲ್ಲಿ ಆಡಳಿತ ವ್ಯವಸ್ಥೆಯ ದಾರುಣ ಚಿತ್ರಗಳು ಕಂಡುಬರುತ್ತವೆ. ಆದರೆ ಈ ಚಿತ್ರಗಳು ಒಟ್ಟಾರೆ ಇಡೀ ಸೃಷ್ಟಿಯ ಅಸಂಗತ, ಅಸಂಬದ್ಧ ವಿನ್ಯಾಸದ ಒಳಗೆ ಮೂಡಿಬರುವುದರಿಂದ ಅವು ಸಾಮಾನ್ಯ ಸಾಮಾಜಿಕ ರಾಜಕೀಯ ಟೀಕೆಗಳನ್ನು ಮೀರಿದ ಆಯಾಮಗಳನ್ನು ದಕ್ಕಿಸಿಕೊಳ್ಳುತ್ತವೆ. ಅಂದರೆ ತೇಜಸ್ವಿ ತಮ್ಮ ಅವಲೋಕನಗಳನ್ನು ಏಕಕಾಲದಲ್ಲಿ ಕಾಲ ದೇಶಗಳ ಚೌಕಟ್ಟಿನಲ್ಲೂ ಕಾಲಾತೀತ ದೇಶಾತೀತ ಆಯಾಮಗಳಲ್ಲೂ ಕಾಣಿಸಲು ಯತ್ನಿಸುತ್ತಾರೆ ಮೇಲ್ನೋಟಕ್ಕೆ ಅಪರಿಚಿತವೂ, ಅನೂಹ್ಯವೂ, ಅಸಂಬದ್ಧವೂ, ಅಸ್ಪಷ್ಟವು ಆದ ಮನುಷ್ಯನ ಅವಸ್ಥೆಯನ್ನು ಮನುಷ್ಯನೂ ಒಂದು ಭಾಗವಾಗಿರುವ ವಿಶ್ವಾತ್ಮಕ ವ್ಯವಸ್ಥೆಯ ಸ್ವರೂಪವನ್ನು ಕಂಡುಕೊಳ್ಳುವುದು ತೇಜಸ್ವಿ ಬರವಣಗೆಯ ಬೃಹತ್ ಆಶಯ ಎನಿಸುತ್ತದೆ.

ತೇಜಸ್ವಿ ಜಗತ್ತಿನಲ್ಲಿ ದೇವರಿಲ್ಲ. ದೇವರಿಲ್ಲದ ಜಗತ್ತಿನಲ್ಲಿ ಮತಧರ್ಮದ ಸೋಂಕಿಲ್ಲದ ಆಧ್ಯಾತ್ಮಿಕ ಶೋಧ ತೇಜಸ್ವಿ ಬರವಣಿಗೆಯ ಪ್ರಮುಖ ಲಕ್ಷಣ. ಹಾಗೆಂದು ಅವರು ಮತಧರ್ಮಗಳಿಗೆ ಪರ್ಯಾಯವಾಗಿ



ಆಧುನಿಕ ವಿಜ್ಞಾನವನ್ನು ಕೂಡ ಶ್ರೇಷ್ಟವೆಂದು ಪರಿಭಾವಿಸುವುದಿಲ್ಲ. ಏಕೆಂದರೆ, ಮತ ಧರ್ಮಗಳನ್ನು ವಿಮರ್ಶಿಸುವಂತ ಅವರು ವಿಜ್ಞಾನವನ್ನು ಸಹ ವಿಮರ್ಶಿಸುತ್ತಾರೆ.[೪]

ವಿಜ್ಞಾನ್ನ, ಧರ್ಮ, ಪಟ್ಟಣ, ಗ್ರಾಮ, ಬ್ರಾಹ್ಮಣ ಶೂದ್ರ, ಪಶ್ಚಿಮ ಪೂರ್ವ, ಇಂಗ್ಲಿಷ್ ಕನ್ನಡ.... ಇಂಥ ದ್ವಿದಳ ವಿಭಜನೆಯ ಮಾರ್ಗದಲ್ಲಿ ಅವರಿಗೆ ಆಸಕ್ತಿ ಇದ್ದಂತಿಲ್ಲ ಇವೆಲ್ಲದರಿಂದ ಸಂಶ್ಲೇಷಣೆಗೊಂಡ ಹೊಸ ಬದುಕಿನ ಕಾಣ್ಕೆಯತ್ತ ಅವರು ದೃಷ್ಟಿಹರಿಸುತ್ತಾರೆ.

ತೇಜಸ್ವಿ ವಿಜ್ಞಾನವನ್ನು ಮೆಚ್ಚಿಕೊಳ್ಳುವುದು ಅದು ಎಲ್ಲ ಸಂದೇಹಗಳಿಗೂ ಉತ್ತರ ನೀಡುತ್ತದೆ ಎಂಬ ಕಾರಣಕ್ಕಾಗಿ ಅಲ್ಲ. ಬದಲಿಗೆ ವಿಜ್ಞಾನ ಎಲ್ಲ ಸಂದೇಹಗಳಿಗೂ ಯಾವಾಗಲೂ ತೆರೆದುಕೊಂಡಿರುತ್ತದೆ ಎಂಬ ಮುಕ್ತ ನೆಲೆಗಾಗಿ, ಅದಕ್ಕೆಂದೇ ಅವರು ತಮ್ಮ ಅನ್ವೇಷಣೆಗೆ ವಿಜ್ಞಾನದ ತಳಹದಿಯನ್ನು ಬಳಸಿಕೊಳ್ಳುವುದು. ಆದರೆ ವಿಜ್ಞಾನವನ್ನು ಅವರು ಪಥವಾಗಿ ಮಾತ್ರ ಸ್ವೀಕರಿಸುತ್ತಾರೆ. ಪಂಥವಾಗಿ ಅಲ್ಲ. ಸಾಂಸ್ಥಿಕವಾಗಿ ಅಧಿಕಾರ ಲಾಲಸೆ, ಜಡತ್ವ ನೌಕರಶಾಹಿಯ ನೀಚತನಗಳನ್ನು ಅದು ಹುಟ್ಟುಹಾಕಬಹುದು ಎಂಬ ಆತಂಕ ಮತ್ತು ಎಲ್ಲವನ್ನೂ ತೆರೆದ ಕಣ್ಣಿನಿಂದ ನೋಡುತ್ತ ವಿಸ್ಮಯವನ್ನು ಜೀವಂತವಾಗಿ ಇಡುವ ವಿಜ್ಞಾನವೇ ಸಮಾಜವನ್ನು ನಿಯಂತ್ರಿಸುವ ಕರಾಳ ನೆಲೆಗಳನ್ನು ತಲುಪಿಬಿಡಬಹುದು ಎಂಬ ಅನುಮಾನಗಳು ಇದಕ್ಕೆ ಕಾರಣ.[೫]

ಸಮಕಾಲೀನ ಮನುಷ್ಯ ನಾಗರೀಕತೆಯ ಸಂಕೀರ್ಣ ವ್ಯಾಪಾರಗಳ ಬಗ್ಗೆ ಓದುಗನನ್ನು ಜಾಗೃತಗೊಳಿಸಿಯೂ ತೇಜಸ್ವಿ ಬರವಣಿಗೆ ಮನುಷ್ಯನ ಎಲ್ಲ ಬೌದ್ಧಿಕ ಅಹಂಕಾರ ಮತ್ತು ವಿಶ್ಲೇಷಣೆಗಳ ಮಿತಿಯನ್ನು ವಿನಯ ಪೂರ್ವಕ ಮಂಡಿಸುತ್ತದೆ.

ಮನುಷ್ಯನ ಕ್ರಿಯಾಶೀಲತೆಯನ್ನು ಅದರೆಲ್ಲಾ ಮಿತಿಗಳೊಡನೆ ಮೆಚ್ಚುತ್ತದೆ. ಗೌರವಿಸುತ್ತದೆ.

ಈ ಜಗತ್ತನ್ನು ಬದಲಾಯಿಸಲು ನಮಗೆ ಸಾಧ್ಯವಿಲ್ಲದಿರಬಹುದು, ಆದರೆ, ಅದನ್ನು ಅರಿಯುವುದೇ ಮನುಷ್ಯನ ಎಲ್ಲ ಕ್ರಿಯೆಗಳ ನಿಜವಾದ ಪ್ರಯತ್ನ ಎಂದು ಅವರು ಭಾವಿಸಿರುವಂತಿದೆ.

ಪರಿಸರ ಅಂದಾಕ್ಷಣ ಕೇವಲ ಗಿಡ ಮರ ಪ್ರಾಣಿ ಪಕ್ಷಿಗಳಷ್ಟೆ ಅಲ್ಲ ಇಲ್ಲಿ ಸಾಮಾಜಿಕ ಪರಿಸರವಿದೆ. ಒಂದು ನೈಸರ್ಗಿಕ ಪರಿಸರವಿದೆ. ಬೌದ್ಧಿಕವಾದ ಪರಿಸರವೂ ಇದೆ. ಈ ಕಾರಣದಿಂದ ತೇಜಸ್ವಿ ಅವರ ಸಾಹಿತ್ಯದ ಕೇಂದ್ರ ಪ್ರಜ್ಞೆ ಈ ಪರಿಸರ. ಪರಿಸರವೆಂದರೆ ಕೇವಲ ಪರಿಸರವಾದಿ ಚಳವಳಿ ಮರ ಗಿಡ ಬೆಟ್ಟ ಗುಡ್ಡ ಪ್ರಾಣಿ ಪಕ್ಷಿ ಅಷ್ಟೇ ಅಲ್ಲ. ಅದರೊಟ್ಟಿಗೆ ಇರುವ ಅಖಂಡವಾದ ಈ ಜಗತ್ತು. ಅದರೊಳಗಿರುವ



ಮನುಷ್ಯರು ಅವರ ಆಲೋಚನಾ ಕ್ರಮಗಳು ಮಾಡುವ ರಾಜಕಾರಣ, ಅವರು ನಡೆಸುವ ಸರ್ಕಾರ, ಅವರು ಪರಿಸರದ ಮೇಲೆ ಉಂಟುಮಾಡುವ ಪರಿಣಾಮ, ಈ ಎಲ್ಲವನ್ನು ಪ್ರಚೋದಿಸುವುದು ಅವರ ಮನಸ್ಸಿನೊಳಗೆ ಅಂತರ್ಗತವಾಗಿರುವುದು ಈ ಪರಿಸರದ ವಿಸ್ಮಯ.”

ಪರಿಸರದ ವಿಷಯದಲ್ಲಿ ಕುವೆಂಪು ಮತ್ತು ತೇಜಸ್ವಿಯವರಿಗೂ ಇರುವ ವ್ಯತ್ಯಾಸವೆಂದರೆ, ಕುವೆಂಪು ಪರಿಸರವನ್ನು ನೋಡಿ ದಿಗ್ಭ್ರಮೆಗೊಂಡು ಆಧ್ಯಾತ್ಮಿಕದ ಕಡೆಗೆ ಹೋಗಿಬಿಡುತ್ತಾರೆ. ತೇಜಸ್ವಿ ಅವರು ಅದಕ್ಕೊಂದು ಪರ್ಯಾಯ ವ್ಯತ್ಯಾಸವನ್ನು ಸೃಷ್ಟಿಸುತ್ತಾರೆ. ಆಧ್ಯಾತ್ಮಿಕರಣ ಎಲ್ಲೋ ಒಂದೆಡೆಗೆ ಧರ್ಮ ಮತ್ತು ಜಾತಿ ಈ ವ್ಯವಸ್ಥೆಗಳ ಜೊತೆಗೆ ತುಳಕು ಹಾಕಿಕೊಂಡಿರುವುದರಿಂದ ಮತ್ತು ವೈಜ್ಞಾನಿಕ ಮನಸ್ಸೆಂದು ಕುವೆಂಪು ಹೇಳಿದರೂ ಕೂಡ ಆಧ್ಯಾತ್ಮಿಕತೆಯ ಮೂಲಕ ಮೌಢ್ಯಕ್ಕೆ ಕಾರಣ ಆಗುತ್ತದೆ ಅನ್ನುವುದನ್ನು ಗುರುತಿಸಿಕೊಂಡರು. ಆದ್ದರಿಂದಲೇ ತೇಜಸ್ವಿ ಅವರು ಕುವೆಂಪು ಅವರ ವೈಚಾರಿಕ ಚಿಂತನೆಗಳನ್ನೆಲ್ಲಾ ಕಲಾಸೃಷ್ಟಿ ಎಂದು ಮಾತ್ರ ತೆಗೆದುಕೊಂಡಿದ್ದು.



ಟಿಪ್ಪಣಿಗಳು

೧. ತೇಜಸ್ವಿಯವರ ಕಾದಂಬರಿಗಳು, ಹೊಸ ಒಳನೋಟಗಳು, ಕರೀಗೌಡ ಬೀಚನಹಳ್ಳಿ

೨. ಪರಿಸರ ತೇಜಸ್ವಿ ದೃಷ್ಟಿಕೋನ, ಕೆ. ಸತ್ಯನಾರಾಯಣ, ಸಂಚಯ ಸಾಂಸ್ಕೃತಿಕ ಪತ್ರಿಕೆ ಪು. ಸಂ. ೩೩

೩. ತೇಜಸ್ವಿ ಕಥನ ಟಿ.ಪಿ. ಅಶೋಕ

೪. ತೇಜಸ್ವಿ ಸಾಹಿತ್ಯ ಕೃಷಿ, ಸಂಪಾದಕರು ಜಿ.ಟಿ. ವೀರಪ್ಪ ಡಾ. ಎಂ. ಬೈರೇಗೌಡ.

೫. ಕಾಲದ ಸರಹದ್ದು ಆಲಿಸಬಲ್ಲ ಲೇಖಕ ತೇಜಸ್ವಿ, ಕೆ ರಾಮದಾಸ್ ಪು. ಸಂ. ೮೩.೮೪



ಅಧ್ಯಾಯ ಮೂರು

ಪರಿಸರದ ಕತೆ ಕನ್ನಡದ ಕಥನ ಕ್ರಮದ ಒಂದು ಭಿನ್ನ ಆಖ್ಯಾನ





ಅಧ್ಯಾಯ ಮೂರು

ಪರಿಸರದ ಕತೆ ಕನ್ನಡದ ಕಥನ ಕ್ರಮದ ಒಂದು ಭಿನ್ನ ಆಖ್ಯಾನ

ಪರಿಸರದ ಕತೆಯಲ್ಲಿ ತೇಜಸ್ವಿ ಯಾವುದೋ ಗಹನವಾದ ವಿಚಾರಗಳನ್ನು ಹೇಳಲು ಹೊರಟಿದ್ದೇನೆ ಎಂಬ ಆಲೋಚನೆಯಲ್ಲಿ ಹೇಳುತ್ತಿಲ್ಲ. ಸಾಮಾನ್ಯ ಜ್ಞಾನವಿರುವ, ಅನುಭವವಿರುವ ಮನುಷ್ಯನಂತೆ ತನ್ನ ಜೀವನದಲ್ಲಾದ ಅನುಭವಗಳನ್ನು ಒಂದೊಂದು ಕತೆಯಲ್ಲಿ ಎಳೆಎಳೆಯಾಗಿ ಓದುಗರಲ್ಲಿ ಹಂಚಿ ಕೊಂಡಿದ್ದಾರೆ.

ಇರುವುದನ್ನು ಯಥಾಸ್ಥಿತಿಯಲ್ಲಿ ಹೇಳುತ್ತಾ ಹೋರಟರೆ ಅದು ನೀರಸ ವರದಿಯಾಗಿಬಿಡುತ್ತಿತ್ತು. ಆದರೆ ತೇಜಸ್ವಿಯವರಲ್ಲಿನ ಬರಹಗಾರನ ಪ್ರಜ್ಞೆ ಜಾಗೃತಗೊಂಡು ಬರವಣಿಗೆ ಅದ್ಭುತ ಕತೆಗಳಾಗಿ ಮೂಡಿಬಂದಿವೆ. ತೇಜಸ್ವಿಯವರ ಸಾಹಿತ್ಯ ಸೃಷ್ಟಿಗೆ ಪ್ರೇರಣೆಗಳನ್ನು ಹುಡುಕ ಬಯಸುವವರೂ ಈ ಕೃತಿಯನ್ನು ಅಭ್ಯಾಸ ಮಾಡಲೇ ಬೇಕು.

ಪರಿಸರದ ಕತೆ ಕನ್ನಡ ಸಾಹಿತ್ಯದಲ್ಲಿ ಅನನ್ಯವಾದ ರೀತಿಯಲ್ಲಿ ಪರಿಸರವೇ ವಸ್ತುವಾಗಿ ನಿರೂಪಿಸಲ್ಪಡುವ ಕೃತಿ. ಇಲ್ಲಿಯ ಕಥೆಗಳು ಮಕ್ಕಳು ಕೂಡ ಲೀಲಾಜಾಲವಾಗಿ ಓದಿಬಿಡುವಂತಿವೆ. ಸರಳ ಮೋಹಕ ಶೈಲಿಯ ನಿರೂಪಣೆ ವಿನೂತನವಾಗಿದೆ.

ತೇಜಸ್ವಿಯವರು ಪರಿಸರ ಪ್ರಜ್ಞೆಯನ್ನು ತಮ್ಮ ಸಾಹಿತ್ಯದ ಕೇಂದ್ರದಲ್ಲಿಟ್ಟುಕೊಂಡು, ವಿರಾಟ್ ಸೃಷ್ಟಿಯ ಚಮತ್ಕಾರಗಳನ್ನು, ಜೀವ ಸಂಕುಲದ ಸಂಕೀರ್ಣತೆಯ ಜಾಲವನ್ನು ಮತ್ತು ಮನುಷ್ಯ ಜೀವನದ ತರ್ಕಾತೀತ ವಿದ್ಯಮಾನಗಳನ್ನು ತಮ್ಮ ಸಾಹಿತ್ಯದಲ್ಲಿ ಅನ್ವೇಷಿಸಿದ್ದಾರೆ. ಕುವೆಂಪು ಅವರಂತೆ ಪ್ರಕೃತಿಯನ್ನು ಆರಾಧಿಸಿ ಆಧ್ಯಾತ್ಮಿಕರಣಗೊಳಿಸದೆ, ಕಾರಂತರಂತೆ ನಿಸರ್ಗದ ವಿದ್ಯಮಾನಗಳನ್ನು ವೈಚಾರಿಕವಾಗಿ ಪ್ರಶ್ನಿಸದೆ ಅವರಿಬ್ಬರ ಸೃಷ್ಟಿ ಮತ್ತು ದೃಷ್ಟಿಗಳನ್ನು ಅಪೂರ್ವ ಬೆರಗನ್ನಾಗಿ ರೂಪಾಂತರಿಸಿ ಕೊಂಡಿರುವ ತೇಜಸ್ವಿಯವರು ಈ



ಬೆರಗಿನ ನಿರಂತರ ಅನ್ವೇಷಣೆಯಲ್ಲಿ ತಲ್ಲೀನರಾಗಿ ಬಿಡುತ್ತಾರೆ. ಆದ್ದರಿಂದಲೇ ತೇಜಸ್ವಿಯವರ ಕೃತಿಗಳನ್ನು ಆಸ್ವಾದಿಸುತ್ತಾ ಮೈಮರೆಯುತ್ತೇವೆ.

ಪರಿಸರದ ಕತೆ ಒಂದು ಭಿನ್ನ ಅಖ್ಯಾನ


ಪರಿಸರದ ಕಥೆಯಲ್ಲಿ ಒಟ್ಟು ಹದಿನಾಲ್ಕು ಕಥೆಗಳಿದ್ದು ಇದರಲ್ಲಿ ಮೊದಲನೆಯದು ಇಡೀ ಸಂಕಲನಕ್ಕೆ ಪೂರ್ವಪೀಠಿಕೆಯಂತಿದೆ. ಉಳಿದಂತೆ ಇವು ಏಕಕಾಲಕ್ಕೆ ಕಥನಗಳಾಗಿಯೂ ಜೀವನಾನುಭವಗಳ ನಿರೂಪಣೆಯಾಗಿಯೂ ಆತ್ಮಚರಿತ್ರೆಯ ಸ್ವರೂಪವನ್ನೂ ಪಡೆದುಕೊಂಡವುಗಳಾಗಿವೆ. ಏಕಕಾಲಕ್ಕೆ ಶ್ರೇಷ್ಠ ಕಲಾಕೃತಿಯೊಂದು ನೀಡುವ ಅನುಭವವನ್ನು ನೀಡುತ್ತವೆ. ಇಂತಹ ಕಥನಕ ಕ್ರಮ ಕನ್ನಡಕ್ಕೆ ಹೊಸದಾಗಿದೆ. ಹಾಗೆ ನೋಡಿದರೆ ಇಡೀ ಭಾರತೀಯ ಸಾಹಿತ್ಯ ಜಗತ್ತಿನಲ್ಲಿ ಇಂಥಹದ್ದೊಂದು ಅಭಿವ್ಯಕ್ತಿ ಇರಲಾರದೇನೊ ಎಂದು ಭಾವಿಸಬಹುದು. ಈ ಅರ್ಥದಲ್ಲಿ ತೇಜಸ್ವಿಯವರು ಕನ್ನಡಕ್ಕೆ ಮಾತ್ರವಲ್ಲದೆ ಭಾರತೀಯ ಸಾಹಿತ್ಯಿಕ ಸಂದರ್ಭದಲ್ಲಿಯೇ ತುಂಬಾ ಭಿನ್ನ ಲೇಖಕರೆಂದು ಹೇಳಬಹುದು. ಅವರ ಈ ಭಿನ್ನತೆ ಕೇವಲ ಪರಿಸರವಾದದ ಹಿನ್ನೆಲೆಯಿಂದ ಮಾತ್ರ ಬಂದುದಾಗಿರದೆ, ಅವರ ನಿರೂಪಣಾ ಕ್ರಮ, ಹಾಸ್ಯಮಯತೆ, ಮತ್ತು ಅವರ ಕಾಡಿನ ಅನುಭವಲೋಕ ಎಲ್ಲಾ ಅವರ ಪ್ರತಿಭೆಯ ಮೂಸೆಯೊಳಗೆ ಕರಗಿ ಬಂದದ್ದಾಗಿದೆ. ಅದಕ್ಕೆಂದೇ ಈ ಅಧ್ಯಯನ ಸಂದರ್ಭದಲ್ಲಿ ಇದನ್ನೊಂದು ಭಿನ್ನ ಆಖ್ಯಾನವೆಂದೇ ಕರೆಯಲಾಗಿದೆ.

ಪರಿಸರದ ಕತೆ ಈ ಕಥಾಸಂಕಲನದಲ್ಲಿ ಒಟ್ಟು ಹದಿನಾಲ್ಕು ಕಥೆಗಳನ್ನು ನೋಡಬಹುದು. ಲೇಖಕರು ಇಲ್ಲಿ ಪರಿಸರದ ಬಗ್ಗೆ ಹೇಳುತ್ತಾ ತನ್ನ ಬಾಲ್ಯದ ಜೀವನದಲ್ಲಿನ ಅನುಭವಗಳು, ಮನೆ, ಆಳುಕಾಳುಗಳು, ತನ್ನ ಮಗಳಿಗೆ ಕಥೆ ಹೇಳುವ ಸಂದರ್ಭದಲ್ಲಿ, ವಿವರಿಸುವಾಗಿ ಆಗುತ್ತಿದ್ದ ಗೊಂದಲಗಳು, ಪುಟ್ಟ ಮಗುವಿನ ಮುಗ್ಧ ಪ್ರಶ್ನೆಗಳಿಗೆ ಉತ್ತರಿಸುವಾಗ, ನಾವು ಏನೆಲ್ಲಾ ಸೂಕ್ಷ್ಮ ವಿಷಯಗಳನ್ನು ತಿಳಿದುಕೊಂಡಿರುವುದಿಲ್ಲ ಎಂಬ ವಿಚಾರಗಳು ನಮ್ಮ ಅನುಭವಕ್ಕೆ ಬರುತ್ತವೆ.

ಪರಿಸರದ ಕತೆಯಲ್ಲಿ ಮೊದಲು ತೇಜಸ್ವಿಯವರಿಗೆ ಪರಿಸರದ ಬಗ್ಗೆ ಹೇಗೆ ಕಾಳಜಿ ಬೆಳೆಯಿತು ಅದು ಕ್ರಮೇಣ ತನ್ನ ಜೀವನದ ಆಸಕ್ತಿ ವಿಷಯವಾಗಿ, ಒಂದು ಹವ್ಯಾಸವಾಗಿ ತೇಜಸ್ವಿಯವರ ಜೀವನದಲ್ಲಿ ಹೇಗೆ ರೂಪುಗೊಂಡಿತು ಎಂಬುದು ಎಳೆಎಳೆಯಾಗಿ ಬಿಚ್ಚಿಕೊಳ್ಳುತ್ತಾ ಸಾಗುತ್ತದೆ.

ಪರಿಸರದ ಕಥೆ

ತೇಜಸ್ವಿಯವರಿಗೆ ತನ್ನ ಚಿಕ್ಕಂದಿನಲ್ಲಿ ತನ್ನ ತಂದೆ ಕುವೆಂಪುರವರೊಡನೆ ಆದ ಅನುಭವಗಳೇ ಮೊದಲ ಭಾಗದಲ್ಲಿ ಬರುತ್ತವೆ. ಮೊದಲು ಪರಿಸರದ ಬಗ್ಗೆ ಆಸಕ್ತಿ ಮೂಡಿದ ಸಂದರ್ಭವನ್ನು ವಿವರಿಸುತ್ತಾರೆ.



ಪ್ರಾಣಿ ಪಕ್ಷಿ ಗಿಡ ಮರಗಳನ್ನು ನೋಡಿದ್ದನ್ನು ಅವರ ತಂದೆಯ ಬಳಿ ವರದಿ ಒಪ್ಪಿಸುತ್ತಿದ್ದ ಪ್ರಸಂಗಗಳನ್ನು, ಇವುಗಳೆಲ್ಲದರ ಬಗ್ಗೆ ಕುವೆಂಪು ಅವರು ಹೇಳುತ್ತಿದ್ದ ವ್ಯಾಖ್ಯಾನ, ವಿವರಣೆಗಳು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ.

ಕರ್ವಾಲೋ ಕಾದಂಬರಿಯಲ್ಲಿ ಬಂದಿರುವ ಕಿವಿ ಎನ್ನುವ ನಾಯಿ ಒಂದು ಕಾಲದಲ್ಲಿ ನನ್ನೊಡನೆ ಇದ್ದ ಅಸಾಧಾರಣ ಬುದ್ಧಿಯ ಶಿಕಾರಿ ನಾಯಿ. ಸ್ಪಾನಿಯಲ್ ಜಾತಿಯ ನಾಯಿ ಆದ ಕಾರಣ ಅದರ ಕಿವಿ ಸುಮಾರು ಅರ್ಧ ಅಡಿಗಿಂತ ಉದ್ದ ಇದ್ದು ತಲೆಯ ಪಕ್ಕದಲ್ಲಿ ವಿಸ್ತಾರವಾಗಿ ಇಳಿ ಬಿದ್ದಿತ್ತು. ಅದಕ್ಕಾಗೆ ಅದಕ್ಕೆ ಕಿವಿ ಎನ್ನುವ ಹೆಸರು ಬಂದಿದ್ದು. ನಾನು ತೋಟ ಮಾಡಲು ಆರಂಭಿಸಿದ ಮೊದಲ ವರ್ಷಗಳಲ್ಲಿ ಕೋವಿ ಹೆಗಲ ಮೇಲೆ ಹಾಕಿಕೊಂಡು ದಿನವಿಡೀ ಅದರೊಡನೆ ಕಾಡು ಅಲೆಯುವುದೇ ಕೆಲಸವಾಗಿತ್ತು. ಹೀಗೆ ಓದುವುದು, ಬೆರುಯುವುದು ಎಲ್ಲದಕ್ಕೂ ತಿಲಾಂಜಲಿಕೊಟ್ಟು ನಿರ್ಜನ ಕಾಡುಗಳಲ್ಲಿ ಗೊತ್ತು ಗುರಿ ಇಲ್ಲದೆ ಅಲೆಯುತ್ತಿರುವ ನನ್ನನ್ನು ನೋಡಿ ಇವನು ಸಂಪೂರ್ಣ ಹಾಳಾದನೆಂದು ವ್ಯಸನ ಸೂಚಿಸಿದವರೂ ಅನೇಕರಿದ್ದಾರೆ. 'ಎಂಥವರಿಗೆ ಎಂಥಾ ಮಗ' ಎಂದು ವಿಷಾದಪಟ್ಟವರೂ ಅನೇಕರಿದ್ದಾರೆ. ಕೆಲವರು 'ಈ ನಾಯಿಯ ದೆಸೆಯಿಂದಲೇ ಇವನು ಹಾಳಾದ' ಎಂದು ಕಿವಿಯನ್ನು ದೂಷಿಸಿದವರೂ ಇದ್ದಾರೆ.

ನನ್ನ ಕೈಗೆ ಕೋವಿ ಬರುವ ವೇಳೆಗೆ ಕಾಡುಪ್ರಾಣಿಗಳೆಲ್ಲಾ ಅವನತಿಯ ಹಾದಿ ಹಿಡಿದಿದ್ದರೂ ಈಗಿನಂತೆ ನಾಮಾವಶೇಷವಾಗುವ ಸ್ಥಿತಿಗೆ ಇಳಿದಿರಲಿಲ್ಲ. ಕಾಡುಮೃಗಗಳನ್ನು ಜೂಗಳಲ್ಲೂ, ಪುಸ್ತಕದ ಚಿತ್ರಗಳಲ್ಲೂ ಹೆಚ್ಚಾಗಿ ನೋಡಿದ್ದ ನನಗೆ ಮೊದಲ ಸಾರಿಗೆ ಅವು ಕಾಡಿನ ನಿಶ್ಚಲ ಮೌನದಲ್ಲಿ ಕಾಲ ಬಳಿಯ ಪೊದೆಗಳಿಂದಲೇ ಧಿಗ್ಗನೆ ಮಿಂಚಿ ಮಾಯವಾದಾಗ ಆದ ಅನುಭವ ಅಸಾಧಾರಣವಾದುದು. ಅವುಗಳ ಈ ಗೌಪ್ಯತೆಯೇ ನಮಗೆ ಅವುಗಳ ಬಗ್ಗೆ ಅಸಾಧಾರಣ ಕುತೂಹಲ ಹುಟ್ಟಿಸುತ್ತದೆ!



ಕಿವಿ ಮತ್ತು ನಾನು ಸೇರಿ ಅನೇಕ ಪ್ರಾಣಿಗಳನ್ನು ಶಿಕಾರಿ ಮಾಡಿ ಸ್ವಾಹಾ ಮಾಡಿದ್ದೇವಾದರೂ ಆಗಿದ್ದ ಪ್ರಾಣಿಗಳ ಸಂಖ್ಯೆ ದೃಷ್ಟಿಯಿಂದ ನಮಗೆ ಶಿಕಾರಿ ಮಾಡಿದೆವಲ್ಲಾ ಎಂದು ಅಷ್ಟೊಂದೇನೂ ಬೇಸರವಾಗುತ್ತಿರಲಿಲ್ಲ. ಇದಕ್ಕೆ ಭಾರತದ ನಶಿಸುತ್ತಿರುವ ವನಸಂಪತ್ತಿನ ಬಗ್ಗೆ ಆಗ ನನಗಿದ್ದ ಅಜ್ಞಾನವೂ ಒಂದು ಕಾರಣವಿರಬಹುದು. ಒಟ್ಟಿನಲ್ಲಿ ಈ ಶಿಕಾರಿಯ ಪಾಪ ಪುಣ್ಯಗಳೇನೇ ಇರಲಿ, ಇದು ನನಗೆ ಕಾಡಿನ ಬಗ್ಗೆ, ಕಾಡುಪ್ರಾಣಿಗಳ ಬಗ್ಗೆ ನಿಧಾನವಾಗಿ ಆತ್ಮೀಯತೆಯನ್ನು ಬೆಳಸಲು ಸಹಾಯವಾಯ್ತೆಂದು ಹೇಳಬಹುದು. ಈಗ ಕಾಡುಗಳಿಲ್ಲದ, ಕಾಡುಪ್ರಾಣಿಗಳಿಲ್ಲದ ಪರಿಸರವು ಶ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತದೆ. ಕಾಡುಗಳನ್ನೂ, ಕಾಡುಪ್ರಾಣಿಗಳನ್ನೂ ಸಂರಕ್ಷಿಸಬೇಕೆಂದು ನಾನು ಹೇಳಿದರೆ ಅದು ನನ್ನ ತಿಳುವಳಿಕೆಯ ಕಾರಣಗಳಿಗಿಂತಲೂ ಹೆಚ್ಚಾಗಿ ಅವುಗಳೊಂದಿಗೆ ನಾನು ಹೊಂದಿರುವ ವ್ಯಕ್ತಿನಿಷ್ಠ ಸಂಬಂಧವೇ ಆಗಿದೆ. ಕಾಡುಗಳನ್ನು ನಾಶ ಮಾಡಿದಾಗ ಅಲ್ಲಿರುವ ಪ್ರಾಣಿಗಳನ್ನೂ, ಅವುಗಳ ಪರಿಸರವನ್ನೂ ಧ್ವಂಸ ಮಾಡಿದಾಗ ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯೊಂದನ್ನು ನಮ್ಮ ಕಿರಿಯ ಜನಾಂಗ ಕಳೆದುಕೊಂಡಂತಾಗಿ ಮನಸ್ಸು ಖಿನ್ನವಾಗುತ್ತದೆ ಈ ದುರಂತದ ದುಃಖವನ್ನು ಅಂಕಿ ಸಂಖ್ಯೆಗಳ ಆಧಾರದ ಮೇಲೆ, ಸಿದ್ಧಾಂತಗಳ ಮುಖಾಂತರ ವಿಶ್ಲೇಷಿಸಿ, ಪರಿಸರ ಸಂರಕ್ಷಣೆಯ ಬಗ್ಗೆ ಜನಗಳಿಗೆ ಹೇಳಲು ಮನಸ್ಸೇ ಬರುವುದಿಲ್ಲ. ಏಕೆಂದರೆ, ನಾನು ಕಂಡಂತೆ ಕಾಡನ್ನು ಕಂಡಿಲ್ಲದ, ಅನುಭವಿಸಿಲ್ಲದ ಮನಸ್ಸುಗಳಿಗೆ ನನ್ನ ಮನಸ್ಸಿನ ದುಗುಡವನ್ನು ನಿರ್ಜೀವ ಅಂಕಿಸಂಖ್ಯೆಗಳ ವಿಶ್ಲೇಷಣೆಯ ಮುಖಾಂತರ ಹೇಗೆ ತಾನೆ ಪ್ರತಿಸ್ಪಂದನ ಉಂಟುಮಾಡಲಿ?

ನಾನು ಬಹಳ ಚಿಕ್ಕವನಿದ್ದಾಗ ನಮ್ಮ ತಂದೆಯವರೊಡನೆ ಬೆಳಗಿನ ಹೊತ್ತು ವಾಕಿಂಗ್ ಹೋಗುತ್ತಿದ್ದುದು ನೆನಪು. ಆಗ



ಮೈಸೂರಿನ ನಮ್ಮ ಮನೆ ಎದುರು ದಿಗಂತದವರೆಗೂ ಹೊಲಗಳೂ, ಕುರುಚಲು ಪೊದೆಗಳ ಬಯಲೂ ಇತ್ತು. ಈಗ ಅವೆಲ್ಲಾ ಸೈಟುಗಳಾಗಿ, ಬಡಾವಣೆಗಳಾಗಿ ಪರಿವರ್ತನೆಯಾಗಿವೆ. ಅಲ್ಲಿ ಕಾಡಾಗಲೀ, ಕಾಡುಪ್ರಾಣಿಗಳಾಗಲೀ ಇರಲಿಲ್ಲ. ಅಲ್ಲಿದ್ದ ಪ್ರಾಣಿಗಳೆಂದರೆ ಓತಿಕ್ಯಾತ, ಹಾವುರಾಣಿ, ಹಾವು, ಒಮ್ಮೊಮ್ಮೆ ಮೊಲಗಳು, ಅಷ್ಟೇ. ಅದನ್ನೇ ಪೇಟೆಯವರು ಕಾಡು ಎಂದು ಕರೆಯುತ್ತಿದ್ದರು. ಅಲ್ಲಿ ಹೊಲಗಳ ನಡುವೆ ಕಾಲುಹಾದಿಯಲ್ಲಿ ನಮ್ಮ ತಂದೆಯವರೊಡನೆ ನಾವೂ ವಾಕಿಂಗ್ ಹೋಗುತ್ತಿದ್ದೆವು.

ಒಮ್ಮೆ ಆ ಕಾಲು ಹಾದಿಯಲ್ಲಿ ನಡೆಯುತ್ತಾ ಬಳಿಯಲ್ಲೇ ಕೆಲವು ಬಿಲಗಳನ್ನು ನೋಡಿದೆವು. ಅವು ಕಾಡಿನ ಇಲಿಯ ಬಿಲಗಳೆಂದೂ, ಅವುಗಳೊಳಗೆ ಕುಚ್ಚಿನ ಬಾಲದ ಕಾಂಗ್ರೂ ಕಾಡಿಲಿಗಳು ಇರುತ್ತವೆಂದೂ ತಂದೆಯವರು ಹೇಳಿದರು. ಆ ಬಿಲಗಳೊಳಗೆ ನಿಜಕ್ಕೂ ಪ್ರಾಣಿಗಳಿದ್ದಾವೆಂದು ನಮಗೆ ನಂಬಿಕೆ ಬರಲಿಲ್ಲ. ಏಕೆಂದರೆ, ಆ ಬಿಲಗಳು ಅಷ್ಟೊಂದು ನಿರ್ಜೀವವಾಗಿಯೂ, ಜಡವಾಗಿಯೂ ನಮಗೆ ಕಂಡವು. ನಾನೂ, ನನ್ನ ತಮ್ಮ ಚೈತ್ರನೂ ಸೇರಿ ಅಲ್ಲಿದ್ದ ಚಿಕ್ಕ ಚಿಕ್ಕ ಕಲ್ಲು ಹರಳುಗಳನ್ನು ಆ ಬಿಲಗಳ ಬಾಯೊಳಗೆ ತುಂಬಿ ಮುಚ್ಚಿ ಬಿಟ್ಟೆವು.

ಅಚ್ಚರಿಯ ಸಂಗತಿ ಎಂದರೆ ನಾವು ಮಾರನೆ ದಿನ ವಾಕಿಂಗ್ ಹೋದಾಗ ನೋಡಿದರೆ ಆ ಬಿಲಗಳೊಳಗೆ ಹಾಕಿದ್ದ ಕಲ್ಲುಗಳೆಲ್ಲಾ ಮಾಯವಾಗಿದ್ದವು. ಇಲಿಗಳು ರಾತ್ರಿ ಯಾವಾಗಲೋ ಹೊರಬಂದು ಆ ಕಲ್ಲುಗಳನ್ನೆಲ್ಲಾ ಹೊರಗೆಲ್ಲೋ ದೂರಸಾಗಿಸಿ ತಮ್ಮ ಮನೆ ಬಾಗಿಲನ್ನು ಎಂದಿನಂತೆ ಒಪ್ಪ ಓರಣ ಮಾಡಿಟ್ಟಿದ್ದುವು. ಆ ವಯಸ್ಸಿನಲ್ಲೇ ಅಷ್ಟಕ್ಕೇ ನಮಗೆ ಎಷ್ಟೊಂದು ಆಶ್ಚರ್ಯ, ಸಂತೋಷ ಆಯ್ತೆಂದರೆ ಅದು ಹೇಳಲಸಾಧ್ಯ. ನಮ್ಮ ತಂದೆಯವರು ಹೇಳಿದ್ದು ನಿಜವೆಂದು ಆ ಕಲ್ಲುಗಳನ್ನು ಆಚೆ ಸಾಗಿಸಿ ಸಾಬೀತು ಮಾಡಿದ



ಪ್ರಾಣಿಗಳ ಬಗ್ಗೆ ನಮಗೆ ಎಲ್ಲಿಲ್ಲದ ಆಸಕ್ತಿ ಕುತೂಹಲ ಕೆರಳಿತು. ಆ ಬಿಲದ ಪಕ್ಕ ಬಿದ್ದಿದ್ದ ನುಣ್ಣನೆಯ ಧೂಳಿನಲ್ಲಿ ಪಡಿಮೂಡಿದ್ದ ಇಲಿಯ ಹೆಜ್ಜೆ ಗುರುತುಗಳನ್ನೂ ನಮ್ಮ ತಂದೆ ತೋರಿಸಿದರು. ಅಷ್ಟೇ ಅಲ್ಲ, ಈ ಇಲಿಗಳನ್ನು ಹಿಡಿಯಲು ಒಮ್ಮೊಮ್ಮೆ ಹಾವುಗಳು ಬಿಲಗಳೊಳಗೆ ನುಗ್ಗುತ್ತವೆಂದೂ, ಆಗ ಆ ಇಲಿಗಳು ಬೇರೆಂದು ಕಡೆ ಮಾಡಿಕೊಂಡಿರುವ ಕಳ್ಳ ಹೊರದಾರಿಗಳ ಮುಖಾಂತರ ಪರಾರಿಕೀಳುತ್ತವೆಂದೂ ಹೇಳಿದರು. ನಾವು ಅಲ್ಲೆಲ್ಲಾ ಹುಡುಕಾಡಿ ಪೊದೆಗಳಡಿಯಲ್ಲಿ, ಹೊಲಗಳ ತೆವರಿಗಳ ಬಳಿ ಅವು ಮಾಡಿಕೊಂಡಿದ್ದ ಕಳ್ಳದಾರಿಗಳನ್ನೂ ಪತ್ತೆ ಮಾಡಿದೆವು.

ಈ ನೆನಪನ್ನು ನಿಮಗೇಕೆ ಹೇಳಿದೆನೆಂದರೆ ಇದೇನೂ ನರಭಕ್ಷಕನ ಶಿಕಾರಿಯಂಥ ರೋಮಾಂಚಕ ಸಾಹಸವೇನಲ್ಲ. ಆದರೆ ನಮಗೆ ತಂದೆ, ತಾಯಿ, ಗೆಳೆಯರು, ಸ್ಕೂಲು ಇಷ್ಟರೊಳಗೇ ಸೀಮಿತವಾಗಿದ್ದ ಜೀವಸಮುಚ್ಛಯದ ಕಲ್ಪನೆಯನ್ನು ನಮ್ಮ ಪ್ರಜ್ಞೆಗೆ ಅನೂಹ್ಯವಾಗಿದ್ದ ಹಾವು ಇಲಿ ಮೊಲ ಇತ್ಯಾದಿಗಳ ವಿಶ್ವಸಮಾಜದ ಹತ್ತಿರಕ್ಕೆ ಒಯ್ಯಲು ಇವೆಲ್ಲ ಹೇಗೆ ಸಹಾಯ ಮಾಡಿತೆಂದು ಊಹಿಸಲು ಸಾಧ್ಯವಾದರೆ ಸಾಕು.

ನಮಗೆ ನಮ್ಮ ಸಮಾಜದ ಹೊರಗಿನ ವಿಶ್ವಸಮಾಜದ ಪರಿಚಯಕ್ಕೆ ನರಭಕ್ಷಕನೇ ಬಂದು ಹೊತ್ತೊಯ್ಯಬೇಕೆ? ಇಲಿಗಳು ಬಿಲಗಳಿಂದ ಕಲ್ಲುಗಳನ್ನು ಎತ್ತಿಟ್ಟರೂ ಸಾಕಲ್ಲವೇ?

ಪ್ರಕೃತಿ ಮತ್ತು ಪರಿಸರ ಬಗ್ಗೆ ನನಗೆ ಚಿಕ್ಕಂದಿನಿಂದಲೂ ಇರುವ ಕುತೂಹಲಕ್ಕೆ ಮುಖ್ಯ ಕಾರಣ ನಮ್ಮ ತಂದೆಯವರೇ. ನಮಗೆ ಕುತೂಹಲ ಹುಟ್ಟಿಸಬೇಕೆಂಬ ಉದ್ದೇಶವೇನೂ ಅವರಿಗೆ ಇದ್ದಂತೆ ಕಾಣಲಿಲ್ಲ. ಅದರಲ್ಲಿ ಅವರಿಗೇ ಇದ್ದ ಆಸಕ್ತಿಯು ಪರಿಣಾಮವಾಗಿಯೇ ನಮಗೂ ಆಸಕ್ತಿ ಉಂಟಾಯ್ತು. ನನಗಂತೂ



ಈ ಆಸಕ್ತಿ ಎಷ್ಟಾಯ್ತೆಂದರೆ ಓದು ಬರಹ, ವಿದ್ಯಾಭ್ಯಾಸಗಳಲ್ಲಿ ಆಸಕ್ತಿ ಕಡಿಮೆಯಾಯ್ತು. ಫಸ್ಟ್ ಕ್ಲಾಸ್‌ಗಳನ್ನಾಗಲೀ, ರ್‍ಯಾಂಕ್‌ಗಳನ್ನಾಗಲೀ ತೆಗೆದುಕೊಳ್ಳಲು ನನ್ನಿಂದ ಕೊನೆವರೆಗೂ ಸಾಧ್ಯವಾಗಲಿಲ್ಲ.

ನನಗೆ ನಮ್ಮ ಮನೆ ಕಿಟಕಿ ಬಳಿ ಗೂಡಿನಲ್ಲಿ ಮರಿಮಾಡಿದ ಪಿಕಳಾರ ಹಕ್ಕಿ, ಎಲೆಗಳನ್ನು ಹೊಲಿದು ಗೂಡ ಮಾಡಿದ ಟುವ್ವಿ ಹಕ್ಕಿ, ನಮ್ಮ ನುಗ್ಗೆ ಮರಕ್ಕೆ ಪ್ರತಿ ವರ್ಷ ಹತ್ತಿಕೊಳ್ಳುತ್ತಿದ್ದ ಕಂಬಳಿ ಹುಳುಗಳ ದಂಡು, ನಾವು ಮೈ ಸವರಿ ಬಿಟ್ಟ ಅಳಿಲು ಮರಿಯನ್ನು ಹೆಂಚಿನ ಮೇಲಿಂದ ಅದರ ತಾಯಿ ಬಂದು ಕಚ್ಚಿ ಕೊಂದಿದ್ದು, ಇವೆಲ್ಲ ಕಣ್ಣಿಗೆ ಕಟ್ಟಿದಷ್ಟು ಸ್ಫುಟವಾಗಿ ಜ್ಞಾಪಕವಿದೆ. ಸ್ಕೂಲಿಗೆ ಹೋಗುವ ಕಾಲುಹಾದಿಯಲ್ಲಿ ಒಂದು ದಿನ ಅಪರೂಪಕ್ಕೆ ನಾಚಿಗೆ ಮುಳ್ಳಿನ ಗಿಡನೋಡಿದೆವು. ಮುಟ್ಟಿದ ಕೂಡಲೆ ಕೈ ಮುಗಿದಂತೆ ಎಲೆಗಳನ್ನು ಮುಚ್ಚಿಕೊಳ್ಳುವ ಈ ಗಿಡ ನೋಡಿ ಪವಾಡ ಕಂಡಂತೆ ಚಕಿತರಾಗಿಹೋದೆವು! ಆಗೆಲ್ಲಾ ಓಡಿ ಹೋಗಿ ತಂದೆಯವರ ಬಳಿ ವರದಿ ಒಪ್ಪಿಸುತ್ತಿದ್ದೆವು. ಇವುಗಳೆಲ್ಲದರ ಬಗ್ಗೆ ಅವರು ಹೇಳುತಿದ್ದ ವ್ಯಾಖ್ಯಾನ, ವಿವರಣೆಗಳು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಅವರ ತಾರುಣ್ಯದ ಕಾಡಿನ ಮತ್ತು ಬೇಟೆಯ ರೋಮಾಂಚಕ ಅನುಭವಗಳನ್ನು ಕೇಳಿ ಪ್ರಭಾವಿತನಾದ ನಾನು ನಮ್ಮ ತಂದೆ ಏಕಾದರೂ ಮೈಸೂರಿಗೆ ಪಾಠ ಹೇಳಲು ಮಲೆನಾಡನ್ನು ತೊರೆದು ಬಂದರೋ ಎಂದು ವ್ಯಥೆಪಡುತ್ತಿದ್ದೆ.

ನಾನು ಮಲೆನಾಡಿನ ಮೂಡುಗೆರೆಯಲ್ಲಿ ಕಾಡು ತೆಗೆದುಕೊಂಡು ಕಾಫಿ ತೋಟ ಮಾಡಲು ನಿರ್ಧರಿಸಿದ್ದು ವಾಸ್ತವವಾಗಿ ಕಾಫಿ ತೋಟದ ಲಾಭಕ್ಕಾಗಲೀ, ಹಳ್ಳಿಗೆ ಹಿಂದಿರುಗುವ ಆದರ್ಶಕ್ಕಾಗಲೀ, ವ್ಯವಸಾಯದ ಮೇಲಿನ ಪ್ರೀತಿಯಿಂದಾಗಲೀ ಖಂಡಿತ ಅಲ್ಲ. ಯಾರ



ಹಂಗು, ಭಯ, ಬೈಯ್ಗುಳಗಳ ಕಾಟವಿಲ್ಲದೆ ಕಾಡು ಮೇಡು ಅಲೆದುಕೊಂಡು ಇರಬಹುದೆಂಬುದೇ ಬಹುಮುಖ್ಯ ಕಾರಣ. ಸುಮ್ಮನೆ ಕೋವಿ ಹೆಗಲಿಗೇರಿಸಿಕೊಂಡು ಕಿವಿ ಜೊತೆ ಕಾಡೊಳಗೆ ಅಲೆಯುತ್ತಾ ಸಾಯಂಕಾಲಕ್ಕೆ ಮೈ ಕೈ ತರಚಿಕೊಂಡು ಮುಳ್ಳು ಚುಚ್ಚಿಸಿಕೊಂಡು ಸುಸ್ತಾಗಿ ಹಿಂದಿರುಗುವುದು ಯಾವ ತರದ ಸಂತೋಷವೋ ಇಂದಿಗೂ ನನಗೆ ಅರ್ಥವಾಗುತ್ತಿಲ್ಲ! ಬಹುಶಃ ಇತರರಿಗೂ ಅರ್ಥ ಮಾಡಸಲಾರೆ. ಒಟ್ಟಿನಲ್ಲಿ ಗೊತ್ತುಗುರಿ ಇಲ್ಲದೆ ಕಿವಿ ಮುದಿಯಾಗಿ ಸಾಯುವವರೆಗೂ ಅದರೊಡನೆ ಕಾಡು ತಿರುಗಿದ್ದಂತೂ ನಿಜ.

ನಾನು ಕಾಡು ಕೊಂಡ ನಂತರದ ಎಷ್ಟೋ ಅನುಭವಗಳನ್ನು ಗೆಳೆಯರೊಡನೆ ಹರಟುತ್ತಾ ಕ್ವಚಿತ್ತಾಗಿ ಹೇಳಿದ್ದೇನೆ. ಆದರೆ ಅವನ್ನೆಲ್ಲಾ ಬರೆಯಬೇಕೆಂದು ಈವರೆಗೂ ನನಗೆ ಅನ್ನಿಸಿರಲಿಲ್ಲ. ಏಕೆಂದರೆ, ಅವು ಯಾವುವೂ ಉಲ್ಲೇಖಾರ್ಹವಾದ ಅಸಾಧಾರಣ ಅನುಭವಗಳಾಗಿ ಇರಲಿಲ್ಲ. ಆದರೆ ಪರಿಸರದ ಬಗ್ಗೆ ಆಸ್ಥೆ, ಕುತೂಹಲಗಳು ಮೂಡಿದ ನಾನೊಬ್ಬ ಪರಿಸರವಾದಿಯಾಗಿ ರೂಪುಗೊಂಡ ಹಾದಿ ಇದು. ಪರಿಸರ ಸಂರಕ್ಷಣೆಯ ಬಗ್ಗೆ ವೈಜ್ಞಾನಿಕ ಪಾಠಗಳಷ್ಟೇ ಈ ನಡೆದು ಬಂದ ದಾರಿಯನ್ನೂ ತಿಳಿಯುವುದು ಅಗತ್ಯವೆನ್ನಿಸುತ್ತದೆ.

ನಾನು ಹೇಳಿರುವ ಈ ಚಿಕ್ಕ ಚಿಕ್ಕ ಘಟನೆಗಳಿಗೂ, ಪರಿಸರವಾದಕ್ಕೂ ಯಾವುದೇ ಯಾವುದೇ ನೇರ ಸಂಬಂಧವನ್ನು ನೇರವಾಗ ತೋರಿಸಲಾರೆ. ಆದರೆ ಇದು ನಾನು ನಡೆದು ಬಂದ ದಾರಿ ಎಂದು ಮಾತ್ರ ಹೇಳಬಲ್ಲೆ.

ನಾನು ಹೇಳಿರುವ ಈ ಚಿಕ್ಕ ಚಿಕ್ಕ ಘಟನೆಗಳಿಗೂ, ಪರಿಸರವಾದಕ್ಕೂ ಯಾವುದೇ ಸಂಬಂಧವನ್ನು ನೇರವಾಗಿ ತೋರಿಸಲಾರೆ. ಆದರೆ ಇದು ನಾನು ನಡೆದು ಬಂದ ದಾರಿ ಎಂದು ಮಾತ್ರ ಹೇಳಬಲ್ಲೆ ಎಂದು ಅವರೇ ಹೇಳಿದ್ದಾರೆ.



ಮಾನೀಟರ್

ಈ ಕತೆಯಲ್ಲಿ ತೇಜಸ್ವಿ ಉಡುವಿಗೆ ಮಾನೀಟರ್ ಎಂದು ಹೆಸರಿಟ್ಟು, ಅದು ತನಗೆ ಪರಿಚಯವಿರುವ ಕಾಡಿನ ಸಂಗತಿ ಎಂದು ಹೇಳಿದ್ದಾರೆ. ಈ ಮಾನೀಟರ್ ಬಗ್ಗೆ ಮೊದಲು ಕೆಲವು ವಿಷಯಗಳನ್ನು ತಿಳಿದುಕೊಂಡಿದ್ದ ತೇಜಸ್ವಿಗೆ ಇದರಿಂದಾದ ಅನುಭವಗಳು ತುಂಬಾ ಆಶ್ಚರ್ಯ ಮತ್ತು ವಿಸ್ಮಯಕರವಾಗಿವೆ.

> ಈ ಮಾನಿಟರ್ ನನಗೆ ಮೊದಲ ಬಾರಿಗೆ ಪರಿಚಯ ಆಗಿದ್ದು ಸುಮಾರು ಎರಡು ತಿಂಗಳ ಹಿಂದೆ. ಕಾಡಿನ ಬೆಂಕಿ ತೋಟಕ್ಕೆ ಹಬ್ಬದಿರಲೆಂದು ಕಾಡಿಗೂ, ತೋಟಕ್ಕೂ ನಡುವೆ ಬೆಂಕಿದಾರಿ ಮಾಡಿದ್ದೆವು. ಬೆಂಕಿದಾರಿ ಎಂದರೆ ಎರಡರು ನಡುವೆ ಕಾಡುಕೊಚ್ಚಿ ದಾರಿ ಮಾಡಿ ದಾರಿಯನ್ನು ಹೆರೆದು, ಹುಲ್ಲು-ಕಸ ಒಂದೂ ಇರದ ಹಾಗೆ ಗುಡಿಸಿ ಸ್ವಚ್ಛ ಮಾಡುವುದು. ಆಮೇಲೆ ದಾರಿಯ ಮೇಲೆ ಬೀಳುವ ತರಗೆಲೆ ರಾಶಿಯನ್ನು ಪ್ರತಿದಿನ ಗುಡಿಸಿಬಿಡುತ್ತೇವೆ. ಹೀಗೆ ಮಾಡಿದರೆ ಆಕಸ್ಮಾತ್ ಬೆಂಕಿ ಕಾಡಿಗೆ ಬಿದ್ದರೆ ಅದು ಸುಲಭವಾಗಿ ತೋಟಕ್ಕೆ ದಾಟಿಕೊಳ್ಳುವುದಿಲ್ಲ. ಬೇಸಿಗೆ ಸಮಯದಲ್ಲಿ ಕಾಫಿ ತೋಟಗಳಲ್ಲಿ ನಡೆಯುವ ಪ್ರಧಾನ ಕೆಲಸಗಳಲ್ಲಿ ಇದು ಬಹುಮುಖ್ಯವಾದುದು. ಎಲ್ಲಿ ಹೊಗೆ ಏಳಲಿ, ಎಲ್ಲಿ ತರಗಲೆ ಸುಟ್ಟ ವಾಸನೆ ಬರಲಿ ನಾವು ಓಡಿಹೋಗಿ ನೋಡಬೇಕು. ಇಲ್ಲದಿದ್ದರೆ ಅನೇಕ ವರ್ಷ ಮಾಡಿದ ಕೆಲಸ ಬೆಳೆಸಿದ ಗಿಡಗಳೆಲ್ಲ ಕೆಲವೇ ಗಂಟೆಗಳೊಳಗೆ ಬೂದಿಯಾಗುತ್ತದೆ.
>
> ಈ ಬೆಂಕಿದಾರಿಯ ಆಚೀಚೆ ಬದಿಯಲ್ಲಿ ಗುಡಿಸಿ ರಾಶಿ ಮಾಡಿದ ತರಗೆಲೆ ರಾಶಿಯೆಲ್ಲ ದಿನಾ ಬೆಂಕಿದಾರಿಯ ಮೇಲೆ ಹರಡಿಕೊಂಡು ಬಿದ್ದಿರುತ್ತಿತ್ತು. ಇದನ್ನು ಗುಡಿಸಿ ಶುದ್ಧಿ ಮಾಡುವ ಜವಾಬ್ದಾರಿ ವಹಿಸಿಕೊಂಡಿದ್ದ ಮಾರ ಇದು ಯಾವುದೋ ಉಡುವಿನ ಕೆಲಸ ಎಂದು ಗುಡಿಸುವಾಗಲೆಲ್ಲಾ ಉಡಕ್ಕೆ ಶಾಪ ಹಾಕುತ್ತಿದ್ದ. ಆದರೆ ಈ ಕಿಡಿಗೇಡಿ ಉಡುವನ್ನು ನೋಡಬೇಕೆಂದು ನಾನೆಷ್ಟು ಪ್ರಯತ್ನಿಸಿದರೂ ಬೆಂಕಿದಾರಿ ಬಳಿಯಂತೂ ಅದನ್ನು



ನೋಡಲಾಗಿರಲಿಲ್ಲ. ಮಾರನ ವಿವರಣೆಯಿಂದ ನಾನು ಉಡು ಎಂದರೆ ದೊಡ್ಡ ಓತೀಕ್ಯಾತನ ರೀತಿ ಇರುತ್ತದೆಂದು ಕಲ್ಪಿಸಿಕೊಂಡಿದ್ದೆ. ಮಾರ ಉಡುವನ್ನು ತಿನ್ನುತ್ತಾರೆಂದೂ, ಅದರ ಮಾಂಸ ಪ್ರಪಂಚದಲ್ಲೇ ಸರ್ವಶ್ರೇಷ್ಠವಾದುದೆಂದೂ, ಹಿಂದೆ ಕಾಫಿತೋಟ ಮಾಡಿಕೊಂಡಿದ್ದ ಯುರೋಪಿಯನ್ ದೊರೆಗಳು ಸಹ ಅದನ್ನು ತಿನ್ನುತ್ತಿದ್ದರೆಂದೂ ಬಾಯಲ್ಲಿ ಎಂಜಲು ತುಂಬಿಕೊಂಡು ಹೊಗಳಿದ್ದ.

ಆದರೆ ಈ ಉಡುವನ್ನು ಒಮ್ಮೆ ನಾನು ಹತ್ತಿರದಿಂದ ನೋಡಿದಾಗ ಅದನ್ನು ತಿನ್ನುವ ತಿಂಡಿಯಂತೆ ಕಲ್ಪಿಸಿಕೊಳ್ಳಲು ಸಾಧ್ಯವೇ ಆಗಲಿಲ್ಲ. ಹಕ್ಕಿಗಳ ಫೋಟೋ ತೆಗೆಯಲು ಮರೆ ರಚಿಸಿಕೊಂಡು ಒಳಗೆ ಕುಳಿತಿದ್ದಾಗ ಜರಜರ ತರಗೆಲೆಗಳ ಸದ್ದು ಮಾಡುತ್ತಾ ಬಂದ ಉಡು ಪೊದೆಯೊಂದರ ಅಡಿಯಿಂದ ನನ್ನ ಮರೆಯ ಕಡೆಗೆ ಮೆಲ್ಲಗೆ ಇಣುಕಿತು. ಬರೀ ತಲೆಯನ್ನಷ್ಟೇ ಅದು ಹೊರಹಾಕಿದ್ದರಿಂದ ನಾನು ಮೊದಲು ಅದನ್ನು ಹಾವಿನ ತಲೆ ಎಂದೇ ತಿಳಿದೆ. ಅದರ ಕುತ್ತಿಗೆಯ ಚರ್ಮವೂ ಹಾವಿನ ಚರ್ಮವನ್ನೇ ಹೋಲುತ್ತಿತ್ತು. ಅದರ ನಾಲಿಗೆಯೂ ಹಾವಿನದರಂತೆಯೇ ಸೀಳಿದ ನಾಲಿಗೆ. ಇದನ್ನು ನೋಡಿ ನಾನು ಯಾವುದೋ ಬಹುದೊಡ್ಡ ಹಾವೇ ಇರಬೇಕೆಂದು ತಿಳಿದೆ. ಕೊಂಚ ಹೊತ್ತು ಮರೆಯನ್ನು ಭಯ ಸಂಶಯಗಳಿಂದಲೇ ವೀಕ್ಷಿಸಿ ಅನಂತರ ನಿಧಾನವಾಗಿ ಹೊರಬಂತು. ಮಾರನ ವಿವರಣೆಯಿಂದ ಓತಿಕ್ಯಾತನಂತೆ ಇರಬಹುದೆಂದುಕೊಂಡಿದ್ದ ನನಗೆ ಆ ಉಡುವಿನ ಗಾತ್ರ ಆಕಾರಗಳನ್ನು ನೋಡಿ ಗಾಬರಿಯಾಯ್ತು. ಸುಮಾರು ಐದು ಅಡಿಗಳಷ್ಟು ಉದ್ದ ಇದ್ದ ಆ ಉಡುವಿನ ಬಾಲವೇ ಕೊಡಲಿ ಕಾವಿನಷ್ಟು ದಪ್ಪ ಇತ್ತು. ಅದಕ್ಕೆ ನಾನು ರಚಿಸಿದ್ದ ಮರೆಯನ್ನು ನೋಡಿ ಏನೋ ಸಂಶಯ ಬಂದಿರಬೇಕು. ಸಂಶಯದ ಕಣ್ಣುಗಳಿಂದ ಕುತ್ತಿಗೆ ಓರೆ ಮಾಡಿಕೊಂಡು ಕೊಂಚಹೊತ್ತು ಮರೆಯನ್ನೇ ವೀಕ್ಷಿಸಿದ



ಉಡು ಕೊನೆಗೆ ಬಂದ ದಾರಿಯಲ್ಲೇ ಹಿಂದಕ್ಕೆ ಹೊರಟು ಹೋಯ್ತು.

ಅನೇಕ ಮಿಲಿಯ ವರ್ಷಗಳ ಹಿಂದೆ ಇಡೀ ಭೂಮಂಡಲವನ್ನು ಈ ಜಾತಿಯ ಬೃಹದ್ಗಾತ್ರದ ಮಹೋರಗಗಳು ತುಂಬಿದ್ದವೆಂಬುದನ್ನು ಓದಿದ್ದ ನನಗೆ ಅವತ್ತು ಅವುಗಳ ಪ್ರತಿನಿಧಿಯನ್ನೇ ನೋಡಿದಷ್ಟು ಸಂತೋಷವಾಯ್ತು. ಇದಾದ ನಂತರ ಇನ್ನೊಮ್ಮೆ ಹಕ್ಕಿಗಳ ಮೊಟ್ಟೆ ಕದಿಯುತ್ತಿದ್ದ ಈ ಉಡು ಕದಿಯುತ್ತಿದ್ದಾಗಲೇ ಕಣ್ಣಿಗೆ ಬಿತ್ತು. ತಾಯಿ ಹಕ್ಕಿಯ ಚೀರಾಟವನ್ನು ದೂರದಿಂದಲೇ ಗಮನಿಸಿದ್ದ ನಾನು ಏನೋ ಅನಾಹುತ ಸಂಭವಿಸಿದೆ ಎಂದುಕೊಂಡೇ ಅಲ್ಲಿಗೆ ಬಂದಿದ್ದೆ. ನನ್ನನ್ನು ನೋಡಿದ್ದೇ ತಡ ಹಕ್ಕಿಗೂಡಿದ್ದ ಗಿಡದ ಮೇಲಿಂದ ದೊಪ್ಪನೆ ಕೆಳಕ್ಕೆ ನೆಗೆದು ಸದ್ದು ಮಾಡುತ್ತಾ ಓಡಿಹೋಯಿತು. ಆಗಲೇ ಅದಕ್ಕೆ ನಾನು ಮಾನಿಟರ್ ಎಂದು ಹೆಸರಿಟ್ಟಿದ್ದು.

ಈ ಮಾನೀಟರನ ಆಹಾರ ಹಕ್ಕಿಗಳ ಮೊಟ್ಟೆ, ಮರಿಗಳಲ್ಲದೆ ಹುಳುಹುಪ್ಪಟೆ, ಗೆದ್ದಲು, ಇರುವೆ ಇತ್ಯಾದಿಗಳೂ ಇರಬಹುದು. ಇವುಗಳಿಗಾಗಿಯೇ ಇದು ನಾವು ಗುಡಿಸಿ ರಾಶಿ ಮಾಡಿದ ತರಗೆಲೆಗಳನ್ನು ಕೆದಕಿ ಚೆಲ್ಲಾಪಿ ಮಾಡುತ್ತಿದ್ದುದು, ನಾನು ಈ ಮಾನೀಟರನ್ನು ಕಂಡ ಬಗ್ಗೆ ಮಾರನಿಗೆ ಹೇಳಿದಾಗ ಅವನು ಹೆಚ್ಚಿಗೆ ಏನೂ ಪ್ರತಿಕ್ರಿಯೆ ತೋರದೆ, "ಅದನ್ನು ಹೊಡೆದುಕೊಡಿ, ನಾನಾದರೂ ಹುರಿದು ತಿನ್ನುತ್ತೇನೆ. ಇಲ್ಲದಿದ್ದರೆ ಕಾಡಿನಲ್ಲಿ ನಾಯಿ-ನರಿ ತಿಂದರೆ ಅನ್ಯಾಯ ಆಗುತ್ತದೆ" ಎಂದ. ಅದನ್ನು ನಾಯಿನರಿ ತಿಂದರೆ ಅನ್ಯಾಯ, ತಾನು ತಿಂದರೆ ನ್ಯಾಯ ಎಂದು ಯಾವ ತತ್ವದ ಆಧಾರದ ಮೇಲ ಎಮಾರ ನಿರ್ಧರಿಸಿದನೋ ಕೇಳಲಿಲ್ಲ, ಅವನಿಗೆ ಒಂದಾನೊಂದು ಕಾಲದಲ್ಲಿ ಭೂಮಂಡಲದ ಮೇಲೆ ವಾಸಿಸಿದ್ದ ಬೆಟ್ಟದಷ್ಟು ದೊಡ್ಡ ಉಡುಗಳ ಬಗ್ಗೆ ಹೇಳಿದೆ. 'ಅವೆಲ್ಲಾ ಏನಾದವು' ಎಂದು ಕೇಳಿದ. ಎಲ್ಲಾ ಭೂಕಂಪದಲ್ಲಿ ಮಣ್ಣಿನ ಅಡಿ ಹುಗಿದು



ಹೋದವು ಎಂದು ಹೇಳಿದೆ. 'ಛೇ ಛೇ ಎಂಥಾ ಅನ್ಯಾಯ' ಎಂದು

ಖಿನ್ನನಾದ ಮಾರ.

– ಈ ಮೇಲಿನ ನಿರೂಪಣೆಯಲ್ಲಿ ತೇಜಸ್ವಿಯವರ ಕಥನಕ್ರಮದ ಕೆಲವು ಮುಖ್ಯ ಅಂಶಗಳನ್ನು ಗಮನಿಸಬಹುದು. ತೇಜಸ್ವಿಯವರು ಉಡುವನ್ನು ಈ ಮುಂಚೆ ಎಲ್ಲಿಯೂ ನೋಡಿರುವುದಿಲ್ಲವೆಂದು ಪ್ರಾಮಾಣಿಕತೆಯಿಂದ ಒಪ್ಪಿಕೊಳ್ಳುತ್ತಾರೆ. ಉಡುವಿನ ಕುರಿತಾದ ಓದಿನ ತಿಳುವಿಕೆಯೂ ಇದೆ. ಒಂದು ಮಗುವಿನ ಕುತೂಹಲ, ಪ್ರಾಮಾಣಿಕತೆ, ಮುಗ್ಧತೆ ಮತ್ತು ತಾನು ಎಲ್ಲಾ ತಿಳಿದಿರುವೆನೆಂಬ ಅಹಂಕಾರ ರಹಿತ ಮನಸ್ಥಿತಿ ಎಲ್ಲಾ ಮೇಳೈಸಿ ತೇಜಸ್ವಿಯವರ ಕಥನಕಲೆ ವಿಶಿಷ್ಟವಾದುದಾಗದೆ. ಇದಕ್ಕೆ ಪೂರಕವಾಗಿ ಓದಿಗೊಂದು ಲವಲವಿಕೆ ಉತ್ಸಾಹ ತುಂಬಲು ಅವರಿಗಿರುವ ಹಾಸ್ಯಪ್ರಜ್ಞೆ ಕನ್ನಡದ ಬೇರಾವ ಲೇಖಕನಿಗೂ ಇರಲಾರದೆನ್ನಿಸುತ್ತದೆ.

ಹೀಗೆ ಅನುಭವ - ಅನುಭವಕ್ಕೊಡ್ಡಿಕೊಳ್ಳುವ ಪ್ರಕ್ರಿಯೆ - ನಿರೂಪಣಾ ಕ್ರಮ, ಶೈಲಿ, ವರ್ಣನೆ, ಹಾಸ್ಯಪ್ರಜ್ಞೆ ಎಲ್ಲಾ ಸೇರಿ ತೇಜಸ್ವಿಯವರ ಅಭಿವ್ಯಕ್ತಿ ವಿಶಿಷ್ಟವೆನ್ನಿಸುತ್ತದೆ. ಹಾಗೆಯೇ ವೈಜ್ಞಾನಿಕತೆ, ಪರಿಸರ ಸಂಬಂಧಿ ತಿಳುವಳಿಕೆ ಎಲ್ಲಾ ಇದಕ್ಕೆ ಪೂರಕವಾಗಿ ಬರುವುದರಿಂದಲೂ ತೇಜಸ್ವಿಯವರ ಹಿಂದಿರುವ ಪ್ರಧಾನ ಗ್ರಹಿಕೆಯು ಕಾಡು ಕಾಡನ್ನೊಳಗೊಂಡ ಪರಿಸರದ್ದಾಗಿರುವುದರಿಂದ ಅವರ ಪರಿಸರಕ್ಕೆ ಸಂಬಂಧಿಸಿ ಕಥನಗಳೆಲ್ಲವೂ ಕನ್ನಡ ಸಾಹಿತ್ಯಲೋಕದ ಆಯಾಮವನ್ನು ಹಿಗ್ಗಿಸಿದವುಗಳೇ ಆಗಿವೆ.

ಕಿವಿಯೊಡನೆ ಒಂದು ದಿನ

ಈ ಭಾಗದಲ್ಲಿ ತೇಜಸ್ವಿ ತನ್ನ ಪ್ರೀತಿಯ ನಾಯಿ ಕಿವಿಯೊಡನೆ ಕಳೆದ ಕ್ಷಣಗಳನ್ನು ನೆನಪಿಸಿಕೊಳ್ಳುತ್ತಾ ಅದರ ಜೊತೆಯಲ್ಲಿನ ತನ್ನ ಅನುಭವಗಳನ್ನು ವಿವರಿಸಿದ್ದಾರೆ. ತೇಜಸ್ವಿಯವರ ಅತ್ಯಂತ ಪ್ರೀತಿಯ ನಾಯಿ ಕಿವಿ ಈ ನಾಯಿಯ ಕಿವಿಗಳು ದೊಡ್ಡದಾಗಿ ಇದ್ದುದರಿಂದಲೇ ಅದಕ್ಕೆ ಕಿವಿ ಎಂಬ ಹೆಸರು ಬಂದದ್ದು ನನ್ನೊಡನೆ ಇದ್ದ ಅಸಾಧಾರಣ ಬುದ್ಧಿಯ ಶಿಕಾರಿ ನಾಯಿ ತೋಟ ಮಾಡುವ ಸಂದರ್ಭದಲ್ಲಿ ತೇಜಸ್ವಿ ಕೋವಿ ಹೆಗಲಿಗೇರಿಸಿಕೊಂಡು ದಿನವಿಡೀ ಅದರೊಡನೆ ಕಾಡು ಅಲೆಯುವುದೇ ಕೆಲಸವಾಗಿತ್ತು.

ಈ ಸಂದರ್ಭದಲ್ಲಿ ತನ್ನ ಪ್ರೀತಿಯ ನಾಯಿ ಕಿವಿ ಮತ್ತು ಗೆಳೆಯ ಶ್ರೀರಾಮ್ ಜೊತೆ ಕಳೆದ, ಅವರೊಂದಿಗೆ ಕಾಡು ಅಲೆದು ಶಿಕಾರಿ ಮಾಡಿದ್ದು, ತನ್ನ ಗೆಳೆಯನಿಗೆ ಊಟದ ಮೇಲಿದ್ದ ಅಭಿರುಚಿಯನ್ನು ಅದರಿಂದಾದ ಅನುಭವಗಳನ್ನು ಈ ಕತೆಯಲ್ಲಿ ಹೇಳಲು ಪ್ರಯತ್ನಿಸಿದ್ದಾರೆ.



ಪರಿಸರದ ಕತೆಗಳಲ್ಲಿ ಬರುವ ಪಾತ್ರಗಳಲ್ಲಿ ಅನೇಕವು ಈಗ ಶಾಶ್ವತವಾಗಿ ಅಂತತೆಯಲ್ಲಿ ಲೀನವಾಗಿವೆ. ಕಿವಿ, ಬೈರ, ಮಾಸ್ತಿ, ಮಾರ ಈಗ ಎಲ್ಲೂ ಇಲ್ಲ. ಈಗಲೂ ಈ ಹಳೆಯ ಘಟನೆಗಳನ್ನೆಲ್ಲಾ ಹೇಳಿಕೊಂಡು ಆನಂದಿಸಲು ಸಿಗುವವರಲ್ಲಿ ನನ್ನ ಗೆಳೆಯ ಶ್ರೀರಾಮ ಒಬ್ಬರು.

ಯುನಿವರ್ಸಿಟಿಯಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿರುವ ಶ್ರೀರಾಮ ಕೆಲವು ದಿನ ಕಿವಿಯ ಸಹಾಯಕರಾಗಿ ಶಿಕಾರಿ ತಿರುಗಿದ್ದು ಸೋಜಿಗದ ಸಂಗತಿ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಶ್ರೀರಾಮ ಆಗತಾನೆ ಇಂಗ್ಲೀಷ್ ಎಂ.ಎ. ಮುಗಿಸಿ ಕೆಲಸಕ್ಕೆ ಸೇರಿದ್ದರು. ಆಗ ಕೆಲವು ದಿನಗಳ ವರೆಗೆ ಅವು ಶೃಂಗೇರಿಯ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಆಗತಾನೆ ಕಾಡು ಕೊಂಡಿದ್ದ ನಾನು ಇನ್ನೂ ಮನೆಕಟ್ಟಿ ಮುಗಿಸಿರಲಿಲ್ಲ. ಆದ್ದರಿಂದ ಗೆಳೆಯ ವಾಸುರವರ ಭೂತನಕಾಡು ತೋಟದ ಮನೆಯಲ್ಲಿದ್ದೆ. ಶೃಂಗೇರಿಗೂ, ಅವರ ತೋಟಕ್ಕೂ ಹೆಚ್ಚಿಗೆ ದೂರ ಇರಲಿಲ್ಲ. ಆದ್ದರಿಂದ ಶ್ರೀರಾಮ ಶನಿವಾರ, ಭಾನುವಾರಗಳಲ್ಲಿ ಹಾಗು ಇತರ ರಜಾ ದಿನಗಳಲ್ಲಿ ನೇರವಾಗಿ ಅಲ್ಲಿಗೇ ಬಂದು ಬಿಡುತ್ತಿದ್ದರು.

ಗೆಳಯ ಶ್ರೀರಾಮ ಬೆಂಗಳೂರಿನ ಬಯಲುಸೀಮೆ ಹಳ್ಳಿ ಬ್ಯಾತದ ಕಡೆಯವರು. ಅವರಿಗೆ ಮಲೆನಾಡಿನ ಕಾಡು, ಕಾಡಿನ ಪ್ರಾಣಿಗಳು, ಶಿಕಾರಿ ಇತ್ಯಾದಿಗಳೆಲ್ಲ ಅಪರಿಚಿತವೆಂದೇ ಹೇಳಬಹುದು. ಎಂದೇ ಕಾಡಿನ ಬಗ್ಗೆ, ಅಲ್ಲಿನ ಪಶುಪಕ್ಷಿಗಳ ಬಗ್ಗೆ, ಶಿಕಾರಿಯ ಬಗ್ಗೆ ನನಗಿದ್ದ ಅನುಷಂಗಿಕ ಆಸಕ್ತಿ ಅವರಿಗೆ ಇರಲು ಸಾಧ್ಯವಿರಲಿಲ್ಲ. ಆದರೆ ನಮಗಿದ್ದ ಒಂದು ಮುಖ್ಯ ಸಮಾನ ಆಸಕ್ತಿ ಎಂದರೆ ಮಾಂಸಹಾರ. ನಾಲ್ಕುದಿನ ತಿಳಿಸಾರು ಅನ್ನ ಊಟ ಮಾಡಿದರೆ ಸಾಕು, ಜಾತಿ ಕೆಟ್ಟು ಹೋದವರಂತೆ ಮಾತಾಡುತ್ತಿದ್ದೆವು. ಆದರೆ ಶ್ರೀರಾಮ ಕೆಲವು ವಿಷಯಗಳಲ್ಲಿ ನನಗಿಂತ ಮುಂದೆ ಹೋಗಿದ್ದರು. ಅವರಿಗೆ ಮಾಂಸ ಎಂದ ಮೇಲೆ ಮುಗಿಯಿತು, ಎಂದೂ ಆದು ಯಾವುದರದ್ದೆಂದು ಕೇಳುವ ಗೋಜಿಗೆ ಹೋಗುತ್ತಿರಲಿಲ್ಲ. ಅದು ಯಾವುದರದ್ದಾದರೂ ಒಂದೇ ಎಂಬುದು ಅವರ ಸಿದ್ಧಾಂತ. ಕೆಲಕೆಲವು ಜಾತಿಗಳಿಗೆ



ಕೆಲಕೆಲವು ಪ್ರಾಣಿಗಳ ಮಾಂಸ ನಿಶಿದ್ಧ ಎನ್ನುವ ಕಟ್ಟಳೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿ ಈ ವಿಷಯದಲ್ಲಂತೂ ಕಟ್ಟಾ ಜಾತ್ಯಾತೀತ ಧೋರಣೆ ತಳೆದಿದ್ದರು. ತಾತ್ವಿಕವಾಗಿ ಇದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನಾದರೂ ಕೆಲವು ಪ್ರಾಣಿಗಳ ಮಾಂಸ ತಿನ್ನಲು ನನಗೆ ಒಳಗೊಳಗೇ ಅಸಹ್ಯವಾಗುತ್ತೆ. ಆದರೆ ಶ್ರೀರಾಮ ಹಾಗಲ್ಲ. ಅವರ ಮಟ್ಟಿಗೆ ಪ್ರಶ್ನೆ ಇರುವುದು ಮಾಂಸ ತಿನ್ನ ಬೇಕೋ ಬೇಡವೋ ಎನ್ನುವುದಷ್ಟೆ. ತಿನ್ನಬಹುದು ಎಂದಾದ ಮೇಲೆ ಸರ್ವ ಚರಾಚರ ವಸ್ತುಗಳಲ್ಲಿ ಯಾವುದಾದರೂ ಆಗಬಹುದು. ಹಿಂದೂಗಳು ದನ ತಿನ್ನಬಾರದು, ಮುಸ್ಲಿಮರು ಹಂದಿ ತಿನ್ನಬಾರದು ಇವುಗಳೆಲ್ಲ ಶ್ರೀರಾಮರ ಮಟ್ಟಿಗೆ ಒಂದು ಚೂರು ಅರ್ಥವಿಲ್ಲದ್ದು.

ನಾವೆಲ್ಲಾ ಶ್ರೀರಾಮರ ಈ ಧೋರಣೆಯನ್ನು ತಾತ್ವಿಕಗವಾಗಿ ಸಂಪೂರ್ಣ ಒಪ್ಪಿದರೂ ಅವರ ಈ ಸರ್ವಭಕ್ಷಕ ಗುಣವನ್ನು ತಮಾಷೆ ಮಾಡುತ್ತಿದ್ದೆವು. ಆದರೂ ಅವರು ಇವ್ಯಾವುದಕ್ಕೂ ಜಗ್ಗಿರಲಿಲ್ಲ. ಈಚೆಗೆ ಶ್ರೀರಾಮರ ಈ ಧೋರಣೆಯನ್ನು ಒಪ್ಪಿ ಅವರ ಅನುಯಾಯಿಗಳಾಗಿ ಕಡಿದಾಳು ದಯಾನಂದ, ಗಾಂಗೇಯ ಮುಂತಾದ ಅನೇಕ ಶಿಷ್ಯರು ರೂಪುಗೊಂಡಿದ್ದಾರೆ. ಅವರ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ಇಷ್ಟೆ. ಎರಡು ಕಾಲಿನದರಲ್ಲಿ ಮನುಷ್ಯ, ನಾಲ್ಕು ಕಾಲಿನದರಲ್ಲಿ ಕುರ್ಚಿ ಮೇಜು ಮಂಚ ಇಷ್ಟನ್ನು ಬಿಟ್ಟು ಮಿಕ್ಕ ಯಾವುದನ್ನು ಬೇಕಾರೂ ಮನುಷ್ಯ ತಿನ್ನಬಹುದು. ಈ ಶ್ರೀರಾಮ ಪಂಥಿಗಳು ಶ್ರೀರಾಮ್‌ಗಿಂತಾ ಒಂದು ಹೆಜ್ಜೆ ಮುಂದೆ ಹೋಗಿ ಪಶುಪಕ್ಷಿಗಳನ್ನಲ್ಲದೆ ಕ್ರಿಮಿಕೀಟಗಳಲ್ಲೂ ಯಾವುದು ರುಚಿ ಎನ್ನುವ ಸಂಶೋಧನೆಯಲ್ಲಿ ತೊಡಗಿದ್ದಾರೆ. ಅಂತೂ ಜಾತ್ಯಾತೀತ ಭಾರತವನ್ನು ರೂಪಿಸುವುದರಲ್ಲಿ ಶ್ರೀರಾಮರೂ ಗಣನೀಯ ಪಾತ್ರವಹಿಸಿದ್ದಾರೆಂದು ನಿಸ್ಸಂಶಯವಾಗಿ ಹೇಳಬಹುದು.

ಪ್ರತಿ ಸಾರಿ ಶೃಂಗೇರಿಯಿಂದ ಶ್ರೀರಾಮ ಬಂದಾಗ, ಏನ್ರೀ ಶೃಂಗೇರಿ ಸಮಾಚಾರ ಎಂದು ನಾನು ಕೇಳಿದ ಕೂಡಲೇ ಶೃಂಗೇರಿಯ ಬ್ರಾಹ್ಮಣ ಸಮುದಾಯವನ್ನೂ, ಅವರ ತಿಳಿಸಾರು ಅನ್ನದ ಪುಳ್ಚಾರಿ



ಊಟವನ್ನೂ ಮನಸಾರೆ ದೂಷಿಸಿ, ನಾಲಿಗೆ ರುಚಿ ಎಲ್ಲಾ ಎಕ್ಕುಟ್ಟಿಹೋಗಿದೆ. ಊಟದಲ್ಲಿ ಸ್ವಾರಸ್ಯವೇ ಕಾಣುತ್ತಿಲ್ಲ. ಅವರ ಬೇಳೆತೊವ್ವೆ ತಿಂದು ಹೊಟ್ಟೆಯೊಳಗೆ ಗ್ಯಾಸ್ ತುಂಬಿ ಬೆಲೂನಾಗಿ ಹೋಗಿದೆ. ಒಟ್ಟಿನಲ್ಲಿ ಜೀವನದ ಬಗ್ಗೆಯೇ ಜಿಗುಪ್ಸೆ ಶುರುವಾಗಿದೆ ಎಂದು ಹೇಳುತ್ತಿದ್ದರು. ಪುಳ್ಚಾರಿ ಊಟವನ್ನು ತಮ್ಮ ಕೊಲೆಯ ಸಂಚು ಎನ್ನುವಂತೆ ವರ್ಣಿಸುತ್ತಿದ್ದರು. ಇದು ನಾವು ಶಿಕಾರಿ ಹೊರಡುವ ಮೊದಲು ರೂಪಿಸುತ್ತಿದ್ದ ಮುನ್ನುಡಿ. ಕೂಡಲೇ ಕಾಡಿಗೆ ಹೋಗಿ ಶಿಕಾರಿ ಮಾಡಬೇಕಾದ ತುರ್ತುಪರಿಸ್ಥಿತಿಯನ್ನು ನಮಗೆ ನಾವೇ ಆರೋಪಿಸಿಕೊಳ್ಳಲು ಮಾಡುತ್ತಿದ್ದ ನಾಟಕ.

ನನ್ನ ಮತ್ತು ಶ್ರೀರಾಮರ ರಜಾದಿನಗಳ ದಿನಚರಿ ಎಷ್ಟೊಂದು ಕರಾರುವಾಕ್ಕಾಗಿ ನಡೆಯುತ್ತಿತ್ತೆಂದರೆ ಕಿವಿಗೂ ಇದು ಚೆನ್ನಾಗಿ ಮನದಟ್ಟಾಗಿ ಶೃಂಗೇರಿಯಿಂದ ಶ್ರೀರಾಮ ಆಗಮಿಸಿದ ಕೂಡಲೆ ಶಿಕಾರಿ ಹೊರಡಲು ಸಿದ್ಧವಾಗಿ ಗಂಟಲು ಹರಿಯುವಂತೆ ಕೂಗುತ್ತ ಸರಪಳಿ ಕಿತ್ತುಕೊಳ್ಳುವಂತೆ ಜಗ್ಗುತ್ತಿತ್ತು.

ಶ್ರೀರಾಮ್‌ಗೆ ಕಾಡು ತಿರುಗುವುದರಲ್ಲಾಗಲೀ, ಮುಳ್ಳು ತರಚಿಸಿಕೊಂಡು ಕಾಡು ನುಗ್ಗುವುದಕ್ಕಾಗಲೀ ಅಂಥ ಏನೂ ಆಸಕ್ತಿ ಇರಲಿಲ್ಲ. ಅವರಿಗೆ ಕೋವಿ ಹಿಡಿಯುವುದಕ್ಕೂ ಬರುತ್ತಿರಲಿಲ್ಲ.

ವಾಸು ಅವರ ತೋಟದಲ್ಲಿ ದಾಳಿ ಇಡುತ್ತಿದ್ದ ಮಂಗಗಳನ್ನು ಓಡಿಸಲುನಲ್ಲಿ ಪೈಪಿನ ತುಂಡಿನಲ್ಲಿ ಧಡಾಕಿ ಮಾಡಿಟ್ಟಿದ್ದರು. ಅದರೊಳಗೆ ಧಡಾಕಿ ಮದ್ದು ಹಾಕಿ ಸಲಾಕಿಯಿಂದ ಕುಟ್ಟಿದರೆ ಸಾರು ಕಿವಿ ಗಡಚಿಕ್ಕುವಂಥ ಆಸ್ಫೋಟನೆಯಾಗುತ್ತಿತ್ತು. ಕಿವಿ ಜೊತೆ ಶಿಕಾರಿ ಹೊರಟಾಗ ಶ್ರೀರಾಮಂ ಕೈಯಲ್ಲಿ ಇರುತ್ತಿದ್ದ ಆಯುಧ ಇದು. ಪ್ರಾಣಿಗಳನ್ನು ಸಂಹರಿಸಲಾಗದಿದ್ದರೂ ಇದನ್ನು ಆಸ್ಫೋಟಿಸಿ ಆತ್ಮರಕ್ಷಣೆಯನ್ನಾದರೂ ಮಾಡಿಕೊಳ್ಳಬಹುದೆಂದು ಅವರ ನಂಬಿಕೆ. ಕಾಡಿನಲ್ಲಿ ಶ್ರೀರಾಮ್ ಕೆಲಸ ಎಂದರೆ ಕಿವಿಯನ್ನು ಹಿಂಬಾಲಿಸಿ ಅದಕ್ಕೆ ಬೆಂಬಲ ಮತ್ತು ಪ್ರೋತ್ಸಾಹ ಕೊಡುವುದು. ಕಾಡಿನ ದಟ್ಟಣೆಯಲ್ಲಿ ಅದು ಪ್ರಾಣಿಗಳನ್ನು ತಡೆದುಕೊಂಡು ಬೊಗಳಲಾರಂಭಿಸಿದಾಗ ಇವರು ಹಿಂದಿನಿಂದ ಧಡಾರೆಂದು ಧಡಾಕಿ ಆಸ್ಫೋಟಿಸಿ ಭೂ ಭೂ



ಎಂದು ಬೊಬ್ಬೆ ಮಾಡಿ ಕಿವಿಯನ್ನು ಪ್ರೋತ್ಸಾಹಿಸುತ್ತಿದ್ದರು. ಅದರ ಸದ್ದನ್ನು ಕೋವಿಯ ಸದ್ದೆಂದೇ ತಿಳಿದು ಪ್ರಾಣಿಗಳು ನೆಗೆದು ದಿಕ್ಕಾಪಾಲಾಗಿ ಓಡುತ್ತಿದ್ದವು. ಕೆಲವು ನನ್ನತ್ತ ಓಡಿಬರುತ್ತಿದ್ದುವು. ಕೆಲವು ಶ್ರೀರಾಮ್ ಕಡೆಯೇ ನುಗ್ಗಿ ಓಡಿದ್ದೂ ಉಂಟು. ಹಾಗೇನಾದರೂ ಅವರ ಕಣ್ಣಿಗೆ ಕಂಡು ಓಡಿ ಹೋದರೆ ಆಗ ಶ್ರೀರಾಮ್ ಕೋಪ ನೋಡಬೇಕು ಸರಿಯಾದ ದಿಕ್ಕಿನಲ್ಲಿ ಅದನ್ನು ಓಡಿಸಲಿಲ್ಲೆಂದು ಕಿವಿಗೆ ಬಯ್ಯುತ್ತಾ ಕೋಪ ಇಳಿಯುವವರೆಗೆ ಮರದ ನೆರಳಿನಲ್ಲಿ ಕುಳಿತು ಸುಧಾರಿಸಿಕೊಳ್ಳುತ್ತಿದ್ದರು. ಸಾಧಾರಣವಾಗಿ ನಮಗೆ ಸಿಗುತ್ತಿದ್ದುದು ಆಗ ಅಸಂಖ್ಯಾತವಾಗಿದ್ದ ಕಾಡು ಕೋಳಿಗಳು, ಒಮ್ಮೊಮ್ಮೆ ಕಾಡು ಕುರಿ, ಮೊಲ ಇತ್ಯಾದಿ. ಅಪರೂಪಕ್ಕೆ ಕಾಡು ಹಂದಿ, ನಾವು ಮೂರೇ ಜನರಾದ್ದರಿಂದ ಕಾಡು ಹಂದಿ ಹೊಡೆಯುವುದು ನಮಗೆ ತುಂಬಾ ಕಷ್ಟವಾಗುತ್ತಿತ್ತು. ನಾಯಿಯನ್ನೂ, ಶ್ರೀರಾಮನ್ನೂ ಕೊಂಚವೂ ಲಕ್ಷ್ಯಕ್ಕೆ ತೊಗೆದುಕೊಳ್ಳದೆ ಗುರುಗುಟ್ಟುತ್ತಾ ಹಂದಿಗಳು ಎಷ್ಟೋ ಸಾರಿ ಶ್ರೀರಾಮ್ ಕಾಲ ಬಳಿಯೇ ನುಗ್ಗಿ ಓಡಿಹೋಗಿವೆ. ಇಪ್ಪತ್ತೈದು ವರ್ಷಗಳ ತರುವಾಯ ಈಗ ಅದನ್ನು ಜ್ಞಾಪಿಸಿದರೂ ಎಷ್ಟೊಂದು ಕೇಜಿ ಮಾಂಸ ಅವತ್ತು ಕೈತಪ್ಪಿ ಹೋಯ್ತು ಎಂದು ನಿಟ್ಟುಸಿರು ಬಿಡುತ್ತಾ ಶ್ರೀರಾಮ್ ಶೋಕ ಸೂಚಕ ಮೌನ ಆಚರಿಸುತ್ತಾರೆ.

ಒಂದು ದಿನ ಭಾನುವಾರ ಬೆಳಿಗ್ಗೆ ನಾನು, ಶ್ರೀರಾಮು, ಕಿವಿ ಕೋವಿಯನ್ನೂ, ಢಡಾಕಿಯನ್ನೂ ಹಿಡಿದು ಹೊರಟೆವು. ಹೊಂಬಣ್ಣದ ಬಿಸಿಲಿನಲ್ಲಿ ಹರಟೆ ಹೊಡೆಯುತ್ತಾ, ಬೆಟ್ಟಗುಡ್ಡಗಳನ್ನು ಏರಿಳಿಯುತ್ತಾ ಕುದುರೆಗುಂಡಿ ತೋಟದ ಬಳಿ ಇದ್ದ ಕಾಡಿನ ಕಡೆಗೆ ಹೊರಟೆವು. ತಾರೆ ಮರಗಳು ಹೂ ಬಿಡುವ ಕಾಲವಾದ್ದರಿಂದ ಇಡೀ ಪರಿಸವೆಲ್ಲಾ ಮತ್ತು ಹಿಡಿಸುವಂಥ ಜೇನಿನ ವಾಸನೆಯಿಂದ ತುಂಬಿ ಹೋಗಿತ್ತು. ಕುದುರೆಗುಂಡಿ ಬಳಿ ಎರಡು ಬೆಟ್ಟಗಳ ನಡುವೆ ಕಾಡಿನಲ್ಲಿ ಚಿಕ್ಕ ಹಳ್ಳ ಒಂದು ಹರಿಯುತ್ತದೆ. ಹಳ್ಳದ ತೇವಕ್ಕೆ ಅದರ ಇಕ್ಕೆಲಗಳಲ್ಲೂ ದಟ್ಟವಾದ ಕಾಡು ಬೆಳೆದಿತ್ತು. ಬೇಸಿಗೆಯಲ್ಲಿ ಈ ಜಾಗದಲ್ಲಿ ಯಾವಾದರೂ ಕಾಡು



ಪ್ರಾಣಿಗಳು ಇದ್ದೇ ಇರುತ್ತಿದ್ದವು.

ಶ್ರೀರಾಮ ಆ ಕಾಡಿನ ಒಂದು ತುದಿಯಿಂದ ಕಿವಿ ಬಿಟ್ಟುಕೊಂಡು ಧಡಾಕಿ ಸದ್ದು ಮಾಡುತ್ತಾ ಪ್ರಾಣಿಗಳನ್ನು ಓಡಿಸುತ್ತಿದ್ದರು. ನಾನು ಇನ್ನೊಂದು ತುದಿಯಲ್ಲಿ ಕೋವಿ ಹಿಡಿದು ನಿಲ್ಲುತ್ತಿದ್ದೆ. ಯಾವುದಾದರೂ ಗ್ರಹಚಾರ ಕೆಟ್ಟಪ್ರಾಣಿಗಳು ನಾನಿದ್ದಲ್ಲಿಗೆ ಓಡಿ ಬಂದರೆ ನಾನು ಹೊಡೆಯುತ್ತಿದ್ದೆ. ನಮ್ಮ ವ್ಯೂಹಕ್ಕೆ ಕೆಲವು ವೇಳೆ ಕಿವಿ ಅತ್ಯುತ್ಸಾಹದಿಂದ ನಾವು ಆ ಜಾಗ ತಲುಪುವ ಮೊದಲೇ ನುಗ್ಗಿ ಪ್ರಾಣಿಗಳನ್ನು ಎತ್ತೆತ್ತಲೋ ಓಡಿಸಿ ಬಿಡುತ್ತಿತ್ತು. ಅವತ್ತು ಯಥಾ ಪ್ರಕಾರ ಶ್ರೀರಾಮ ಧಡಾಕಿ ಸದ್ದು ಮಾಡುತ್ತಾ ಅಟ್ಟಿಕೊಂಡು ಬಂದರು. ನಮ್ಮ ದುರ್ದೈವಕ್ಕೆ ಆ ಕಾಡಿನಲ್ಲಿ ಯಾವ ಪ್ರಾಣಿಯೂ ಕಾಣಲಿಲ್ಲ. ಶ್ರೀರಾಮ ಕಿವಿ ಇಬ್ಬರೂ ಕೂಗಿಕೊಂಡು ಅಟ್ಟಿ ಅಟ್ಟಿ ಸುಸ್ತಾದರು. ಹೊತ್ತು ಮೇಲೇರಿ ನೆತ್ತಿಯ ಮೇಲೆ ಸೂರ್ಯ ಉರಿಯತೊಡಗಿದ್ದರಿಂದ ಬಿಸಿಲು ನಾವು ಹೊರಟಾಗ ಇದ್ದ ಆಕರ್ಷಣೆ ಕಳೆದುಕೊಂಡಿತ್ತು. ಸೆಖೆ ತಡೆಯಲಾರದೆ ಸುಸ್ತಾದ ಕಿವಿ ಹಳ್ಳದ ಕೆಸರಿನಲ್ಲಿ ಬಿದ್ದು ಹೊರಳಾಡಿ ಮೈಯ್ಯೆಲ್ಲಾ ಕೆಸರು ಹಚ್ಚಿಕೊಂಡು ಹಂದಿ ಮರಿಯ ಹಾಗೆ ಕಾಣುತ್ತಿತ್ತು. ಒಂದು ಮಾರು ನಾಲಿಗೆ ಹೊರ ಬಿಟ್ಟು ಕೊಂಡು ಏದುಸಿರು ಬಿಡುತ್ತಿದ್ದ ಅದರೊಟ್ಟಿಗೆ ಶ್ರೀರಾಮ ನಾನು ನಿಂತಲ್ಲಿಗೆ ಬಂದರು.

ಶಿಕಾರಿ ಯಾಕೋ ಬಿಕಾರಿ ಆಗೋ ಹಂಗೆ ಕಾಣ್ತದಲ್ಲ ಎಂದರು.

ಇಲ್ಲಿ ಪ್ರಾಮ ಇಲ್ಲಾಂದರೆ ಏನ್ರಿ ನೀವು ಸರಿಯಾಗಿ ಗಲಾಟೆ ಮಾಡಿ ಓಡಿಸಲಿಲ್ಲ ಕಾಣ್ತದೆ ಎಂದೆ.

ನಿಮಗೇನ್ ಸಾರ್ ಇಲ್ಲಿ ನೆರಳಲ್ಲಿ ತಣ್ಣಗೆ ನಿಂತಿರ್ತೀರಿ. ಅಲ್ಲಿ ಮುಳ್ಳು ತರಚಿಕೊಂಡು ಕಾಡು ನುಗ್ಗಿ ಕೂಗುತ್ತಾ ಬರಬೇಕಾದರೆ ನಮಗೆ ಪ್ರಾಣಕ್ಕೆ ಬರ್ತದೆ. ಬಿಸಿಲು ಬೇರೆ ಈ ತರ. ಬಾಯಾರಿಕೆಗೆ ನೀರು ಕುಡಿಯೋಮ ಅಂದರೆ ಕಿವಿ ಹೋಗಿ ನೀರಿಗೆ ಬಿದ್ದು ಹಳ್ಳದ ನೀರೆಲ್ಲಾ ಕೆಸರಾಗಿದೆ ಎಂದು ಶ್ರೀರಾಮ ತಮ್ಮ ಕಷ್ಟ ಕಾರ್ಪಣ್ಯಗಳ ಪಟ್ಟಿಕೊಟ್ಟರು.



ಅಲ್ಲಿಂದ ಮುಂದೆ ಗುಡ್ಡದ ಮೇಲಿನ ಕಾಡಿನ ಕಡೆಗೆ ಹೊರಟೆವು. ವಾಟೆ ಬಿದಿರು ದಟ್ಟವಾಗಿ ಬೆಳೆದಿದ್ದ ಈ ಕಾಡಿನಲ್ಲಿ ಕಾಡು ಕೋಳಿಗಳೂ, ಚಿಟ್ಟು ಕೋಳಿಗಳೂ ಬೇಕಾದಷ್ಟು ಇರುತ್ತಿದ್ದುವು. ಆರೆ ಅವತ್ತು ಮಧ್ಯಾನ್ಹದ ಬಿಸಿಲಿನ ಬೇಗೆಗೋ ಏನೋ, ಕೋಳಿ ಇರಲಿ, ಒಂದು ಓತಿಕ್ಯಾತ ಸಹ ಮುಖ ಹಾಕಲಿಲ್ಲ. ಗುಡ್ಡದ ಏರು ತಗ್ಗುಗಳಲ್ಲಿ ಸುತ್ತೀ ಸುತ್ತೀ ಸುಸ್ತಾದ ನಮಗೆ ನಾನ್ ವೆಜಿಟೇರಿಯನ್ ಊಟದ ಬಗ್ಗೆ ಆಸಕ್ತಿ ಇಂಗತೊಡಗಿತು. ಗುಡ್ಡದ ನೆತ್ತಿಯ ಕಲ್ಲುಗಳೆಲ್ಲಾ ಕೆಂಡದಷ್ಟು ಬಿಸಿಯಾಗಿದ್ದವು ವಾಟೆ ಬೊಂಬಿನ ಬಲೆ ಬಲೆ ನೆರಳಿನಲ್ಲಿ ಕುಳಿತು ಸುಧಾರಿಸಿಕೊಳ್ಳಲೂ ಒಳ್ಳೆ ಜಾಗ ಇರಲಿಲ್ಲ.


ಸುಮ್ಮನೆ ಹೋಗಿ ದುಡ್ಡು ಕೊಟ್ಟು ಒಂದು ಕೆಜಿ ಮಟನ್ ತರೋಣ ನಡೀರಿ. ಶಿಕಾರಿಗೆ ಬೆಂಕಿಹಾಕ ಎಂದು ಶ್ರೀರಾಮ ಹಿಂದಿರುಗುವ ನಿರ್ಧಾರಕ್ಕೆ ಬಂದರು.

ದೊಡ್ಡದಾಗಿ ಶಿಕಾರಿಗೆ ಅಂತ ಬಂದು, ಖಾಲಿ ಕೈಯ್ಯಲ್ಲಿ ಹೋದರೆ ಮರ್ಯಾದೆ ಹೋಗ್ತದಲ್ರೀ ಎಂದೆ.

ಇದರೆಲ್ಲೆಲ್ಲಾ ಏನು ಮರ್ಯಾದೆ ಈ ಕಾಡಲ್ಲಿ ಏನೂ ಇಲ್ಲದಿದ್ದರೆ ನಾವೇನು ಮಾಡೋದಕ್ಕೆ ಆಗತ್ತೆ ನಾವು ಶಿಕಾರಿ ಮಾಡೇ ವಾಪಸಾಗ್ತಿವೀ ಅಂತ ಯಾರಿಗೇನು ಬರಕೊಟ್ಟಿಲ್ವಲ್ಲ ಎಂದು ಹೇಗಾದರೂ ಹಿಂದಿರುಗಲೂ ವಾದ ಆರಂಭಿಸಿದರು ಶ್ರೀರಾಮ್.

....

ಎಷ್ಟೇ ಸುಸ್ತಾಗಿರಲಿ, ಕೋವ ಹಿಡಿದವರಿಗೆ ಶಿಕಾರಿ ಕಣ್ಣಿಗೆ ಕಂಡಾಗಲೂ ಸುಮ್ಮನಿರಲು ಸಾಧ್ಯವೆ ನನ್ನ ನಿರಾಸಕ್ತಿ ಇದ್ದಕ್ಕಿದ್ದಂತೆ ಮಾಯವಾಗಿ ಕೋವಿ ಸಿದ್ಧ ಮಾಡಿಕೊಂಡು ಒಂದೇ ಉಸುರಿಗೆ ಪೊದೆಗಳನ್ನು ಬಳಸಿ ಆಚೆ ಮಗ್ಗುಲಿಗೆ ಓಡಿದೆ. ಕಿವಿ ಯಾವುದೋ ಬೆನ್ನಟ್ಟಿ ಬೊಗಳುತ್ತಾ ಕಾಡಿನೊಳಗೆ ಗಲಾಟೆ ಮಾಡುತ್ತಿತ್ತು. ಕೊಂಚ ಹೊತ್ತು ಪೊದೆಯ ಆಚೆ ಮಗ್ಗುಲಲ್ಲಿ ಕಾದೆ. ಆದರೆ ಯಾವ ಹಂದಿಯೂ ನಾನು ನಿಂತ ಕಡೆಗೆ ಬರಲಿಲ್ಲ. ಕಿವಿ ಬೊಗಳುವುದು ಮಾತ್ರ ಕೇಳುತ್ತಿತ್ತು. ಈಗಲ್ಲದಿದ್ದರೆ ಇನ್ನೊಂದು ನಿಮಿಷಕ್ಕೆ ಹಂದಿ



ನುಗ್ಗಿಯೇ ನುಗ್ಗುತ್ತದೆಂದು ಊಹಿಸಿ ನಿಂತೇ ಇದ್ದೆ.

ಹೀಗೆ ಮೇಲಿನಂತೆ ಸಾಗುವ ಈ ಕಥನಾಕವು ತೇಜಸ್ವಿಯವರು ಕಿವಿಯೊಡನೆ ಕಾಡು ಮೇಡು ಸುತ್ತಿದ್ದನ್ನು ಬೇಟೆಯಾಡಿದ್ದನ್ನು ವಿವರಿಸುತ್ತದೆ. ಕಿವಿ ಇಲ್ಲಿ ಪ್ರಾಣಿ ಮಾತ್ರವಾಗಿರದೆ ಅದಕ್ಕೊಂದು ವ್ಯಕ್ತಿತ್ವವಿರುವುದನ್ನು ಮತ್ತು ಕಾಡಿನೊಂದಿಗಿನ ಬಹುಪಾಲು ಅನುಭವಗಳಲ್ಲಿ ತೇಜಸ್ವಿಯವರ ಜೊತೆ ಕಿವಿಯೂ ಪಾಲುದಾರನಾಗಿತ್ತೆಂಬ ಅಂಶವನ್ನು ಅರಿಯಬಹುದಾಗಿದೆ.

ಮಾಸ್ತಿ ಮತ್ತು ಬೈರ

ತೇಜಸ್ವಿಯವರು ಮೊದಲ ಬಾರಿಗೆ ಈ ಕಥೆಯ ಶೀರ್ಷಿಕೆಯ ಮಾಸ್ತಿಯನ್ನು ಕಂಡಾಗ ವಿವರಿಸುವ ನಿರೂಪಣೆ ಇಂತಿದೆ.

> ಕಿವಿ ಮನುಷ್ಯರನ್ನು ಕಂಡರೆ ಅಷ್ಟೊಂದೇನೂ ಗಲಾಟೆ ಮಾಡತ್ತಿರಲಿಲ್ಲ. ಅದೂ ನಾಗರೀಕ ಉಡುಪಿನಲ್ಲಿ ಯಾರಾದರೂ ಬಂದರೆ ಸುಮ್ಮನೆ ಗುರುಗುಟ್ಟುತ್ತಿತ್ತೇ ವಿನಃ ತುಂಬಾ ಗಲಾಟೆ ಮಾಡುತ್ತಿರಲಿಲ್ಲ. ಅದಕ್ಕೆ ಕಳ್ಳರಿಗೂ, ಸುಳ್ಳರಿಗೂ, ಒಳ್ಳೆಯವರಿಗೂ ವ್ಯತ್ಯಾಸ ಗೊತ್ತಿತ್ತೋ ಇಲ್ಲವೋ ಸಂಶಯ. ಆದರೆ ಬಡವರಿಗೂ, ಶ್ರೀಮಂತರಿಗೂ ಇರುವ ವ್ಯತ್ಯಾಸ ಅದಕ್ಕೆ ಚೆನಾಗಿ ಗೊತ್ತಿತ್ತು. ಸೂಟು ಫ್ಯಾಂಟು ಹಾಕಿಕೊಂಡು, ಕಾರಿನಲ್ಲಿ ಬಂದು ಇಳಿಯುವವರನ್ನು ಕಂಡರೆ ಸುಮ್ಮನೆ ಗುರುಗುಟ್ಟಿ ಅಸಹನೆ ಪ್ರದರ್ಶಿಸುತ್ತಿತ್ತು. ಆದರೆ ಕೊಂಚ ಮಾಸಲಾದ ಅಥವಾ ಹರಿದ ಬಟ್ಟೆಗಳನ್ನು ಹಾಕಿಕೊಂಡು, ಸರಿಯಾಗಿ ತಲೆಬಾಚದೆ ಕೂದಲು ಕೆದರಿಕೊಂಡು, ಚಪ್ಪಲಿ ಮೆಟ್ಟಿಕೊಂಡು, ಒಟ್ಟಿನಲ್ಲಿ ಬಡವರಂತೆ ತೋರಿಸಿಕೊಳ್ಳುವವರನ್ನು ಕಂಡಕೂಡಲೇ ರೋಷಾವೇಶದಿಂದ ಆತ ನಮ್ಮ ಮನೆ ಬಳಿ ಬಂದುದೇ ಮಹಾಪರಾಧವೆನ್ನುವಂತೆ ಬೆನ್ನ ಮೇಲಿನ ಕೂದಲು ನಿಮಿರಿಸಿಕೊಂಡು ತನ್ನ ಕರಾಳ ದಂತ ಪಂಕ್ತಿಗಳನ್ನು ಪ್ರದರ್ಶಿಸುತ್ತಾ ಬಂದವನು ಹೆದರಿ ಓಡಿಹೋಗುವಂತೆ ಅಬ್ಬರಿಸಿ ಕೂಗುತ್ತಿತ್ತು. ನನ್ನಂಥಾ ಸಮಾಜವಾದಿಯ ನಾಯೇ ಈ ತರ



ಬೂರ್ಷ್ವಾ ಗುಣಗಳನ್ನು ಮೈಗೂಡಿಸಿಕೊಂಡಿರಬೇಕಾದರೆ ಇನ್ನು ಕಮ್ಯುನಿಸ್ಟ್ ರಾಜ್ಯಗಳಲ್ಲಿ ಬೂರ್ಷ್ವಾ ಪ್ರತಿಕ್ರಾಂತಿ ಸಂಭವಿಸಿದ್ದೇನೂ ದೊಡ್ಡದಲ್ಲ. ಗರೀಬಿ ಹಟಾವೋ ಎನ್ನುವ ಇಂದಿರಾ ಗಾಂಧಿಯವರ ವೇದವಾಕ್ಯವನ್ನು ಕಿವಿ ಈ ತರ ತಪ್ಪಾಗಿ ಅರ್ಥಮಾಡಿಕೊಂಡು ಅನುಷ್ಠಾನಕ್ಕೆ ತಂದಿದ್ದು ನಿಜಕ್ಕೂ ವಿಷಾದನೀಯ.

ಕಿವಿ ಅವತ್ತು ಕಾಡೊಳಗೆ ಘೋರವಾಗಿ ಗಲಾಟೆ ಮಾಡಿದ್ದೂ ಹೀಗೇ. ನಾನು ಒಳನುಗ್ಗಿ ನೋಡಿದಾಗ ಕಂಡ ಮನುಷ್ಯ ಮೊದಮೊದಲಿಗೆ ನನಗೆ ನರಮನುಷ್ಯನಂತೆ ಕಾಣಲಿಲ್ಲ. ಆಗ ತಾನೆ ನಾವು ಶಿವಮೊಗ್ಗಾದ ಆನವೇರಿ ಬಳಿ ನವಶಿಲಾಯುಗದ ಶಿಲಾಯುಧಗಳನ್ನೂ, ಚಾಲುಕ್ಯರ ಕಾಲದ ಇಟ್ಟಿಗೆಗಳನ್ನೂ ಸಂಶೋಧಿಸಿದ್ದೆವು. ಈ ಸಂಬಂಧದಲ್ಲಿ ನಾನು ಶಿಲಾಯುಗದ ಮಾನವರ ರೂಪ, ಆಕಾರ, ಸಂಸ್ಕೃತಿಗಳ ಬಗ್ಗೆ ವಿಪರೀತ ಓದಿಕೊಂಡಿದ್ದೆ. ಅದೇ ಗುಂಗಿನಲ್ಲಿದ್ದ ನನಗೆ ಕಾಡಿನಲ್ಲಿ ಕಂಡ ಮಾನವ ಸಾಕ್ಷಾತ್ತಾಗಿ ಶಿಲಾಯುಗದಿಂದ ನೇರವಾಗಿ ಅಲ್ಲಿ ಬಂದು ಅವತರಿಸಿದಂತೆ ಕಂಡ.

ಅವನನ್ನು ಹಠಾತ್ತಾಗಿ ಕಾಡಿನಲ್ಲಿ ನೋಡಿದ್ದರಿಂದ ನನಗೆ ಒಂದು ಅಪಾಯಕಾರಿ ಪ್ರಾಣಿಯನ್ನು ನೋಡಿದಷ್ಟೆ ಹೆದರಿಕೆ ಗಾಬರಿಗಳಾದವು. ಬೊಗಳುತ್ತಿದ್ದ ನಾಯಿಗೆ ಕಲ್ಲು ತೆಗೆದುಕೊಂಡು ಹೊಡೆಯಲು ಕೈ ಎತ್ತಿದ್ದವ ನನ್ನನ್ನು ಕಂಡು ಹಾಗೇ ನಿಂತ. ನಾನು ಅವನನ್ನೂ, ಅವನು ನನ್ನನ್ನೂ ನೋಡಿದ್ದನ್ನು ಕಿವಿ ನೋಡಿ ತನ್ನ ಜವಾಬ್ದಾರಿ ಮುಗಿಯಿತು ಎನ್ನುವಂತೆ ಸುಮ್ಮನಾಯ್ತು.

ಚರ್ಮದ ಉಡುಪಿನಂತೆ ಕಾಣುತ್ತಿದ್ದ ಹರಕಲು ಗೋಣಿತಾಟಿನಂಥದೇನನ್ನೋ ಅವನು ಸೊಂಟಕ್ಕೆ ಸುತ್ತಿಕೊಂಡಿದ್ದ. ಎಂದೂ ಸ್ನಾನ ಕಾಣದ ಅವನ ಮೇಮೇಲೆ ಪಾಚಿಯಂತೆ ಕೊಳೆ



ಧೂಳು ಕುಳಿತಿತ್ತು. ತಲೆಕೂದಲೆಲ್ಲಾ ಜಟೆಗಟ್ಟಿ ಹೋಗಿತ್ತು. ಕೈಕಾಲಿನ ಉಗುರುಗಳು ಚಿರತೆ ಉಗುರಿನಂತೆ ಉದ್ದಕ್ಕಿತ್ತು. ಎಲ್ಲಕ್ಕಿಂತ ಕರಿಯ ಮುಖದಲ್ಲಿನ ಅವನ ಕಣ್ಣುಗಳು ಕಾಡು ಮೃಗದ ಕಣ್ಣುಗಳಂತೆ ಮಿಂಚುತ್ತಿದದ್ದವು. ಸುಮ್ಮನೆ ನನ್ನತ್ತ ನೋಡುತ್ತ ನಿಂತ ಅವನನ್ನು ಹೇಗೆ ಮಾತಾಡಿಸುವುದೆಂದು ಯೋಚಿಸಿದೆ. ಅವನ ಸ್ಥಿತಿ ನೋಡಿದರೆ ಭಾಷೆ ರೂಪುಗೊಳ್ಳುವುದಕ್ಕಿಂತ ಮೊದಲಿದ್ದ ಮನುಷ್ಯನಂತೆ ಕಾಣುತ್ತಿದ್ದ. ನನಗೆ ಅವನೆದುರು ಕನ್ನಡ ಮಾತನಾಡಲು ಧೈರ್ಯ ಬಂದಿದ್ದು ಅವನು ಕಾಲಲ್ಲಿ ಮೆಟ್ಟಿಕೊಂಡಿದ್ದ ಟೈರು ಚಪ್ಪಲಿಯನ್ನು ನೋಡಿದ ಮೇಲೆ.

'ಯಾರೋ ನೀನು' ಎಂದು ಕೇಳಿದೆ.

'ನಾವು' ಎಂದ.

ಎಲ ಇವನ ಇರೋದು ಒಬ್ಬನೇ ಆದರೂ ಜಗದ್ಗುರುಗಳ ತರ ಬಹುವಚನ ಆರೋಪಿಸಿಕೊಳ್ಳುತ್ತಿದ್ದಾನಲ್ಲ ಎನ್ನಿಸಿತು. ಆದರೆ ಅವನ ಬಾಯಲ್ಲಿ ಕನ್ನಡ ಭಾಷೆ ಬಂದುದೇ ನನಗೆ ಇನ್ನೂ ಅಚ್ಚರಿ ತಂದಿದ್ದು.

'ನಾವು ಅಂದರೆ ಯಾರೋ'

'ನಾವು, ತೋಟದಲ್ಲಿ ಕೆಲಸಕ್ಕಿರೋರು'

'ಯಾರತೋಟದಲ್ಲಿ'

'ಭೂತನಕಾಡು'

'ವಾಸು ತೋಟದಲ್ಲೇನೊ'

'ಹೂಂ'

'ನಿನ್ನ ಹೆಸರೇನು'

'ಮಾಸ್ತಿ'

ನಾನು ಗುಡ್ಡಗಾಡಿನ ಜನರನ್ನೂ, ಕಾಡು ಜನರನ್ನೂ ಬಹಳಷ್ಟು



> ನೋಡಿದ್ದೇನೆ. ಅವರೆಲ್ಲಾ ನಮಗಿಂತ ಕೊಂಚ ಬೇರೆಯಾಗಿ ಕಾಣುತ್ತಿದ್ದರೇ ಹೊರೆತು ಮಾಸ್ತಿಯ ತರ ವಾನರಾಕೃತಿಗೆ ಹತ್ತಿರವಾಗಿರಲಿಲ್ಲ. ಇವನ ಮುಖ ಸಹ ಶಿಲಾಯುಗದಂತೆಯೇ ಕಾಣುತ್ತಿತ್ತು. ಆದರೂ ಅವನು ಕನ್ನಡ ಭಾಷೆ ಮಾತಾಡಿದ ಮೇಲೆ, ಎಲ್ಲ ನಾಗರೀಕರಂತೆ ಒಂದು ಹೆಸರನ್ನೂ ಇಟ್ಟುಕೊಂಡ ಮೇಲೆ, ಅವನನ್ನು ಶ್ರೀಸಾಮಾನ್ಯನ ವಿಶೇಷ ರೂಪ ಎನ್ನದೆ ವಿಧಿಯಿರಲಿಲ್ಲ. ಕನ್ನಡ ಗೊತ್ತಿಲ್ಲದ ಕಿವಿ ಅವನ ಈ ರೂಪ ವಿಶೇಷವನ್ನು ನೋಡಿಯೇ ಅವನ ಮೇಲೆ ಎಗರಾಡಿದ್ದು.

ನಾಗರೀತಕತೆಯಿಂದ ಪ್ರಾಪಂಚಿಕ ವಾಸ್ತವದಿಂದ ದೂರ ಉಳಿದಂತಿರುವ ಇಬ್ಬರು ಮನುಷ್ಯರನ್ನು ಪರಿಚಯಿಸುತ್ತಾರೆ. ಅದಕ್ಕೆ ಕಾರಣ ಅವರಿದ್ದ ರೀತಿ ಯಾವುದೋ ಶಿಲಾಯುಗದ ಪ್ರಾಣಿಗಳಂತಿರುವ ಅವರನ್ನು ವರ್ಣಿಸುತ್ತಾ, ಅವನ ಮೈಮೇಲಿನ ಬಟ್ಟೆ, ಧೂಳು, ತಲ ಕೂದಲೆಲ್ಲಾ ಜಡೆಗಟ್ಟಿ ಹೋಗಿತ್ತು. ಅವನ ಸ್ಥಿತಿ ನೋಡಿದರೆ ಭಾಷೆ ರೂಪುಗೊಳ್ಳುವುದಕ್ಕಿಂತ ಮೊದಲಿದ್ದ ಮನುಷ್ಯನಂತೆ ಕಾಣುತ್ತಿದ್ದ. ನನಗೆ ಅವನೆದುರು ಕನ್ನಡ ಮಾತಾಡಲು ಧೈರ್ಯ ಬಂದಿದ್ದು ಅವನು ಕಾಲಲ್ಲಿ ಮೆಟ್ಟಿಕೊಂಡಿದ್ದು ಟೈರು ಚಪ್ಪಲಿಯನ್ನು ನೋಡಿದ ಮೇಲೆ, ಮಾಸ್ತಿಯ ಮೊದಲ ಪರಿಚಯ ತೇಜಸ್ವಿಯವರಿಗಾದದ್ದು ಹೀಗೆ.

ಸಮಾಜದಲ್ಲಿ ಬಹುಪಾಲು ಜನರು ಆಧುನಿಕ ಪ್ರಪಂಚಕ್ಕೆ ಕಾಲಿಟ್ಟಿದ್ದರೂ, ಮಾಸ್ತಿ ಮತ್ತು ಬೈರನೊಡನೆ ತೇಜಸ್ವಿ ಮಾತಾಡುವಾಗಲೆಲ್ಲಾ ಶಿಲಾಯುಗದ ಜನರಾಗಿ ಕಾಣುತ್ತಿದ್ದ ಇವರು ಈ ಆಧುನಿಕ ಯುಗದಲ್ಲಿ ಹೇಗೆ ಜೀವನ ನಡೆಸುತ್ತಾರೆ ಆಧುನಿಕ ಅಭ್ಯಾಸಗಳಾವುವು ಅವರಿಗೆ ಇದ್ದಂತೆ ಕಂಡು ಬರುವುದಿಲ್ಲ. ಅದರ ಸ್ಪಷ್ಟ ಚಿತ್ರಣವನ್ನು ಅವರೇ ನೀಡುತ್ತಾರೆ.

ಆದರೆ ಮಾಸ್ತಿ ಮತ್ತು ಬೈರ ದಿನನಿತ್ಯ ಜೀವನ ನಡೆಸಲು ಕೆಲಸಕ್ಕಾಗಿ ಕಾಡುಗಳನ್ನು ಅಲೆದು ಅಲೆದು ಕಾಡಿನಲ್ಲಿದ್ದ ಗಿಡ ಮರಗಳು ಹಾಗೂ ಪ್ರಾಣಿಪಕ್ಷಿಗಳ ಬಗ್ಗೆ ಅವರದೇ ಆದ ತರ್ಕ ವಿಚಾರಗಳನ್ನು ಮಂಡಿಸುತ್ತಿದ್ದರು.

ಇವರಿಗೆ ಶಿಕಾರಿ ವಿಷಯದಲ್ಲಿ ಅದ್ಭುತ ಜ್ಞಾನವಿತ್ತೆಂದು ಹೇಳಬಹುದು. ಯಾವುದಾದರೂ ಪ್ರಾಣಿಯನ್ನು ಕಂಡಾಗ ಅದು ಇದೇ ದಾರಿಯಲ್ಲಿ ಇಂಥ ಕಡೆಗೇ ಹೋಗಿದೆ ಎಂದು ಬೆನ್ನಟ್ಟುತ್ತಿದ್ದರು. ಸುಮಾರು ದಿನಗಳವರೆಗೆ ತೇಜಸ್ವಿಯವರ ಜೊತೆಯಲ್ಲಿ ಶಿಕಾರಿ ಸಂಗಾತಿಗಳಾಗಿ ತಿರುಗಾಡಿದ್ದಾರೆ. ಅವರಿಂದ ಹಲವಾರು ಸಂಗತಿಗಳನ್ನು ನಾನು ತಿಳಿದುಕೊಂಡಿದ್ದೇನೆ ಎಂದು ಸ್ವತಃ ತೇಜಸ್ವಿಯವರೇ ಹೇಳುತ್ತಾರೆ.



ಈ ಕತೆಯಲ್ಲಿ ಲೇಖಕರಿಗೆ ಅರ್ಥವಾಗದ, ತನ್ನ ತರ್ಕಕ್ಕೆ ನಿಲುಕದ ಅನೇಕ ಅಸ್ಪಷ್ಟ ಚಿತ್ರಗಳು ಮಾನವೀಯತೆಯ ಪ್ರಸಂಗಗಳು ಬರುತ್ತವೆ.

ಬೈರನ ಹತ್ತಿರವಿದ್ದ ಕಂತ್ರಿನಾಯಿಯ ಸಂದರ್ಭ. ಅದರ ಬಗ್ಗೆ ಅದು ಹೇಗೆ ಸಿಕ್ಕಿತು ಎಂದು ಬೈರ ಹೇಳಿದ ಕತೆಗಳು ಕಾಲ್ಪನಿಕವೂ, ವಾಸ್ತವವೂ, ಯಾರಿಗೂ ಗೊತ್ತಿಲ್ಲ. ಆದರೆ ಆ ನಾಯಿಯನ್ನು ಇವರ ಶಿಕಾರಿಗೆ ಸಹಾಯವಾಗಲೆಂದು ಇವರ ಜೊತೆಯಲ್ಲಿಟ್ಟುಕೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಮಾಸ್ತಿ ಬೈರರ ಶಿಕಾರಿ ತೆವಲಿಗೆ ಅದು ಬಲಿಯಾಗಿತ್ತು ಎಂಬುದು ಗೋಚರವಾಗುತ್ತದೆ. ಅವರು ಅದನ್ನು ನಡೆಸಿಕೊಳ್ಳುತ್ತಿದ್ದ ರೀತಿಯನ್ನು ಗಮನಿಸಿದರೆ ಅವರು ತುಂಬಾ ಕ್ರೂರಿಗಳು ನಿರ್ದಯಿಗಳು ಎಂದೆನಿಸುತ್ತದೆ. ಅವರು ಅದರ ಮೇಲೆ ಕೊಂಚವಾದರೂ ಕರುಣೆ ತೋರಿಸುತ್ತಿರಲಿಲ್ಲ.

ಅವರು ಶಿಕಾರಿಗಾಗಿ ಮಾಡುತ್ತಿದ್ದ ಪ್ರಯತ್ನದಲ್ಲಿ, ಹೂಡಿದ ಉಪಾಯದಲ್ಲಿ ಅವರ ನಾಯಿಯೇ ಬಲಿಯಾಗುತ್ತದೆಂದು ಊಹಿಸಿರಲಿಕ್ಕಿಲ್ಲ. ನಾಯಿ ಸತ್ತ ಮೇಲೆ ಅದು ಬೈರನ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರಲಿಲ್ಲ. ದುಃಖವೆಂದು ನಟಿಸಲಿಲ್ಲ.

ಅವರು ನಾಯಿಗೆ ನಮ್ಮಂತೆ ಮಾನವೀಯ ವ್ಯಕ್ತಿತ್ವವನ್ನು ಆರೋಪಿಸುತ್ತಿರಲಿಲ್ಲ. ಎಂದು, ನಾಯನ್ನು ನಾಯಿಯಂತೆಯೂ, ಮನುಷ್ಯರನ್ನು, ಮನಷ್ಯರಂತೆಯೂ, ಪ್ರಾಣಿಗಳನ್ನು ಪ್ರಾಣಿಗಳಂತೆಯೂ, ನೋಡುತ್ತಾರೆ.

ಅದರ ಸಾವಿನ ಬಗ್ಗೆ ಯಾವುದೇ ರೀತಿಯ ಭಾವನೆಯನ್ನು ವ್ಯಕ್ತಪಡಿಸದ ಬೈರ ಕೆಲಸಕ್ಕೆ ಮಾತ್ರ ನಾಳಿನಿಂದ ಮೂರ್ದಿನ ರಜಾ ಸಾಮಿ ನಾನು ಎಂದ. ರಾಜಮ ಹೋದ್ನಲ್ಲ ನಂಗೆ ಸೂತಕ ಎಂದು ಹೇಳಿದಾಗ ಅವನ ಕಣ್ಣುಗಳಲ್ಲಿ ನೀರು ತುಂಬಿದಂತೆ ಕಂಡಿತು. ಅದೇನು ಅವನು ರಾಮ ಸತ್ತಿದ್ದಕ್ಕೆ ನಿಜಕ್ಕೂ ಅವನಿಗೆ ದುಃಖವಾಗಿ ಸಂತಾಪ ಸೂಚಿಸುತ್ತಿದ್ದಾನೋ, ಅಥವಾ ಕೆಲಸಕ್ಕೆ ತಪ್ಪಿಸಿಕೊಳ್ಳಲು ನೆಪ ಹೇಳುತ್ತಿದ್ದಾನೋ ತೇಜಸ್ವಿಯವರಿಗೆ ಅರ್ಥವಾಗಲಿಲ್ಲ.

ಅದಕ್ಕೆ ಅವರು ಕಂಡುಕೊಂಡ ತೀರ್ಮಾನ ವಾಸ್ತವದಲ್ಲಿ ಮಾಸ್ತಿ ಬೈರ ನಿರ್ಣಯಗಳೇ ಸರಿ, ಎನ್ನುವಂತೆ ಮಾಡಿಬಿಡುತ್ತದೆ. ಅದಕ್ಕೆ ತೇಜಸ್ವಿಆದುದರ ಮೇಲೆ ಆಲೋಚಿಸಿದರೆ, ಬೈರ ಮತಊತ ಇವರೆಲ್ಲಾ ಒಳ್ಳೇಯವರೋ, ಕೆಟ್ಟವರೊ, ತೀರ್ಮಾನಿಸುವ ಜವಾಬ್ದಾರಿ ಬಿಟ್ಟು ಬರೀ ನಡೆದುದಷ್ಟನ್ನೆ ಹೇಳುಟುಧು ಒಳ್ಳೇಯದು ಎಂಬ ಅಂತಿಮ ನಿರ್ಧಾರಕ್ಕೆ ಬಂದಿದ್ದಾರೆ.



ಸುಸ್ಮಿತ ಮತ್ತು ಹಕ್ಕಿಮರಿ

ಈ ಕತೆಯಲ್ಲಿ ಹಕ್ಕಿ ಪಕ್ಷಿಗಳನ್ನು ಸಾಕಲು ಅನುಭವವಿಲ್ಲದ ಚಿತ್ರಣ ಅದರಲ್ಲೂ ತೇಜಸ್ವಿ ಅವರ ಮಗಳು ಸುಸ್ಮಿತ ಕೇಳುವ ಮುಗ್ಧ ಪ್ರಶ್ನೆಗಳಿಗೆ ಉತ್ತರಿಸುವ ಪಿರ, ಯಾವುದರ ಬಗ್ಗೆಯೂ ಪೂರ್ಣ ಮಾಹಿತಿಯಿಲ್ಲದೆ, ತೆಗೆದುಕೊಂಡ ನಿರ್ಣಯಗಳಿಂದ ಯಾವುದೇ ಕೆಲಸ ಆಗುವುದಿಲ್ಲ. ಏನೋ ಪ್ರಯೋಗ ಮಾಡಲು ಹೋಗಿ ಕುತೂಹಲದಿಂದ ವಿನಾಕಾರಣ ಎಂಥ ತೊಂದರೆಗೆ ಸಿಕ್ಕಿಕೊಂಡೆ ಎಂಬುದನ್ನು ಈ ಕತೆಯಲ್ಲಿ ವಿಸ್ತರಿಸುತ್ತಾ ಹೋಗುತ್ತಾರೆ.

ತೇಜಸ್ವಿ ಹೊಸ ಅನುಭವದ ಪರಿಣಾಮ ಹೇಗಿರುತ್ತದೆ, ಎಷ್ಟು ಕಷ್ಟ ಎಂಬುದನ್ನು ಚಿತ್ರಿಸಿದ್ದಾರೆ.

ಇಲ್ಲಿ ಚಿಕ್ಕ ಚಿಕ್ಕ ಹಕ್ಕಿಗಳ ಬಗ್ಗೆ ತೇಜಸ್ವಿಯವರು ನೀಡದ ಮಾಹಿತಿ ಅತ್ಯಂತ ಕುತೂಹಲವನ್ನು ಮೂಡಿಸುತ್ತದೆ.

ಹಕ್ಕಿಳ ಮೊಟ್ಟೆಗಳಿಗೆ ಹೇಗೆ ಕಾವು ಕೊಡಬೇಕು, ಮರಿ ಬಂದ ಮೇಲೆ ಅದಕ್ಕೆ ಪ್ರಾಥಮಿಕವಾಗಿ ಯಾವ ರೀತಿಯ ಆಹಾರ ಕೊಡಬೇಕು ಎಂಬುದು ಗೊತ್ತಿಲ್ಲದೇ, ತೇಜಸ್ವಿ ಪರದಾಡಿದ ಪ್ರಸಂಗಗಳನ್ನು ಗಮನಿಸಬಹುದು. ಹಕ್ಕಿಗಳನ್ನು ಸಾಕುವುದು ಬೇರೆ ಕೆಲಸದಷ್ಟು ಸುಲಭವಲ್ಲ. ಎಲ್ಲೋ ಇದ್ದ ಹಕ್ಕಿಗಳನ್ನು ತನ್ನ ಕ್ಯಾಮರಾದಲ್ಲಿ ಸೆರೆಹಿಡಿಯುವುದಕ್ಕಿಂತ ಕಷ್ಟದ ಕೆಲಸ ಮತ್ತೊಂದಿಲ್ಲ ಎಂದುಕೊಂಡಿದ್ದ ಲೇಖಕರಿಗೆ ಹಕ್ಕಿಗಳನ್ನು ಸಾಕುವ ತೊಂದರೆಗೆ ಸಿಕ್ಕಿಕೊಂಡಾಗ ಆದ ಅನುಭವ ಇನ್ನು ಕಷ್ಟಕರ.

ಸುಸ್ಮಿತ ಮತ್ತು ಹಕ್ಕಿಮರಿ ಕಥೆಯಲ್ಲಿ ತೇಜಸ್ವಿಯವರಿಗೆ ಪರಿಸರ ಮತ್ತು ಜಲಚರಗಳ ಕುರಿತಾಗಿ ಇರುವ ಅಪಾರ ತಿಳುವಳಿಕೆಯನ್ನು ನೋಡಬಹುದು. ಉದಾಹರಣೆಗೆ,

> ಜೀವವಿಕಾಸದಲ್ಲಿ ಕೆಳಗಿನ ಹಂತದ ಜೀವಿಗಳಾದ ಜಲಚರಗಳು ಹಕ್ಕಿಗಳಂತೆ ಮೊಟ್ಟೆಗಳನ್ನು ಜೋಪಾನ ಮಾಡುವುದಿಲ್ಲ. ಅವು ಉಚ್ಚುವ ಮೊಟ್ಟೆಗಳು ವಾತಾವರಣದ ಶಾಖಕ್ಕೇ ಒಡೆದು ಮರಿಯಾಗಬೇಕು. ಅಷ್ಟಲ್ಲದೆ ಅವೇ ಸ್ವಶಕ್ತಿಯಿಂದ ಆಹಾರ ಸಂಪಾದನೆ ಮಾಡಿಕೊಂಡು ಬದುಕಬೇಕು. ಹೀಗಾಗಿ ಅವು ಇಡುವ ಮೊಟ್ಟೆಗಳಲ್ಲಿ ಕೊನೆಗೆ ಬದುಕಿ ಉಳಿಯುವವು ಶೇಕಡ ಒಂದು ಅಥವಾ ಎರಡು. ಈ ಕಾರಣಗಳಿಂದಲೇ ಜಲಚರಗಳು ಇಡುವ



ಮೊಟ್ಟೆಗಳು ಅಸಂಖ್ಯಾತ. ಮೀನುಗಳು ಒಂದೊಂದು ಸಾರಿಗೆ ಎಪ್ಪತ್ತು ಎಂಭತ್ತು ಸಹಸ್ರ ಮೊಟ್ಟೆಗಳನ್ನಿಡುತ್ತವೆ. ಇಷ್ಟಾದರೂ ಇವುಗಳಲ್ಲಿ ಕೆಲವೇ ಬದುಕಿ ಉಳಿಯುವುದು.

ಹಾವು, ಹಲ್ಲಿ, ಓತಿಕ್ಯಾತ, ಆಮೆ ಮುಂತಾದ ಸರೀಸೃಪಗಳು ನೂರಿನ್ನೂರು ಮೊಟ್ಟೆಗಳನ್ನಿಡುತ್ತವೆ. ಮುಟ್ಟಿದರೆ ಮೆತ್ತಗೆ ರಬ್ಬರ್ ಮೊಟ್ಟೆಗಳಂತಿರುವ ಇವನ್ನು ಮರಳಿನಲ್ಲಿ ಗುಂಡಿ ತೋಡಿ ಆಳಕ್ಕೆ ಹುಗಿದಿಡುತ್ತವೆ. ಬಿಸಿ ಮರಳಿನ ಶಾಖಕ್ಕೆ ಅವುಗಳ ಭ್ರೂಣಗಳು ಬೆಳೆದು ಒಡೆದು ಮರಿಗಳು ಹೊರಬರುತ್ತವೆ. ಜಲಚರಗಳಿಗಿಂತ ಇವು ಹೆಚ್ಚಿನ ಆಸ್ಥೆ ಶ್ರದ್ಧೆಯನ್ನು ತೋರಿಸುತ್ತವೆಯಾದರೂ ಈ ಮೊಟ್ಟೆಗಳೂ ಸಹ ವಾತಾವರಣದ ಏರುಪೇರುಗಳನ್ನು ಅವಲಂಬಿಸಿವೆ.

ಆದರೆ ಹಕ್ಕಿಗಳ ಹಂತಕ್ಕೆ ಬರುವ ವೇಳೆಗಾಗಲೇ ನಾವು ಇನ್ನೂ ಸೂಕ್ಷ್ಮ ನಡವಳಿಕೆಯನ್ನು ಕಾಣಬಹುದು. ಅವು ಸಾಧಾರಣವಾಗಿ ತಮ್ಮ ಮೈಯ್ಯಗಲಕ್ಕೆ ಸಮನಾಗುವಷ್ಟು ಎಂದರೆ ಎರಡು ಮೂರು ಮೊಟ್ಟೆಗಳನ್ನು ಮಾತ್ರ ಇಡುತ್ತವೆ. ಅಷ್ಟೇ ಅಳತೆಯಲ್ಲಿ ಗೂಡು ಕಟ್ಟಿ ತಮ್ಮ ಮೈಶಾಖ ಉಳಿಯುವಂತೆ ಮಾತ್ರ ಇಡುತ್ತವೆ. ಅಷ್ಟೇ ಅಳತೆಯಲ್ಲಿ ಗೂಡು ಕಟ್ಟಿ ತಮ್ಮ ಮೈ ಶಾಖ ಉಳಿಯುವಂತೆ ಸುತ್ತ ಪುಕ್ಕ, ಹತ್ತಿ ಜೇಡರಬಲೆ ಇತ್ಯಾದಿಗಳ ಹಾಸಿಗೆ ನಿರ್ಮಿಸಿಕೊಳ್ಳುತ್ತವೆ. ವಾತಾವರಣದ ಶಾಖವನ್ನು ಕೊಂಚವೂ ಅವಲಂಬಿಸದೆ ತಮ್ಮ ಮೈ ಶಾಖದಿಂದಲೇ ಭ್ರೂಣಗಳು ಬೆಳೆದು ಹೊರಬರುವಂತೆ ಅವುಗಳ ಮೇಲೆ ಕುಳಿತು ಕಾವು ಕೊಡುತ್ತವೆ. ಅವು ಮರಿಯಾಗಿ ಹೊರಬಂದನಂತರ ಅವುಗಳಿಗೆ ಗುಟುಕು ಕೊಟ್ಟು, ಬೆಳೆಸಿ, ಹಾರುವುದನ್ನೂ, ಆಹಾರ ಸಂಪಾದನೆಯನ್ನೂ ಕಲಿಸಿ ಹೊರ ಜಗತ್ತಿಗೆ ಬಿಡುತ್ತವೆ.



> ಸಸ್ತನಿಗಳಲ್ಲಿ ಇನ್ನೂ ಹೆಚ್ಚು ಇದು ಮುಂದುವರಿದಿರುವುದನ್ನು ನೋಡಬಹುದು. ಇಲ್ಲಿ ಭ್ರೂಣ ಹೊರ ಜಗತ್ತಿಗೆ ಯಾವ ಸಂಬಂಧವೂ ಇಲ್ಲದಂತೆ ತಾಯಿಯ ಹೊಟ್ಟೆಯೊಳಗೇ ಬೆಳೆದು ಹೊರಬರುತ್ತದೆ.

ತೇಜಸ್ವಿ ಇನ್ನು ಈ ಕಾಡಿನ ಜೀವಿಗಳ ತಂಟೆಗೇ ಹೋಗಬಾರದೆಂದು ನಿರ್ಧರಿಸಿ, ಕಾಡುನ ಜೀವ ಸಂಕುಲದೊಳಗೆ ಕೈ ಹಾಕಿದರೆ ಸಾಕು ಅದು ಸಹಾಯಹಸ್ತವಾದರೂ ಅವುಗಳ ನಾಶ ತಪ್ಪಿದ್ದಲ್ಲವೆಂದು ನನಗೆ ಮನದಟ್ಟಾಯ್ತು. ಅವುಗಳಲ್ಲಿ ತೊಂದರೆಗೆ ಸಿಕ್ಕಿದವನ್ನು ತಬ್ಬಲಿಗಳಾದವನ್ನೂ, ರಕ್ಷಿಸುವುದು ನಮ್ಮ ನೈತಿಕ ಜವಾಬ್ದಾರಿ ಎಂದು ಭಾವಿಸುವುದು, ಕಾಡಿನಲ್ಲಿರುವುದನ್ನೆಲ್ಲಾ ತಾನು ತಿನ್ನುವುದಕ್ಕೆ ಸೃಷ್ಟಿಮಾಡಿದ್ದಾನೆಂದು ತಿಳಿದಿರುವ ಮಾರನ ಮೂರ್ಖತನಕ್ಕಿಂತ ನಾನು ಮಾಡಿದ ಕೆಲಸ ದೊಡ್ಡ ಮೂರ್ಖತನವೆಂದು ತೇಜಸ್ವಿಯವರಿಗೆ ಅನಿಸಿತು.

ಎಂಗ್ಟನ ಪುಂಗಿ

ಪರಿಸರದ ಕತೆ ಸಂಕಲನದ ಎಂಗ್ಟನಪುಂಗಿ ಎಂಬ ಕತೆ ಇವತ್ತಿನ ನಮ್ಮ ಎಲ್ಲಾ ಸಂಧಿಗ್ದತೆ. ದ್ವಂದ್ವಗಳಿಗೆ ಒಡ್ಡಿದ ಸಂಕೀರ್ಣ ರೂಪಕವಾಗಿವೆ. ಪರಂಪರೆ ಆಧುನಿಕತೆ ಮೂಢನಂಬಿಕೆ ವಿಚಾರವಾದ ಇತ್ಯಾದಿಗಳ ಇಕ್ಕಟುಗಳಿಗೆ ಸಿಕ್ಕಿರುವ ನಮ್ಮ ಇಂದಿನ ಮನಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. ಈ ಕತೆ ಇಲ್ಲಿ ನಿರೂಪಕ ತನ್ನನ್ನು ತಾನೇ ಸಮಸ್ಯಾತ್ಮಕಗೊಳಿಸಿಕೊಂಡು ಬಿಟ್ಟಿದ್ದಾನೆ.

ಆಧುನಿಕ ಕಣ್ಣಿಗೆ ಹಾವುಗೊಲ್ಲರ ಎಂಗ್ಟ ಮಾರ್ಕ್ ಹೇಳುವ ಗ್ರಾಮ್ಯಮೌಢ್ಯದ ಮಾದರಿ, ಅವನು ಎಲ್ಲರ ಬಾಯಲ್ಲಿ ಮೋಸಗಾರ, ವಂಚಕ, ಕಣ್ಕಟ್ ಸೂಳೇಮಗ.

ಇಂಥಹ ಎಂಗ್ಟನ ಕುರಿತಾಗಿ ತೇಜಸ್ವಿಯವರು ಪ್ರಸ್ತಾಪಿಸುವುದು ಹೀಗೆ,

> ಹಾವುಗೊಲ್ಲರ ಎಂಗ್ಟ ಹಾವು ಕಡಿದು ಸತ್ತಿದ್ದು ನಿಜವಿದ್ದರೂ ಇರಬಹುದು. ಏಕೆಂದರೆ ಅವನನ್ನು ನಾನು ಕೊನೆಯಬಾರಿ ನೋಡಿದ್ದು ಈಗ್ಗೆ ಎರಡು ಮೂರು ವರ್ಷಗಳ ಹಿಂದೆ. ಕರಿಯಪ್ಪನೂ ಅವನೂ ಎಂಟು ಮೈಲಿ ದೂರದ ಆಲದೂರಿನಿಂದ ಸೈಕಲ್ ಮೇಲೆ ಡಬ್ಬಲ್ ರೈಡು ಹೊಡೆದುಕೊಂಡು ಬಂದು ನನ್ನ



ಬಳಿ ಜಗಳ ಆಡಿದ್ದರು. ನಾನು ಅವರ ಮೇಲೆ ಸಿಕ್ಕಾಪಟ್ಟೆ ಏನೇನನ್ನೋ ಬರೆದಿದ್ದೇನೆಂದು ಅವರಿಗೆ ಸಿಟ್ಟು ಬಂದಿತ್ತು. ಇಬ್ಬರೂ ಓದು ಬರಹ ಬರುವವರಲ್ಲ. ಕರಿಯಪ್ಪ ಬಸ್ಸಿಗೆ ಕಾಯುತ್ತ ನಿಂತಿದ್ದಾಗ ಅವನೊಡನೆ ನಿಂತಿದ್ದ ಸ್ಕೂಲು ಹುಡುಗರು ಕರ್ವಾಲೋ ಕಾದಂಬರಿಯಲ್ಲಿ ಕರಿಯಪ್ಪ ಎಂಗ್ಟನ ಹೆಂಡತಿಯನ್ನು ಇಟ್ಟುಕೊಂಡಿದ್ದಾನೆ ಮುಂತಾಗಿ ಕಂಡಾಪಟ್ಟೆ ಬರೆದಿದ್ದೇನೆಂದು ಅವನಿಗೆ ಹೇಳಿ ನಗಾಡಿದರಂತೆ. ಅದರಿಂದ ರೇಗಿದ ಕರಿಯಪ್ಪ ಎಂಗ್ಟನನ್ನೂ ಕರೆದುಕೊಂಡು ಇಚಾರಣೆ ಮಾಡಲು ಬೆಳಗಿನ ಝಾವಕ್ಕೇ ಮನೆ ಬಳಿಗೆ ಹಾಜರಾಗಿದ್ದ.

ಇರಬಹುದು. ನಾನು ಅಂಥವನೇ ಅಂತಿಟ್ಕೊಳ್ಳಿ. ಗಂಡಸರೂ ಅಂದ ಮೇಲೆ ಕೆಸರು ಕಂಡಲ್ಲಿ ತುಳೀತಿವಿ. ನೀರು ಕಂಡಲ್ಲಿ ತೊಳೀತಿವಿ. ಆದರೆ ನಾನ್ಯಾವ ಜಾತಿ. ಇವನ್ಯಾವ ಜಾತಿ. ನನ್ನ ನೀವು ಇಂಥವಾ ಅಂತ ತಿಳಿದಿದ್ದೀರಲ್ಲಾ ಎಂದು ಕರಿಯಪ್ಪ ಕೂಗಾಡಿದ.

ಬಹುಶಃ ಯಾವ ಲೇಖಕನಿಗೂ ಅವನ ಪಾತ್ರಗಳು ಹೀಗೆ ಕತೆಯಿಂದೆದ್ದು ಬಂದು ಇಚರಾಣೆ ಮಾಡಿಲ್ಲವೆಂದು ತೋರುತ್ತದೆ. ನಾನು ಕರ್ವಾಲೊ ಕಾದಂಬರಿ ಬರೆದು ಹದಿನೈದು ವರ್ಷದ ತರುವಾಯ ಅದನ್ನು ಸ್ಕೂಲು ಹುಡುಗರಿಗೆ ಪಠ್ಯ ಪುಸ್ತಕ ಮಾಡಿ, ಅವರ ಬಾಯಿಯಿಂದ ಇವನ ಕಿವಿಗೆ ಬರೆದಿದ್ದು ಬರೆದಿಲ್ಲದ್ದು ಎಲ್ಲ ಬಿದ್ದು ಆ ಪಾತ್ರಗಳು ಬಂದು ಜಗಳ ಆಡುತ್ತಾರೆಂದು ನನಗೆ ಕನಸು ಮನಸ್ಸಿನಲ್ಲಿಯೂ ಹೊಳೆದಿರಲಿಲ್ಲ. ಅವರ ಬಗ್ಗೆ ಯಾವುದೇ ದುರಭಿಪ್ರಾಯ ಇಲ್ಲದ ಅಂಥದೇನನ್ನೂ ಬರೆದಿಲ್ಲವೆಂದೂ ಹಾಗೇನಾದರೂ ಇದ್ದರೆ ಮುಂದಿನ ಸಾರಿ ಸರಿಯಾಗಿ ಬರೆಯುತ್ತೇನೆಂದೂ ಹೇಳಿದೆ. ಅವರ ಕೋಪ ಎಷ್ಟು ಕ್ಷಣಿಕವಾದುದೆಂದರೆ ಅಷ್ಟು ಹೇಳಿದ್ದಕ್ಕೇ ಅವರಿಗೆ ಸಮಾಧಾನವಾಗಿ



ಅದೇನು ಬರೆದಿದ್ದೀರೆಂದು ಸಹ ಅವರು ವಿವರಣೆ ಕೇಳಲಿಲ್ಲ.

ಎಂಗ್ಟ ನಿರ್ಗಮಿಸುತ್ತಾ, ನಿಮಗೆಲ್ಲಾ ಗೊತ್ತಲ್ಲ ಸೋಮಿ ನನ್ನ ಇಚಾರ. ಅದ್ನೆಲ್ಲಾ ಬರೀರಿ. ಸುಮ್ನೆ ಏನೇನೋ ಬರೀಬ್ಯಾಡ್ರಿ ಎಂದು ಹೇಳಿ ಹೋದ. ಎಂಗ್ಟನನ್ನು ನಾನು ನೋಡಿದ್ದು ಅದೇ ಕೊನೇ ಬಾರಿ.

****

ಎಂಗ್ಟನನ್ನು ನಾನು ಮೊದಲ ಬಾರಿ ನೋಡಿದಾಗ ಸುತ್ತ ನೆರೆದವರ ದೃಷ್ಟಿಯಲ್ಲಿ ಅವನು ಕೊಲೆಪಾತಕಿಯಾಗಿದ್ದ. ಅವನ ಹೆಂಡತಿ ಬಯಲಿನಲ್ಲಿ ಹಾಕಿಕೊಂಡಿದ್ದ ಗುಡಾರದ ಬಳಿ ಸತ್ತುಬಿದ್ದಿದ್ದಳು. ದಾರಿಹೋಕರೆಲ್ಲ ಅವನ ಗುಡಾರದ ಬಳಿ ಗುಂಪಾಗಿ ಸೇರಿದ್ದರು. ಎಂಗ್ಟ ಅವನ ಹೆಂಡತಿಯ ಹೆಣದ ಬಳಿ ಕುಳಿತು ಹೋ ಎಂದು ಬೊಬ್ಬೆ ಮಾಡುತ್ತ ಅಳುತ್ತಿದ್ದ. ಎಂಗ್ಟ ಆಗ ನನಗೆ ಗೊತ್ತಿರಲಿಲ್ಲ. ಆದ್ದರಿಂದ ಪಕ್ಕದವರನ್ನು ಏನು ಸಮಾಚಾರ ಎಂದು ಕೇಳಿದೆ. ಅವನ ಹೆಂಡ್ತೀನ ಯಾರೋ ಖೂನಿ ಮಾಡಿದ್ದಾರೆ ಅಂತಾನಪ್ಪ! ಈ ಬಿಕನಾಸಿ ಹೆಂಗ್ಸನ್ನ ಹಾಡು ಹಗಲಲ್ಲಿ ಅದೂ ಬಟ್ಟಂಬಯಲಲ್ಲಿ ಯಾರು ಯಾತಕ್ಕೆ ಖೂನಿ ಮಾಡ್ತಾರೆ ಹೇಳಿ. ಅವಳ ಹತ್ರ ಏನು ದುಡ್ಡಿದೆಯಾ, ದುಗ್ಗಾಣಿ ಇದೆಯಾ?" ಎಂದು ಅವರು ಉದ್ಗರಿಸಿದರು.

– ಹೀಗೆ ತೇಜಸ್ವಿಯವರಿಗೆ ಪರಿಚಯವಾದ ಎಂಗ್ಟ ನಂತರ ಹಾವು ಹಿಡಿಯುವ ನೆಪದಲ್ಲಿ ಅವರ ಮನೆಯಂಗಳಕ್ಕೆ ಬರುವುದು, ವಿಷಪೂರಿತ ಹಾವುಗಳನ್ನು ಹಿಡಿಯುವುದು ಮಾಡುತ್ತಾನೆ. ಇದರಿಂದ ಕುಶಿಯಾದ ಲೇಖಕರು ಎಂಗ್ಟ ಪುಂಗಿಯಿಂದ ಹಾವುಗಳನ್ನು ಹಿಡಿಯುವ ಸಂಗತಿಯನ್ನು ಕೃಷಿಪ್ರಯೋಗಾಲಯದ ಮಿತ್ರರಿಗೆ ಹೇಳಿದಾಗ ಅವರು ಅಪಹಾಸ್ಯ ಮಾಡುವುದು ನಡೆಯುತ್ತದೆ. ಎಂಗ್ಟನನ್ನು ಪರೀಕ್ಷಿಸಿಯೇ ಬಿಡಬೇಕೆಂದು ಲೇಖಕರು ಎಂಗ್ಟನನ್ನು ಹುಡುಕುತ್ತಿರುವ ಸಂದರ್ಭದಲ್ಲಿ ಒಮ್ಮೆ ಸಕಲೇಶಪುರದಲ್ಲಿ ರಸ್ತೆಪಕ್ಕ ಏನೇನನ್ನೋ ಬೇರು, ಗಿಡಮೂಲಿಕೆಗಳನ್ನು ಹಾಕಿಕೊಂಡು ಗಿರಾಕಿಗಳನ್ನು



ಸೆಳೆಯುತ್ತಿದ್ದ ಎಂಗ್ಟ ಕಣ್ಣಿಗೆ ಬೀಳುತ್ತಾನೆ. ಅವನ ಬದುಕಿನ ಪರದಾಟವನ್ನು ವಿವರಿಸುತ್ತಾ ಅದಕ್ಕೆ ಕಾರಣಗಳನ್ನು ಕೊಡುವ ಬಗೆ ಅಸದೃಶವಾಗಿದೆ. ಆ ವಿವರಣೆ ಹೀಗಿದೆ.

> ಎಂಗ್ಟನನ್ನು ದೂರದಿಂದ ನೋಡಿದಾಗ ಪಾಪ ಎನಿಸಿತು. ನಾಗರಿಕತೆ ಮುಂದುವರಿಯುತ್ತಾ ಎಂಗ್ಟನ ಕುಲಕಸುಬುಗಳು, ಕೈಚಳಕಗಳು ನಿಧಾನವಾಗಿ ನಿರುಪಯುಕ್ತವಾಗುತ್ತಿದ್ದವು. ಸರ್ಕಾರ ಹಾವಿನ ಚರ್ಮವನ್ನು ರಫ್ತುಮಾಡುವುದು ನಿಷೇಧಿಸಿದ ಮೇಲೆ ಅವನ ಚರ್ಮಗಳಿಗೆ ದುಡ್ಡು ಸಿಗುತ್ತಿರಲಿಲ್ಲ. ಅವನ ಚಕ್ರಾಣಿ ಬೇರು, ಚಿತ್ರಮೂಲಬೇರು, ಸರ್ಪಗಂಧಿ, ಅಳಲೇಕಾಯಿಗಳೂ ವಿಲಾಯಿತಿ ಔಷಧದ ಎದುರು ಗಿರಾಕಿ ಕಳೆದುಕೊಂಡಿದ್ದುವು. ಮೊದಲಿನಂತೆ ಮೂಲ ಕವುಜಗನ ಹಕ್ಕಿ ನೀರುನಾಯಿಗಳನ್ನು ಬೇಟೆಯಾಡುವುದಕ್ಕೂ ಅರಣ್ಯ ಇಲಾಖೆಯವರು ಅವಕಾಶ ಕೊಡುತ್ತಿರಲಿಲ್ಲ.
>
> ಎಂಗ್ಟನಿಗೆ ಮನಸ್ಸಿನಾಳದಲ್ಲಿ ತಾನು ಪರಕೀಯನಾಗುತ್ತ, ಏಕಾಂಗಿಯಾಗುತ್ತ ಇರುವುದರ ಅರಿವಿದ್ದಿರಬಹುದು. ಅವನು ತನ್ನೆಲ್ಲ ಚಾಕಚಕ್ಯತೆ ಚಾಲಾಕುಗಳನ್ನು ಉಪಯೋಗಿಸಿ ಜನರನ್ನು ರಂಜಿಸಿ, ನಂಬಿಸಿ, ನಿದ್ದೆ ಮಾಡುತ್ತಿದ್ದ ದಾಸರ ಹಾವಿನ ಎದುರು ಪುಂಗಿ ಊದಿ, ಊಟ ಸಂಪಾದನೆ ಮಾಡಲು ಹೆಣಗುತ್ತಿದ್ದುದನ್ನು ಕಣ್ಕಟ್ಟು ಸೂಳೆಮಗ ಎಂದು ಜನರು ಬಯ್ದರೂ ತಾಳ್ಮೆಯಿಂದ ಸಹಿಸಿಕೊಂಡು ಉತ್ತರಿಸುತ್ತಿದ್ದುದನ್ನು ನೋಡಿದ್ದೇನೆ. ಭಾರತದ ಕಾಡುಗಳೂ ಮೃಗಪಕ್ಷಿಗಳೂ ನದಿ ಝರಿಗಳೂ ತಾಳ್ಮೆಯಿಂದ ತಮ್ಮ ಅವಸಾನವನ್ನು ಕಾಯುತ್ತಿರುವಂತೆಯೇ ಎಂಗ್ಟನೂ ಕಾಯುತ್ತಿದ್ದ. ಇತಿಹಾಸ ಎಂದೋ ಅವನ ಭವಿಷ್ಯವನ್ನು ತೀರ್ಮಾನ ಮಾಡಿತ್ತು. ಸೋಲಲೇಬೇಕಾದ ಯುದ್ಧ ಒಂದರಲ್ಲಿ ಗುದ್ದಾಡುತ್ತಾ ಬೀದಿ ಬದಿಯಲ್ಲಿ ಅವನು ನಿಂತಿದ್ದ.

ಇಲ್ಲಿ ತೇಜಸ್ವಿಯವರು ಇಡೀ ವ್ಯವಸ್ಥೆಯ ಅವನತಿಯನ್ನು ಅಂದರೆ ಆಧುನಿಕತೆಯ ಪರಿಣಾಮಗಳನ್ನು, ಪರಿಸರನಾಶವನ್ನು ಎಂಗ್ಟನ ಮೂಲಕ ಸಾಂಕೇತಿಕವಾಗಿ ಹೇಳುವ ರೀತಿ ಪರಿಣಾಮಕಾರಿಯಾಗಿದೆ.



ಈ ಕತೆಯ ಬೆರಗೂ ಏನೆಂದರೆ ಎಂಗ್ಟನಂಥ ಮಾದರಿಗಳು ಮೇಲುನೋಟಕ್ಕೆ ನಮ್ಮ ಆಧುನಿಕ ಅಹಂಕಾರಕ್ಕೆ ಕಾಣುವುದಕ್ಕಿಂತ ಹೆಚ್ಚು ಅಸಲಿ ಅಪ್ಪಟ ಇರಬಹುದಲ್ಲವೆ ಆಧುನಿಕ ಪಾಶ್ಚಾತ್ಯ ವಿಜ್ಞಾನ ತಂತ್ರಜ್ಞಾನ ಪ್ರಣೀತ ನಾಗರಿಕತೆಯ ಇಂದಿನ ಸಂದರ್ಭದಲ್ಲಿ ಇಂಥವರು ಅಪ್ರಸ್ತುತರಾಗಿಯೂ, ನಿಷ್ಪ್ರಯೋಜಕರಾಗಿಯೂ ಕಾಣುತ್ತಿರುವುದು ಒಂದು ದುರಂತವಲ್ಲವೆ ಇಂಥ ಜನರ ಮೂಲಕ ನಾವು ನಮ್ಮ ಸಂದರ್ಭವನ್ನು ಅಮೂಲಾಗ್ರ ವಿಮರ್ಶೆಗೆ ಒಳಪಡಿಸಬಹುದಲ್ಲವೆ ಆಧುನಿಕ ಶಿಕ,ಣ ನಮ್ಮನ್ನು ನಮ್ಮ ಬೇರುಗಳಿಗೆ, ಪರಿಸರಕ್ಕೆ ಪರಕೀಯರನ್ನಾಗಿ ಮಾಡಿದೆಯೆ?

ಈ ಪ್ರಶ್ನೆಗಳು ತೇಜಸ್ವಿ ಕಥನವನ್ನು ಆಧುನಿಕ ಕನ್ನಡ ಸಾಹಿತ್ಯದ ಇತರ ಅನೇಕ ಮುಖ್ಯ ಕಥನಗಳೊಂದಿಗೆ ಜೋಡಿಸಿ, ಒಟ್ಟಾರೆ ತೇಜಸ್ವಿ ಕಥನಕ್ಕೆ ಹೆಚ್ಚಿನ ವ್ಯಾಪ್ತಿಯನ್ನು, ಪ್ರಸ್ತುತತೆಯನ್ನು ಒದಗಿಸುತ್ತವೆ. ಈ ಕಥನಗಳ ಹಿಂದೆ ಕೆಲಸ ಮಾಡಿರುವ ಪ್ರಾಸ್ತಾವಿಕ ಸಂಕಥನಗಳತ್ತ ನಮ್ಮ ದೃಷ್ಟಿ ಇನ್ನಷ್ಟು ಸೂಕ್ಷ್ಮವಾಗಿ ಹಾಯುವ ಹಾಗೆ ಇವು ಮಾಡುತ್ತವೆ.

ನಮ್ಮ ಜೀವನ ವಿಧಾನ, ನಂಬಿಕೆಗಳಿಗೆ ಹೊರತಾದ ಪ್ರಪಂಚದ ವ್ಯಕ್ತಿಗಳನ್ನು ಅರ್ಥಮಾಡಿಕೊಳ್ಳದಷ್ಟು ಸಿನಿಕತನ, ಅಸಹನೆ, ಅಹಂಕಾರಗಳನ್ನು ಹೊಸ ನಾಗರಿಕತೆ ನಮಗೆ ಕಲಿಸಿಬಿಟ್ಟಿದೆಯೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಪರಿಸರದ ಕತೆ ಸಂಕಲನದ ಇನ್ನೊಂದು ಮುಖ್ಯ ಬರಹವೆಂದರೆ ಮೂಲಕೆ ಬಳ್ಳಿಯ ಸುತ್ತ ಇದನ್ನು ತೇಜಸ್ವಿ ಆರಂಭಿಸುವುದು ಹೇಗೆ, ಇದೊಂದು ವಿಚಿತ್ರವಾದ ಔಷಧಿ ಭೀಳಿನ ಕತೆ. ಇದರ ಬಗ್ಗೆ ಸುಳ್ಳು, ನಿಜ, ಕಲ್ಪನೆಯ ಕತೆಗಳು ಇವೆಲ್ಲವನ್ನೂ ಮೀರಿ ಈ ಬೀಳಿನ ಬಗ್ಗೆಯ ಸತ್ಯಾಂಶದ ಕೆಲವು ಪಾಲನ್ನು ತಿಳಿದುಕೊಳ್ಳಲು ನನಗೆ ಇಪ್ಪತ್ತು ವರ್ಷಗಳು ಹಿಡೆಯಿತೆಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಆದರೂ ನಿಜ.

ಈ ಕತೆಯಲ್ಲಿ ಗಿಡಮೂಲಿಕೆಗಳ ಸುತ್ತ ಬೆಳೆದ ಭಾರತೀಯ ನಾಟಿ ವೈದ್ಯ ಪದ್ಧತಿಯ ಇಂದಿನ ಅವಸ್ಥೆಯನ್ನು ಕುರಿತು ತೇಜಸ್ವಿ ಚಿಂತನೆ ನಡೆಸಿದ್ದಾರೆ. ಸ್ಥಳೀಯ ನಮ್ಮ ಜ್ಞಾನ ನಮ್ಮ ಸ್ಮೃತಿಯಿಂದ ಆಚೆ ಸರಿಯಲು ಆಧುನಿಕ ಜ್ಞಾನ ಮಾರ್ಗಗಳ ಧಾಳಿ ಮಾತ್ರ ಕಾರಣವಲ್ಲ ಎಂಬುದು ತೇಜಸ್ವಿಯವರ ಇಂಗಿತವೆಂದು ತೋರುತ್ತದೆ.

ಒಂದು ಜೀವನ ಕ್ರಮ ಬದಲಾದಂತೆ ಅದರ ಗ್ರಹಿಕೆಯ, ಅಭಿವ್ಯಕ್ತಿಯ ಕ್ರಮಗಳು ಮುಂದಿನ ಅಪ್ರಸ್ತುತವೂ ಆಗಿ ಬಿಡಬಹುದು. ಒಂದು ಸ್ಥಳೀಯ ಪದ್ಧತಿ ಸಂಪೂರ್ಣವಾಗಿ ಕಣ್ಮರೆಯಾಗಲೂಬಹುದು.



ಈ ಕತೆಯಲ್ಲಿ ನಿರೂಪಕ ಗಡ್ಡೆಯನ್ನು ತಿಂದು ತನ್ನದೊಂದು ಸಮಸ್ಯೆಗೆ ಪರಿಹಾರ ಕಂಡುಕೊಂಡ ಅನುಭವವನ್ನು ನಿರೂಪಿಸುತ್ತಾನೆ.


ನನಗೆ ಬಲಗಾಲು ಹಿಮ್ಮಡಿ ಅನೇಕ ದಿನಗಳಿಂದ ನೋಯುತ್ತಿತ್ತು. ಹೆಚ್ಚಿಗೆ ದೂರ ನಡೆದರೆ, ಕುಂಟಿಕೊಂಡೆ ನಡೆಯಬೇಕಿತ್ತು. ಇದರೊಡನೆ ಈಚೆಗೆ ಹಿಮ್ಮಡಿ ಎಲುಬಿನ ಪಕ್ಕ ಒಂದು ದಪ್ಪ ಗಡ್ಡೆ ಎದ್ದಿತು. ಡಾಕ್ಟರು ಅದನ್ನು ಶಸ್ತ್ರಚಿಕಿತ್ಸೆ ಮಾಡಿ ತೆಗೆಯಬೇಕೆಂದು ಹೇಳಿದ್ದರು. ಕೃಷ್ಣನ ಹತ್ತಿರ ಆ ಗಡ್ಡೆ ಚೂರು ತೆಗೆದುಕೊಂಡು ತಿಂದ ಮೇಲೆ ಎರಡು ದಿನಕ್ಕೆ ನೋಡುತ್ತೇನೆ. ಆ ಗಡ್ಡೆ ಎಲ್ಲಿತ್ತೆಂದೇ ಪತ್ತೆ ಮಾಡಲಾಗದಂತೆ ಮಂಗ ಮಾಯವಾಗಿತ್ತು.

ಇದು ಮೂಲಿಕೆ ಬಳ್ಳಿಯ ಪ್ರಭಾವ ಎಂದು ಹೇಗೆ ಖಚಿತವಾಗಿ ಹೇಳಲಿ ಕೇವಲ ಆಕಸ್ಮಿಕ ಇದ್ದರೂ ಇರಬಹುದು ಅಥವಾ ಮೂಲಿಕೆ ಬೀಳಿನದೇ ಪ್ರಭಾವ ಎಂದಾದರೂ ಮನುಷ್ಯ ದೇಹದಲ್ಲಿ ಉಂಟಾಗುವ ಗಡ್ಡೆಗಳಲ್ಲಿ ಅನೇಕ ತರದವು ಇದೆ. ಇವುಗಳಲ್ಲಿ ಕೆಲವು ಗಡ್ಡೆಗಳ ಮೇಲೆ ಮಾತ್ರ ಮೂಲಿಕೆ ಬಳ್ಳಿ ಪ್ರಭಾವ ಬೀರಬಹುದು. ಇವುಗಳನ್ನೆಲ್ಲಾ ಯಾರು ಸಂಶೋಧಿಸುವವರು.

ಈ ನಾಟಿ ವೈದ್ಯರ ಬಲವಾದ ಒಂದು ನಂಬಿಕೆ ಎಂದರೆ ಔಷದಿ ಯಾವುದೆಂದು ಹೇಳಿಬಿಟ್ಟರೆ ಔಷದಿ ಗುಣ ನಷ್ಟವಾಗಿ ಬಿಡುತ್ತೆ ಎನ್ನುವುದು. ಈ ನಂಬುಗೆಯ ದೆಸೆಯಿಂದ ಇಂದು ಭಾರತದ ವೈದ್ಯ ಪದ್ಧತಿಯೇ ನಷ್ಟವಾಗುವುದರಲ್ಲಿದೆ.

ಜಾಗತೀಕರಣದ ಇಂದಿನ ಸಂದರ್ಭದಲ್ಲಿ, ಎಲ್ಲ ಬಹುತ್ವವನ್ನು ನಾಶಗೊಳಿಸಿ ಒಂದೇ ಪಡಿಯಚ್ಚಿನ ಏಕಾಕಾರಗಳನ್ನು ಸೃಷ್ಟಿಸುವ ಧಾವಂತದ ಈ ದಿನಗಳಲ್ಲಿ ತೇಜಸ್ವಿ ಬರವಣಿಗೆ ತುಂಬ ಪ್ರಸ್ತುತವಾಗುವುದು. ಈ ಕಾರಣಕ್ಕೆ ಭೂತವನ್ನು ಕುರಿತು ಹಳಹಳಿಕೆಯಾಗಲೀ ಭವಿಷ್ಯದ ಕುರಿತ ರಮ್ಯ ಕನಸುಗಾರಿಕೆಯಾಗಲೀ, ಜಾಗತೀಕರಣಕ್ಕೆ ಸರಿಯಾದ ಪ್ರತಿಸ್ಪಂದನವಾಗುವುದಿಲ್ಲ. ಅಲ್ಲದೇ ತೇಜಸ್ವಿ ಜಾಗತೀಕರಣವನ್ನೂ ಪರಿಸರದ ಒಟ್ಟಾರೆ ಪರಿವರ್ತನಾಶೀಲ ಲಯದಲ್ಲೇ ಕಾಣುವುದರಿಂದ ಅವರು ಯಾವುದನ್ನು ನಿರಾಕರಿಸುವುದು ಇಲ್ಲ, ಆರಾಧಿಸುವುದೂ ಇಲ್ಲ. ಹೊಸ ಅರಿವಿನ ಧಾವಂತದಲ್ಲಿ ಅವರು ಎಲ್ಲವನ್ನು ರಹಸ್ಯಮಯವಾಗಿಸುವ/ ಎಲ್ಲವನ್ನು mystity ಮಾಡುವ ಬಾಲಿಶತನಕ್ಕೆ ಇಳಿದು ಬಿಡುವುದಿಲ್ಲ ಎಂಬುದು ಬಹಳ ಮುಖ್ಯ.

ತೇಜಸ್ವಿಯವರ ವಿಸ್ಮಯ ಅವರನ್ನು ಒಣಗೊಡ್ಡು ಆಗದಂತೆ ತಡೆದಿರುವಂತೆ, ಅವರ ಯಾವತ್ತೂ ಎಲ್ಲವನ್ನೂ ಪ್ರಶ್ನಿಸುವ ಮನೋಭಾವ ಹುಸಿ ಅನುಭಾವಿ ಆಗದಂತೆ ತಡೆದಿದೆ.



ತೇಜಸ್ವಿಯವರು ಪರಿಸರವನ್ನು ಗಮನಿಸುವುದಕ್ಕೂ ನಾವೆಲ್ಲಾ ನೋಡುವುದಕ್ಕೂ ಬಹಳ ವ್ಯತ್ಯಾಸವಿದೆ. ನಮ್ಮ ಸುತ್ತಲಿನ ಬದುಕು, ಪರಿಸರದಲ್ಲೇ ಸೂಕ್ಷ್ಮ ವಿವರಗಳನ್ನು ಹುಡುಕುವ ಅದರಿಂದ ಹೊಸ ಸೃಜನಶೀಲ ಅಂಶಗಳನ್ನು ಹುಟ್ಟಿಸುವ ಚೈತನ್ಯ ಪ್ರೇರಣೆ ತೇಜಸ್ವಿಯವರಿಗೆ ಮಾತ್ರವಿದೆ. ಅವರ ಪರಿಸರದ ಮೇಲಿನ ದೃಷ್ಟಿಕೋನ ಸಾಹಿತ್ಯಕ್ಕೆ ಹೊಸದು. ಪ್ರಕೃತಿಯೊಡನೆ ಅವರೊಂದು ಅವಿನಾಭಾವ ಸಂಬಂಧವನ್ನು ಹೊಂದಿದ್ದಾರೆ.

ಸಮಾಜವಾದಿ ನಿಲುವು, ಬರವಣಿಗೆ ತೇಜಸ್ವಿಯವರ ಕೃತಿಗಳಲ್ಲಿ ಕಂಡುಬರುತ್ತದೆ. ಅನೇಕ ಜಾತಿ, ಜನ, ವರ್ಗದ ಚಿತ್ರಣ ಇಲ್ಲಿ ಬರುತ್ತದೆ. ತೀವ್ರ ಆಸಕ್ತಿ ಹಾಗೂ ಶ್ರದ್ಧೆಯಿಂದ ಸಂಗತಿಗಳನ್ನು ಗ್ರಹಿಸುವ ಕ್ರಮ ಕಂಡುಬರುತ್ತದೆ. ಜೇಬುಗಳ್ಳ ಪ್ಯಾರ ಕೂಡ ನಿರೂಪಕನ ಮಾನವೀಯತೆಯಿಂದಾಗಿ ಮುಗ್ಧನಾಗಿ ಪರಿವರ್ತನೆಗೊಳ್ಳುತ್ತಾನೆ. ಕಿವಿ ಎಂಬ ನಾಯಿ ಜೊತೆ ಮನುಷ್ಯ ಸಂಬಂಧಗಳನ್ನು ಬೆಸೆಯುವ ಮಾನಸಿಕ ಸ್ತರ ಗಾಢವಾದದ್ದು.



ಅಧ್ಯಾಯ ನಾಲ್ಕು

ಅಧ್ಯಯನದ ಫಲಿತಗಳು





ಅಧ್ಯಾಯ ನಾಲ್ಕು

ಅಧ್ಯಯನದ ಫಲಿತಗಳು

ತೇಜಸ್ವಿ ಸಾಹಿತ್ಯವನ್ನು ಓದಿದ ಮಾತ್ರಕ್ಕೆ ತೇಜಸ್ವಿ ನಮಗೆ ಪೂರ್ತಿ ಅರ್ಥವಾಗಿ ಬಿಡುವುದಿಲ್ಲ. ತೇಜಸ್ವಿಯವರ ಅಲೋಚನ ದೃಷ್ಟಿಯೇ ಬೇರೆ ಅದು ಅವರ ವಿಚಾರಗಳಲ್ಲಿ ಆಳವಾಗಿ ಕೆಲಸ ಮಾಡುತ್ತದೆ. ಪರಿಸರವನ್ನು ಕೇವಲ ನೈಸರ್ಗಿಕ ಸಂಪತ್ತಾಗಿ ನೋಡುತ್ತಿಲ್ಲ. ಅದರಲ್ಲಿ ಮನುಷ್ಯರಿದ್ದಾರೆ. ಪ್ರಾಣಿ ಪಕ್ಷಿಗಳಿದ್ದಾರೆ. ಜೀವ ಸಂಕುಲದಲ್ಲಿ ಎಲ್ಲವನ್ನು ತಮ್ಮದಾಗಿಸಿಗೊಂಡಿದ್ದಾರೆ. ಅದರಲ್ಲಿ ಎಲ್ಲವೂ ಒಳಗೊಂಡಿದೆ. ಅವರ ಕತೆಗಳಲ್ಲಿ ಬರುವ ಬಹಳಷ್ಟು ಪಾತ್ರಗಳು ಹಳ್ಳಿಯ ಜನರು ಅವರ ನಡೆ ನುಡಿ ಒಬ್ಬರಿಗಿಂತ ಒಬ್ಬರು ಭಿನ್ನವಾಗಿರುತ್ತವೆ.

ಆ ಪಾತ್ರಗಳು ತಮ್ಮ ಮಾತುಗಳಲ್ಲಿ ಯಾವುದೇ ಸಭ್ಯತೆಯನ್ನು ಕಾಪಾಡಿಕೊಳ್ಳುವುದಿಲ್ಲ. ನೇರವಾಗಿ ತಮಗೆ ಅನಿಸಿದ್ದನ್ನು ಹೇಳುತ್ತಾರೆ. ಅಂಥಹ ಪಾತ್ರಗಳೆ ಹೆಚ್ಚು ಜೀವಂತವಾಗಿವೆ. ಗಂಭೀರ ಸಾಹಿತ್ಯದ ಚರ್ಚೆಯ ಸಂದರ್ಭಕ್ಕೆ ತೇಜಸ್ವಯವರ ವಿಷಯ ಬಂದೆರೆ, ಅವರನ್ನು ಭಿನ್ನ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ. ಆವರ ಸಾಹಿತ್ಯದ ಅಧ್ಯಯನ ಕೈಗೊಂಡಾಗ, ಉದ್ದೇಶಗಳನ್ನು ಹೇಳಬಹುದೆ ವಿನಃ ಅವರ ಬಗ್ಗೆ ಇಷ್ಟಕ್ಕೆ ಸೀಮಿತ, ಅದರ ವ್ಯಾಪ್ತಿ ಇಷ್ಟೆ ಎಂದು ಹೇಳಲು ಬರುವುದಿಲ್ಲ.

ತೇಜಸ್ವಿ ಅವರ ಕತೆಗಳ ಸೂಕ್ಷ್ಮತೆಯಲ್ಲಿ ಸೃಜನಶೀಲ ನಿರೂಪಣೆಯ ತಾಜಾತನದ ಪಾಲು ದೊಡ್ಡದು. ಕೃತಿಕಾರ ಕೃತಿಯಾಚೆಗಿದ್ದು ಹೇಳುವ ಮಾತು ಕಡಿಮೆ. ತಾನು ಒಳಗಿದ್ದು ಅನುಭವಿಸುವಲ್ಲಿ ನಿಕಟವಾಗುವ ಆಲೋಚನೆ ದಟ್ಟವಾದಂತಿದೆ. ಭಾಷೆಯ ಕಾರಣಕ್ಕೂ ಯಾವ ಕ್ರಾಂತಿಯ ಬೆನ್ನು ಹತ್ತುವುದಿಲ್ಲ. ಆಯಾ ಕತೆಯ ಹಂದರ ಅಪೇಕ್ಷಿಸುವ ಭಾಷೆ ತೀರಾ ಸಹಜವಾಗಿ ರೂಪುಗೊಳ್ಳುತ್ತದೆ. ಕಸರತ್ತಿಗೆ ಅವಕಾಶವಿಲ್ಲ ಸಾಹಿತ್ಯದ ಅಕೆಡೆಮಿಕ್ ಎನ್ನುವ ಭ್ರಮೆಗಳಿಂದಾಚೆಗೆ ತನ್ನದೆ ಆದ ನಿರ್ಧಿಷ್ಟ ಓದುಗ ವಲಯವನ್ನು ರೂಪಿಸಿಕೊಳ್ಳುವ ಮಾಂತ್ರಿಕತೆ ಅವರ ಬರಹಕ್ಕಿದೆ.



ಕಾಲ್ಪನಿಕತೆಗಿಂತ ವಾಸ್ತವತೆಯನ್ನು ಆಧರಿಸಿದ ಸಂದರ್ಭಗಳೇ ಕತೆಯಾಗುವ ಸೊಗಸು ತೇಜಸ್ವಿ ಅವರ ಬರಹಕ್ಕಿದೆ. ಆದ್ದರಿಂದಲೂ ಒಂದು ಕೃತಿಯ ಜೊತೆಗೆ ಹೋಲಿಸಿ ನೋಡಬೇಕಾದ ಅನಿವಾರ್ಯತೆ ಅಗತ್ಯತೆಗಳು ಬೇಕಿಲ್ಲ. ಯಶಸ್ಸನ್ನು ಓದುಗರೇ ನಿರ್ಧರಿಸಬಹುದಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ತೇಜಸ್ವಿಯವರ ಪರಸರದ ಕತೆಗಳು ಕಥಾಸಂಕಲನವನ್ನು ಮೂಲ ಆಕರವನ್ನಾಗಿ ಇಟ್ಟುಕೊಳ್ಳಲಾಗಿದೆ. ಈ ಸಂಕಲನ ಅಧ್ಯಯನದ ಮೂಲ ವಿಷಯವಾಗಿದ್ದರೂ, ಇದರ ಹಿನ್ನೆಲೆಯಲ್ಲಿ ತೇಜಸ್ವಿಯವರಿಗಿದ್ದ ಪರಿಸರದ ಮೇಲಿನ ಆಸಕ್ತಿಯನ್ನು ಕಂಡುಕೊಳ್ಳಲು ನಾವು ಪ್ರಯತ್ನಿಸಿದ್ದೇವೆ.

ನಮ್ಮ ಈ ಅಧ್ಯಯನದಲ್ಲಿ ನಾಲ್ಕು ವಿಭಾಗಗಳಲ್ಲಿ ತೇಜಸ್ವಿಯವರಿಗಿದ್ದ ಪರಿಸರದ ಮೇಲಿನ ಆಸಕ್ತಿ, ಕಾಳಜಿ, ಕುತೂಹಲ ಹೇಗೆ ಉಂಟಾಯಿತು, ಅವರ ಸೃಜನಶೀಲತೆ, ಸೃಷ್ಟಿಕ್ರಿಯೆಗ ಪ್ರೇರಣೆ ಯಾವುದು ಅದರ ಹಿಂದಿನ ಉದ್ದೇಶ, ತಾತ್ವಿಕತೆಯನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದೇವೆ.

ತೇಜಸ್ವಿಯವರ ಕೃತಿಗಳಲ್ಲಿ ಹೊಸದೇನಾದರೂ ಹುಡುಕಬೇಕೆಂಬುದು ಉದ್ದೇಶವಲ್ಲ. ಅಥವಾ ಅವರ ಕೃತಿಗಳನ್ನು ಓದಿದ ಮಾತ್ರಕ್ಕೆ ತೇಜಸ್ವಿ ನಮಗೆ ಸಂಪೂರ್ಣವಾಗಿ ಅರ್ಥವಾಗಿದ್ದಾರೆ ಎಂದು ಹೇಳಲು ಬರುವುದಿಲ್ಲ. ಕೆಲವೊಂದು ವಿಚಾರಗಳಲ್ಲಿ ತೇಜಸ್ವಿ ನಿಗೂಢ ಪ್ರಶ್ನೆಯಾಗಿಯೇ ಉಳಿದು ಬಿಡುತ್ತಾರೆ.

ತಾತ್ವಿಕತೆ ಎಂದರೆ ತತ್ವಚಿಂತಕ, ತತ್ವಶಾಸ್ತ್ರಜ್ಞ, ತತ್ವಶಾಸ್ತ್ರ ಹೀಗೆಲ್ಲ ಅರ್ಥಬರುತ್ತದೆ. ಹೀಗೆಲ್ಲ ಅರ್ಥವಿರುವಾಗ ತೇಜಸ್ವಿ ಎಲ್ಲೂ ತತ್ವಶಾಸ್ತ್ರಜ್ಞರಾಗಿ ನಮಗೆ ಕಾಣುವುದಿಲ್ಲ.

ತತ್ವ ಚಿಂತಕರಲ್ಲಿ ಅವರದೇ ಆದ ಆಲೋಚನೆಗಳಿರುತ್ತವೆ. ಅವುಗಳಿಗೆ ಅವರು ಬದ್ಧರಾಗಿರುತ್ತಾರೆ. ಹಾಗೆ ಬೇರೆಯವರು ಇರಬೇಕೆಂದು ಬಯಸುತ್ತಾರೆ. ಒಮ್ಮೊಮ್ಮೆ ಬಲವಂತವಾಗಿ ಅವರ ವಿಚಾರಧಾರೆಗಳನ್ನು ಬೇರೆಯವರ ಮೇಲೆ ಪ್ರಭಾವಿಸಲು ಪ್ರಯತ್ನಿಸುತ್ತಾರೆ. ಆದರೆ ತೇಜಸ್ವಿ ಇಂಥಹ ಯಾವುದೇ ವಿಷಯಗಳಲ್ಲಿ ತಲ್ಲೀನರಾಗಿದ್ದಾರೆ ಎಂದು ಹೇಳಲು ಬರುವುದಿಲ್ಲ.

ಅವರು ಕಾಲಮನದ ಎಲ್ಲಾ ವಿಷಯಗಳಿಗೆ ಸ್ಪಂದಿಸುತ್ತಾರೆ. ಅವರ ವಿಚಾರದಲ್ಲಿ ಅವರದೇ ಆದ ಒಂದು ಸ್ಪಷ್ಟ ನಿಲುವು ಧೋರಣೆಯನ್ನು ಗುರುತಿಸಬಹುದೇ ಹೊರತು ಅದನ್ನು ಬೇರೆಯವರು ಹೀಗೆ ಅರ್ಥಮಾಡಿ ಕೊಳ್ಳಬೇಕೆಂಬ ಉದ್ದೇಶವಿಲ್ಲ, ನಿಯಮವಿಲ್ಲ.

ತೇಜಸ್ವಿ ಓದುಗರಿಗೆ ಯಾವುದೇ ರೀತಿಯ ಸಲಹೆಗಳನ್ನು ನೀಡಲು ಬಯಸುತ್ತಿಲ್ಲ. ಒಂದು ವಿಷಯದ ಬಗ್ಗೆ ಅರಿವು ತಿಳುವಳಿಕೆಯನ್ನು ನೀಡುತ್ತಿದ್ದಾರೆ. ತೇಜಸ್ವಿಯವರು ಮೂಲತಃ ಪರಿಸವಾದಿಯಾಗಿ ರೂಪುಗೊಳ್ಳಲು ಇಷ್ಟ ಪಡುವುದಿಲ್ಲ. ಏಕೆಂದರೆ ಪರಿಸರದ ಬಗೆಗಿನ ಅವರ ನಿಲವು ಧೋರಣೆಗಳೆ ಬೇರೆ.



ತೇಜಸ್ವಿಯವರೇ ಹೇಳುವಂತೆ, ಇದಕ್ಕೆಲ್ಲಾ ಸುಲಭವಾದ ಉತ್ತರವಂತೂ ಕಾರ್ಯಕಾರಣ ಸಂಬಂಧಗಳ ಸೂಕ್ಷ್ಮಾತಿಸೂಕ್ಷ್ಮ ತರ್ಕದ ಎಲ್ಲ ತಂತ್ರಗಳನ್ನು ಬಳಸಿಯೂ, ಸಮಕಾಲೀನ ಮನುಷ್ಯ ನಾಗರೀಕತೆಯ ಸಂಕೀರ್ಣ ವ್ಯಾಪಾರಗಳ ಬಗ್ಗೆ ಓದುಗನನ್ನು ಜಾಗೃತಗೊಳಿಸಿಯೂ, ತೇಜಸ್ವಿ ಬರವಣಿಗೆ ಮನುಷ್ಯನ ಎಲ್ಲ ಬೌದ್ಧಿಕ ಅಹಂಕಾರ ಮತ್ತು ಬೌದ್ಧಿಕ ವಿಶ್ಲೇಷಣೆಗಳ ಮಿತಿಯನ್ನು ವಿನಯ ಪೂರ್ವಕ ಮಂಡಿಸುತ್ತದೆ. ಆದರೆ, ಕ್ರಿಯಾಹೀನತೆ ಮತ್ತು ಜೀವನ ವಿಮುಖತೆ ಇದಕ್ಕೆ ಮದ್ದಲ್ಲ ಎಂಬುದನ್ನು ಮಾತ್ರ ಒತ್ತಿ ಹೇಳುತ್ತದೆ.

ಜಗತ್ತಿನ ಅಸಂಬದ್ಧತೆಯಲ್ಲಿ ಮನುಷ್ಯನ ಕ್ರೌರ್ಯವನ್ನು ತೇಜಸ್ವಿ ಬರವಣಿಗೆ ಕೇವಲ ನಿರ್ವಿಕಾರವಾಗಿ ಗಮನಿಸುವುದಿಲ್ಲ. ಅದು ಮನುಷ್ಯನ ಕ್ರಿಯಾಶೀಲತೆಯನ್ನು ಅದರ ಎಲ್ಲಾ ಮಿತಿಗಳೊಡನೆ ಮೆಚ್ಚುತ್ತದೆ ಮತ್ತು ಗೌರವಿಸುತ್ತದೆ.

ಒಟ್ಟಾರೆ ಈ ಪ್ರಬಂಧದಲ್ಲಿ ತೇಜಸ್ವಿಯವರ ಪರಿಸರದ ಮೇಲಿನ ಆಸಕ್ತಿ ಬೆಳವಣಿಗೆ ಇವುಗಳನ್ನು ಮಾತ್ರ ಮುಖ್ಯ ದೃಷ್ಟಿಯಲ್ಲಿಟ್ಟುಕೊಂಡಿದ್ದೇವೆ. ಆದರೆ ತೇಜಸ್ವಿಯವರನ್ನು, ಪರಿಸರವನ್ನು ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ಅವರನ್ನು ಬಿಟ್ಟು ಪರಿಸರವನ್ನು ಅಭ್ಯಾಸ ಮಾಡಲು ಬರುವುದಿಲ್ಲ.

ಇಲ್ಲಿ ಪರಿಸರದ ಕಥೆ ಕೃತಿಯೇ ಪ್ರಸ್ತುತ ಅಧ್ಯಯನದ ಮೂಲ ಆಕರವಾಗಿದ್ದರೂ ತೇಜಸ್ವಿಯವರ ಒಟ್ಟಾರೆ ಕೃತಿಗಳನ್ನೂ ಮತ್ತು ಪರಿಸರ ಹಾಗೂ ಅವರ ಬರವಣಿಗೆಗಿರುವ ತಾತ್ವಿಕ ಸಂಬಂಧಗಳನ್ನು ಅರ್ಥೈಸಲು ಪ್ರಯತ್ನಿಸಲಾಗಿದೆ. ಹೊರಗಿನ ಸೃಷ್ಟಿಕ್ರಿಯೆಯ ಪರಿಸರವು ತೇಜಸ್ವಿ ಅವರಲ್ಲಿ ಹೊಸ ಹುಟ್ಟು ಜೀವಂತಿಕೆಯನ್ನು ಪಡೆದು, ಹೊಸ ವಿಸ್ಮಯವಾಗಿ ಕಂಡುಬರುತ್ತದೆ.

ಪರಿಸರದ ಕತೆಯಲ್ಲಿ ತೇಜಸ್ವಿಯವರ ಗ್ರಾಮ ಕಲ್ಪನೆ ಸಂಪೂರ್ಣ ಬದಲಾಗಿದೆ. ಏಕೆಂದರೆ ಮೇಲು ನೋಟಕ್ಕೆ ಒರಟಾಗಿ ತೋರುವ ಒಂದು ಸಮುದಾಯದಿಂದಲೇ ತೇಜಸ್ವಿ ತಮ್ಮ ಸೃಜನಶೀಲ ಪ್ರೇರಣೆಯನ್ನು ಪಡೆಯುತ್ತಿದ್ದಾರೆ.

ಈ ಸಮುದಾಯಗಳಲ್ಲಿ ಅಡಗಿರುವ ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯತ್ತ ತೇಜಸ್ವಿ ಗಮನ ಹರಿಸಿದ್ದಾರೆ. ನಮ್ಮ ಅಸಹನೆ, ಅವಗಣನೆಗಳಿಗೆ ತುತ್ತಾಗಿ ನಮ್ಮಿಂದ ದೂರವಾಗಿದ್ದ ನಮ್ಮ ಸಮುದಾಯಗಳು ಹೇಗೆ ತೇಜಸ್ವಿಯವರ ಪ್ರಭಾವಕ್ಕೊಳಗಾಗಿ ಹೊಸ ರೂಪು ಪಡೆದುಕೊಂಡು ಅವರ ಜೀವನ ವಿಷಯಗಳು ಸಾಹಿತ್ಯದ ಕಡೆಗೆ ಹರಿದು ಬಂದವು ಎಂಬುದನ್ನು ನೋಡಬಹುದು.

ಯಾಕೆಂದರೆ ತೇಜಸ್ವಿಯವರ ಬರವಣಿಗೆ ಮುಖ್ಯ ಧಾರೆ ಬಂದುದೆ ಗ್ರಾಮ್ಯ ಜೀವನದ ಅಪಾರ ಶಕ್ತಿಯನ್ನು ಮತ್ತು ಆಧುನಿಕ ನಾಗರಿಕತೆಯ ಪರಿಣಾಮವಾಗಿ, ಹಳ್ಳಿಯಲ್ಲಿ ತಲೆದೋರುವ ಅವಾಂತರಗಳನ್ನು ಅತ್ಯಂತ



ಸೂಕ್ಷ್ಮವಾಗಿ ಗ್ರಹಿಸಿರುವಲ್ಲಿ, ಅವರ ಮೂರು ಕಥಾಸಂಕಲನಗಳ ಹೆಸರುಗಳನ್ನು ನೋಡಿ ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಫೀಸು, ಕಿರಗೂರಿನಗಯ್ಯಾಳಿಗಳು, ನಿಸ್ಸಂಶವಾಗಿಯೂ ಈ ಮೂರು ಕಥೆಗಳು ತೇಜಸ್ವಿಯವರ ಆಯಾ ಕಾಲದ ಧೋರಣೆಗಳನ್ನು ವ್ಯಕ್ತಗೊಳಿಸಿರುವ ರಚನೆಗಳು. ಅವರ ಧೋರಣೆಗಳು ಗ್ರಾಮೀಣ ಜೀವನದೊಂದಿಗೆ ಹೇಗೆ ಸಾಂಗತ್ಯದಲ್ಲಿವೆ ಎಂಬುದರ ಹಿನ್ನೆಲೆಯಲ್ಲಿ ಇವೆ ಅವರ ಪ್ರಾತಿನಿಧಿಕ ಕತೆಗಳೂ ಹೌದು.

ತೇಜಸ್ವಿ ತಮ್ಮ ಪರಿಸರದ ಆಸಕ್ತಿಯಲ್ಲಿ ಹೆಚ್ಚು ಪ್ರಾಣಿಪಕ್ಷಿಗಳನ್ನು ಮೇಲೆ ಗಮನ ಹರಿಸಿ ಅವುಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಅವರೇ ಹೇಳುವ ಹಾಗೆ ಹಕ್ಕಿಗಳು ನನ್ನ ಜೀವನದಲ್ಲಿ ಹಾಸು ಹೊಕ್ಕಾಗಿವೆ. ನಾನು ಮನುಷ್ಯನ ಸಾಮಾಜಿಕ ವಸ್ತುವಿನ ಮೇಲೆ ಬರೆದರೂ ಅಲ್ಲಿ ಹಕ್ಕಿಗಳು ನುಸುಳುತ್ತವೆ. ಅದೇ ರೀತಿ ಹಕ್ಕಿಗಳ ಬಗ್ಗೆ ಬರೆಯಹೊರಟಾಗ ಮನುಷ್ಯರು ನುಸುಳಿರುವುದನ್ನು ನೋಡಬಹುದು. ಹಕ್ಕಿಗಳನ್ನು ಪಕ್ಷಿ ವೀಕ್ಷಕನಾಗಿ ನಾನು ನೋಡಿರುವುದು ತುಂಬಾ ಕಡಿಮೆ. ಅವು ನಾನು ಎದುರಿಸುತ್ತಿರುವ ಪರಿಸರದ ಅವಿಭಾಜ್ಯ ಅಂಗಗಳಾಗಿವೆ. ಆದ್ದರಿಂದಲೇ ಅವು ಇಲ್ಲಿ ತಮ್ಮ ಜಾತಿ ಕುಲ ಗೋತ್ರಗಳ ಜಾತಕವನ್ನು ಮೀರಿ ಮೈದಾಳಿವೆ.

ತೇಜಸ್ವಿಯವರ 'ಪರಿಸರದ ಕತೆ' ಕೃತಿಯು ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ ದೊರಕಿಸಿ ಕೊಟ್ಟ ಕೃತಿಯಾಗಿದೆ. ಕಥೆಯೆಂದರೆ ಕಥೆ, ಕಾದಂಬರಿ ಎಂದರೆ ಕಾದಂಬರಿ, ಪ್ರಬಂಧ ಎಂದರೆ ಪ್ರಬಂಧ. ಪರಿಸರ ವಿಜ್ಞಾನ ಎಂದರೆ ಪರಿಸರ ವಿಜ್ಞಾನ. ಓದುಗರ ಆಪೇಕ್ಷೆಗೆ ತಕ್ಕಂತೆ ಆಕಾರ ತಳೆಯುವ ಮಾಯಾವಿಯಂಥ ವಸ್ತು ವಿನ್ಯಾಸ. ದಿನ ಬೆಳಗಾದರೆ ನಮ್ಮ ಕಣ್ಣೆದುರು ಕಾಣುವ ಪರಿಚಿತ ಸಂಗತಿಗಳೇ ಅತ್ಯಂತ ಅಪರಿಚಿತ ಆಶ್ಚರ್ಯಕರ ಸಂಗತಿಗಳಾಗಿ ಓದುಗರೆದುರು ಅವಿರ್ಭವಿಸುತ್ತವೆ.

ಸ್ವತಃ ತೇಜಸ್ವಿಯವರೇ ವಿವರಿಸುವಂತೆ ನಾನು ವಿಜ್ಞಾನ ಪದವೀಧರನಲ್ಲ. ವಿಜ್ಞಾನಿಯೂ ಅಲ್ಲ, ನಾನು ಉಚ್ಚಶಿಕ್ಷಣ ಪಡೆದಿದ್ದು ಸಾಹಿತ್ಯದಲ್ಲಿ. ಆದರೆ ಹಳ್ಳಿಗೆ ಬಂದ ಮೇಲೆ ಸುತ್ತಮುತ್ತಲ ಅನೇಕ ಕೌತುಕಮಯ ವಿದ್ಯಮಾನಗಳನ್ನು ನೋಡುತ ಅವುಗಳ ಬಗ್ಗೆ ತಿಳಿದುಕೊಳ್ಳುತ್ತಾ ಬಂದೆ. ನಾನು ಕಂಡ ಪಶುಪಕ್ಷಿ, ಕ್ರಿಮಿ ಕೀಟಗಳ ವ್ಯಕ್ತಿತ್ವಗಳನ್ನು ತಿಳಿದುಕೊಳ್ಳುತ್ತಲೇ ನಾನು ಅವುಗಳ ಬಗ್ಗೆ ಅಭ್ಯಾಸ ಮಾಡಿದವನು. ನಾನು ಜ್ಞಾನೋಪಾಸಕನಾಗಲಿ, ವಿದ್ವಾಂಸನಾಗಲಿ ಅಲ್ಲ. ಸಾಹಿತ್ಯವೆ ನನ್ನ ಸ್ವಧರ್ಮ ಹಾಗಾಗಿ ನಾನು ಏನನ್ನು ಬರದರೂ ಅದಕ್ಕೆ ಸಾಹಿತ್ಯದ ಪರಿವೇಷ, ಕಥೆ ಕಾದಂಬರಿಗಳ ಛಾಯೆ ಇರುತ್ತದೆ.

ಸಾಹಿತಿ ತನ್ನ ಅನುಭವವನ್ನು ಸಮರ್ಥವಾಗಿ ಹೇಳಲು ಅನೇಕ ವೇಳೆ ತತ್ವಶಾಸ್ತ್ರ, ಪುರಾಣ ಮನಃ ಶಾಸ್ತ್ರಗಳ ಉಪಯೋಗ ಮಾಡಿಕೊಂಡಿರುತ್ತಾರೆ.



ಕೆಲವೊಂದು ಸಂಗತಿಗಳನ್ನು ವೈಜ್ಞಾನಿಕ ವಿಚಾರಗಳನ್ನು ಪಾಠ ಹೇಳಿದಂತೆ ವಿವರಿಸಿದರೆ ಮನಸ್ಸು ತಿರಸ್ಕರಿಸುತ್ತದೆ. ಸ್ವಾನುಭವಗಳೊಂದಿಗೆ ಸಂಯೋಜನೆಗೊಂಡು ಜೀವನ ಸಂದರ್ಭಗಳಲ್ಲಿ ಹೇಳಿದಾಗ ಮಾತ್ರ ಎಂಥ ಕ್ಲಿಷ್ಟ ವಿಚಾರವಾದರೂ ಸುಲಭವಾಗಿ ಅರ್ಥವಾಗುತ್ತದೆ ಈ ರೀತಿಯ ಮೊದಲ ಪ್ರಯತ್ನವೇ ಪರಿಸರದ ಕಥೆ.

ನಮ್ಮ ತರುಣ ಜನಾಂಗಕ್ಕೆ ಪ್ರಕೃತಿ ಮತ್ತು ಪರಿಸರದೊಂದೆಗಿ ಅನ್ಯುನ್ಯತೆಯನ್ನು ಚಿತ್ರಿಸುವಲ್ಲಿ ಪರಿಸರ ಜಾಗೃತಿಯ ಬಗ್ಗೆ ವೈಚಾರಿಕ ಆಂದೋಳನವನ್ನು ಸೃಷ್ಟಿಸುವಲ್ಲಿ ಅತ್ಯಂತ ಮಹತ್ವದ ಕೃತಿ.

ತೇಜಸ್ವಿಯವರ ಕಥೆಗಳಲ್ಲಿ ವ್ಯಕ್ತವಾಗುವ ವರ್ತಮಾನದ ಸಂವೇದನಗಳ ಸ್ವರೂಪ ಯಾವುದು ಎಂಬ ಪ್ರಶ್ನೆಗೆ ಕೇವಲ ಯಾವುದೋ ಒಂದು ಕಥೆ ಉತ್ತರ ನೀಡಲಾರದು. ಅವರ ಬರವಣಿಗೆಯ ಕೇಂದ್ರದಲ್ಲಿಯೂ ವರ್ತಮಾನದ ತಳಮಳಗಳು ಬದುಕಿನ ಪ್ರಶ್ನೆಗಳು ಕಳೆದುಕೊಳ್ಳುತ್ತಿರುವ ನಮ್ಮ ವ್ಯಕ್ತಿತ್ವದ ವಿಶಿಷ್ಟತೆಗಳು ಒಂದೊಂದು ಸೆಣಸಾಡುತ್ತಿರುವ ಚಿತ್ರಗಳು ಗೋಚರವಾಗುತ್ತವೆ.

ತೇಜಸ್ವಿಯವರಿಗೆ ಪರಿಸರದ ಬಗ್ಗೆ ಗಾಢವಾದ ಪ್ರೀತಿಯಿದ್ದರೂ ಕೊನೆ ತಾವು ಪ್ರೀತಿಯಿಂದ ಕೈಗೊಂಡ ವ್ಯವಸಾಯದಿಂದ ಜೀವನದಲ್ಲಿ ಬೇಸರವನ್ನು ಒಮ್ಮೊಮ್ಮೆ ಅನುಭವಿಸುತ್ತಾರೆ ಅದರಿಂದ ಬಿಡುಗಡೆಗೆ ಪ್ರಯತ್ನಿಸುತ್ತಾರೆ. ನಗರ ಜೀವನದಂತೆ ಗ್ರಾಮದ ಬದುಕು ಅಲ್ಲಿನ ಸಂಗತಿಗಳು ಬೇಸರ ತರಿಸಿಬಿಡುತ್ತವೆ. ಇದರಿಂದಾಗಿ ತೇಜಸ್ವಿ ಕರ್ವಾಲೋ ಕಾದಂಬರಿಯ ಮೊದಲ ಭಾಗದಲ್ಲಿ ತನ್ನ ತೋಟ ಮಾರುವ ನಿರ್ಧಾರಕ್ಕೆ ಬಂದಿರುತ್ತಾರೆ ಅವರಿಗೆ ವ್ಯವಸಾಯದಿಂದ ಯಾವ ಲಾಭಗಳು ಕಂಡುಬರದೆ ಆರ್ಥಿಕ ಬಿಕ್ಕಟ್ಟಿಗೆ ಸಿಲುಕುವ ಪರಿಸ್ಥಿತಿಯನ್ನು ವ್ಯವಸ್ಥಿತಿಯ ವಾಸ್ತವತೆಯನ್ನು ಹೇಳುತ್ತಾರೆ.

ಚಿದಂಬರ ರಹಸ್ಯ ಕಾದಂಬರಿಯಲ್ಲಿ ಕೂಡಾ ಪರಿಸರ ಬಹಳ ಮುಖ್ಯ ಪಾತ್ರವಾಗಿ ಬಂದಿದೆ. ಅದೇ ಮಲೆನಾಡಿನ ಕೆಸರೂರು ಎಂಬ ಗ್ರಾಮದಲ್ಲಿ ನಡೆಯುವ ಸಂದರ್ಭಗಳಿಗೆ ವಿಚಾರಗಳಿಗೆ ಸಂಬಂಧಿಸಿದ್ದು.

ಇಲ್ಲಿ ಪರಿಸರ ಮುಖ್ಯ ಪಾತ್ರವಾಗಿ ಬಂದು ಕ್ರಮೇಣ ಅದರಲ್ಲಿ ಸಂಶೋದನೆ ವ್ಯಾಪಾರ, ರಾಜಕೀಯ, ಹೀಗೆ ಕೆಲವು ವಿಚಾರಗಳು ಬಂದು ಹೋಗುತ್ತವೆ. ಈ ಎಲ್ಲಾ ಉಪಾಯಗಳು ಕಾದಂಬರಿಯಲ್ಲಿ ಒಂದಕ್ಕೊಂದು ಪೂರಕ ಸಂಬಂಧಗಳಾಗಿ ಬಂದು ಬೆಳೆಯುತ್ತಾ ಹೋಗುತ್ತವೆ.

ಸಾಮಾಜಿಕ, ಸಾಂಸ್ಕೃತಿಕ ರಾಜಕೀಯ ಈ ಎಲ್ಲವುಗಳ ಪರಿಸರ ಬದಲಾವಣೆಗೆ ಒಟ್ಟಿನಲ್ಲಿ ಕ್ರಾಂತಿಯಾಗಬೇಕಪ್ಪ ಎಂದು ಪ್ರಾರಂಭಗೊಂಡ ಕಾದಂಬರಿ ಕೆಸರೂರಿನ ಪರಿಸರದ ಅವನತಿಯತ್ತ ಕೊಂಡೊಯ್ಯುತ್ತದೆ.



ತೇಜಸ್ವಿಯವರಿಗೆ ಕಣ್ಣಮುಂದೆ ಕಾಣುವ ಪ್ರಕೃತಿಯ ವಿವರಗಳೇ ಮುಖ್ಯವಾಗಿ ಕಾಣುತ್ತವೆ. ಪ್ರಕೃತಿ ಬದುಕಿನ ಜೀವ ಸೆಲೆ. ಪ್ರಕೃತಿಯ ರಹಸ್ಯ ಅದರಲ್ಲಿ ಕಾಣುವ ಪ್ರಸಂಗಗಳು ಅತ್ಯಂತ ವೈಜ್ಞಾನಿಕವಾಗಿ ನಡೆಯುತ್ತವೆ. ಅದಕ್ಕೊಂದು ಸೃಷ್ಟಿರೂಪವಿದೆ, ಆದರದೇ ಆದ ಭಾಷೆಯಿದೆ. ಅದನ್ನು ಬೇರೆ ಜನಗಳಿಗೆ ತಿಳಿಸುವ ಅಪೇಕ್ಷೆ ತೇಜಸ್ವಿಯವರಿಗಿದೆ. ಹಾಗೆಯೇ ತೇಜಸ್ವಿಯವರು ಪ್ರಕಟಿಸಿದ ಪ್ರಕೃತಿ ಪ್ರಾಣಿ ಪಕ್ಷಿಗಳಿಗೆ ಸಂಬಂಧಿಸಿದ ಕೃತಿಗಳು ಪರಿಸರವನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಗುತ್ತವೆ.

ಪರಿಸರ ಒಬ್ಬ ವ್ಯಕ್ತಿಯ ಮೇಲೆ ಲೇಖಕರ ಮೇಲೆ ಏಕೆ ತನ್ನ ಪ್ರಭಾವ ಬೀರುತ್ತದೆ ಎಂಬುದನ್ನು ಪ್ರೊ.ರಾಮದಾಸ್ ಒಂದು ವಿಚಾರ ಸಂಕಿರಣದಲ್ಲಿ ಹೇಳಿದ ಮಾತುಗಳನ್ನು ಗಮನಿಸಬಹುದು.

ಅನಂತಮೂರ್ತಿಯವರು ಬೆಂಗಳೂರಿನ ಡಾಲರ್ಸ್ ಕಾಲನಿಯಲ್ಲಿದ್ದಾರೆ. ತೇಜಸ್ವಿ ಮೂಡಿಗೆರೆಯ ಕಾಫಿತೋಟದೊಳಗಡೆಯಿದ್ದಾರೆ. ಕಾರಂತರು ಕಡೆಯವರೆಗೂ ಕಡಲತೀರದ ಸಾಲಿಗ್ರಾಮವನ್ನು ಬಿಟ್ಟು ಎಲ್ಲಿಗೂ ಬರಲಿಲ್ಲ., ಕುವೆಂಪು ಮೈಸೂರಿನ ಉದಯರವಿಯನ್ನು ಬಿಟ್ಟು ಎಲ್ಲೂ ಹೋಗಲು ತಯಾರಿರಲಿಲ್ಲ ಇದನ್ನು ನಾವು ಗಮನಿಸಬೇಕು. ಅಂದರೆ ಪರಿಸರ ಎಂಬುದು ಒಬ್ಬ ಲೇಖಕನ ಹಿಂದೆ ಕೆಲಸ ಮಾಡುತ್ತದೆ. ಅವನು ಯಾವ ಪರಿಸರವನ್ನು ಆಯ್ಕೆ ಮಾಡಿಕೊಳ್ಳುತ್ತಾನೆಯೊ ಅವನ ಜೀವನದ ಆಶಯಗಳು ಆ ಪರಿಸರದ ಜೊತೆಯಲ್ಲಿ ಹೇಗೆ ಗುರುತಿಸಲ್ಪಡುತ್ತವೆಂಬುದರ ಜೊತೆಗೇನೆ ಅವನ ಸೃಜನಶೀಲತೆಯು ಕೆಲಸ ಮಾಡುತ್ತದೆ.

ತೇಜಸ್ವಿಯವರು ಎಲ್ಲಾ ಓದುವ ವರ್ಗದ ಜನರಿಗೆ ಹೇಗೆ ಮತ್ತು ಏಕೆ ಇಷ್ಟವಾಗುತ್ತಾರೆ ಎಂಬುದನ್ನು *ರಹಮತ್ ತರೀಕೆರೆ*ಯುವರು ತಮ್ಮದೇ ಆದ ರೀತಿಯಲ್ಲಿ ಅಭ್ಯಿಕ್ತಿಸಿದ್ದಾರೆ.

“ತೇಜಸ್ವಿ ಮಟ್ಟಿಗೆ ಹೇಳುವುದಾದರೆ ಅವರ ಜನಪ್ರಿಯತೆಯು ಅವರ ಬರಹದಲ್ಲಿರುವ ವಿನೋದಮಯ ಲವಲವಿಕೆ ಶೈಲಿಯಲ್ಲಿ ಇರಬಹುದು; ನಿಗೂಢಗಳ ಬೆನ್ನುಹತ್ತಿ ಹೋಗುವ ಶೋಧಕ ಪ್ರವೃತ್ತಿ ಇರಬಹುದು; ಸಾಂಪ್ರದಾಯಿಕ ಸಮಾಜದ ವಿರುದ್ಧ ಬಂಡೇಳುವ ತರುಣರು ಕಥನದ ನಾಯಕರಾಗುವುದು ಇರಬಹುದು: ಅವರ ಪರಿಸರದ ಜತೆ ಅವರು ಅನುಸಂಧಾನ ಮಾಡುತ್ತ ಕಾಣಿಸುತ್ತಿರುವ ಹೊಸ ಜೀವನ ಜಗತ್ತಿನ ದರ್ಶನ ಇರಬಹುದು. ಸಾಹಿತ್ಯವನ್ನು ಕೇವಲ ಖುಷಿಗಾಗಿ ಓದುವ ವರ್ಗಕ್ಕೂ ತಾತ್ವಿಕ ಚರ್ಚೆಗಾಗಿ ಓದುವ ವಿಮರ್ಶಕರೇ ಮೊದಲಾದ ‘ಗಂಭೀರ’ ಓದುಗರಿಗೂ ಏಕಕಾಲಕ್ಕೆ ಎರಡೂ ಸ್ತರಗಳಲ್ಲಿ ಸಲ್ಲುವ ಲೇಖಕರಲ್ಲಿ ತೇಜಸ್ವಿ ಒಬ್ಬರು ಎನ್ನಬಹುದು.

ತೇಜಸ್ವಿ ಹಲವಾರು ಪ್ರಕಾರಗಳಲ್ಲಿ ಬರೆದಿದ್ದರೂ ಮೂಲತಃ ಅವರೊಬ್ಬ ಕಥನಕಾರ. ಕತೆ, ಕಾದಂಬರಿ,



ಜೀವನಚಿತ್ರ, ಪ್ರವಾಸ ಕಥನ - ಏನು ಬರೆದರೂ ಅದನ್ನು ಕಥೆಯಾಗೇ ಅವರು ಕಲ್ಪಿಸಿಕೊಳ್ಳುತ್ತಾರೆ. ಅವರು ಕಟ್ಟಿಕೊಟ್ಟಿರುವ ಕಥನಕ್ರಮವು ಕನ್ನಡ ಸಾಹಿತ್ಯಕ್ಕೆ ದೊಡ್ಡ ಶಕ್ತಿಯನ್ನು ಸೇರ್ಪಡೆ ಮಾಡಿದೆ. ತೇಜಸ್ವಿಯವರೇ ಹೇಳುವಂತೆ ನಾನು ಜ್ಞಾನೋಪಾಸಕನಾಗಲಿ ವಿದ್ವಾಂಸನಾಗಲಿ ಅಲ್ಲ. ಸಾಹಿತ್ಯವೇ ನನ್ನ ಸ್ವಧರ್ಮ. ಹಾಗಾಗಿ ನಾನು ಏನನ್ನು ಬರೆದರೂ ಅದಕ್ಕೆ ಸಾಹಿತ್ಯ ಪರಿವೇಷ, ಕಥೆ, ಕಾದಂಬರಿಗಳ ಛಾಯೆ ಇರುತ್ತದೆ. ಸಾಹಿತಿ ತನ್ನ ಅನುಭವ ಹೇಳಲು ತತ್ವಶಾಸ್ತ್ರ, ಪುರಾಣ, ಮನಃಶಾಸ್ತ್ರ ಉಪಯೋಗಿಸುವಂತೆ ಈ ಕತೆಗಳಲ್ಲಿ ಕೀಟಶಾಸ್ತ್ರ, ಪಕ್ಷಿಶಾಸ್ತ್ರ, ಪ್ರಾಣಿಶಾಸ್ತ್ರ ಮುಂತಾದವುಗಳ ಉಪಯೋಗ ಆಗಿದೆಯಷ್ಟೆ. ಸ್ವಾನುಭವದ ಎಲ್ಲೆಯನ್ನು ಮೀರದೆ ನಿರೂಪಿಸಿರುವ ಇವನ್ನು ಕಥೆಗಳೆಂದೇ ಪರಿಗಣಿಸಬಹುದು ಅಥವಾ ಇವನ್ನು ಏನೆಂದು ಪರಿಗಣಿಸುವ ಅಗತ್ಯವಾದರೂ ಏನು? ಎಂದು ಅವರು ಹೇಳುವುದುಂಟು.

ತೇಜಸ್ವಿಯವರ ಶೋಧಕ ಗುಣ ಹಾಗೂ ಆಧುನಿಕ ವಿಜ್ಞಾನದಲ್ಲಿ ಇರುವ ಶ್ರದ್ಧೆಯು ಅವರನ್ನು ವಿಜ್ಞಾನದ ಪತ್ತೇದಾರಿ ಅಥವಾ ವಿಜ್ಞಾನದ ಲೇಖಕನನ್ನಾಗಿ ಮಾಡಬೇಕಿತ್ತು. ಆದರೆ ಹಾಗೆ ಆಗಲಿಲ್ಲ. ಯಾಕೆಂದರೆ ಅವರು ಈ ಶೋಧದ ಜತೆಗೆ ಮಾನವ ಬದುಕನ್ನು ಲಗತ್ತಿಸಿ ಬಿಡುತ್ತಾರೆ. ಬದುಕಿನ ಅರ್ಥಶೋಧದ ದಾರ್ಶನಿಕ ಗುಣವೆ ಅವರೊಬ್ಬ ಥ್ರಿಲ್ಲರ್‌ಗಳ ಲೇಖಕರಾಗದಂತೆ ತಡೆದಿದೆ. ಮಾನವರಲ್ಲಿ ಅಡಗಿರುವ ಅಪರಿಮಿತ ಚೈತನ್ಯವು ರೂಢಿಗೆ ಬಿದ್ದು ಹೋಗಿರುವ ಸಾಂಪ್ರದಾಯಿಕ ಸಮಾಜದಲ್ಲಿ ಸಿಲುಕಿ ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗುತ್ತಿಲ್ಲ: ಆದ್ದರಿಂದ ಸಮಾಜದ ಅನಿಸಿಕೆಗಳಿಗೆ ಹೆದರದ ತಮ್ಮ ಒಳಗಿನ ತುಡಿತದಂತೆ ಕ್ರಿಯಾಶೀಲವಾಗುವ ಬದುಕಿನ ಹಾದಿಯನ್ನು ಆರಿಸಿಕೊಳ್ಳಬೇಕು ಎಂದು ತೇಜಸ್ವಿ ಭಾವಿಸಿದರು.

ಸಮಾಜವು ಅವರ ಕಥನದಲ್ಲಿ ಎದುರಾಳಿಯಾಗಿ ಬರುತ್ತದೆ ತಲೆಗೆ ಏನಾದರೂ ಹುಚ್ಚು ಹತ್ತಿಸಿಕೊಂಡು ಮನೆಬಿಟ್ಟು ಪೋಲಿ ತಿರುಗುವವರೆ ಅವರ ಕಥನದ ಹಿರೋಗಳು: ಕರ್ವಾಲೋದ ಮಂದಣ್ಣ, ಪ್ರಭಾಕರ, ನಿರೂಪಕ, ಪ್ಯಾರ, ಜುಗಾರಿಕ್ರಾಸಿನ ಸುರೇಶ ಮಾಯಾಲೋಕದ ಕರಾಟೆ ಮಂಜ ಅಥವಾ ಅಣ್ಣಪ್ಪಣ್ಣ ಎಲ್ಲಾ ಇಂತಹವರೆ" (ಕತ್ತಿಯಂಚಿನ ದಾರಿ ರಹಮತ್‌ತರೀಕೆರೆ).



ಅನುಬಂಧ ಒಂದು

ಗ್ರಂಥಋಣ





ಗ್ರಂಥ ಋಣ

೧. ಅಗ್ರಹಾರ ಕೃಷ್ಣಮೂರ್ತಿ ಸಂ. ಡಿ. ಆರ್ ನಾಗರೀಜ ಸಂಸ್ಕೃತಿಕಥನ, ಕನ್ನಡ ಪುಸ್ತಕ ಪ್ರಾಧಿಕಾರ.

೨. ಆಮೂರ ಜಿ.ಎಸ್. ಕನ್ನಡ ಕಥನ ಸಾಹಿತ್ಯ ಸಣ್ಣಕತೆ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು, ೨೦೦೩.

೩. ಅಮೂರ ಜಿ.ಎಸ್. ಕನ್ನಡ ಕಥನ ಸಾಹಿತ್ಯ ಕಾದಂಬರಿ, ಶ್ರೀಹರಿ ಪ್ರಕಾಶನ ಧಾರವಾಡ ೧೯೯೪.

೪. ಅಮೂರ ಜಿ.ಎಸ್. ಕನ್ನಡ ಶಾಸ್ತ್ರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೨೦೦೧.

೫. ಗೋವಿಂದರಾಜ ಗಿರಡ್ಡಿ, ಸಣ್ಣಕಥೆಯ ಹೊಸ ಒಲವುಗಳು ೧೯೭೮.

೬. ಧರಣೀದೇವಿ ಮಾಲಗತ್ತಿ, ಸ್ತ್ರೀವಾದ ಮತ್ತು ಭಾರತೀಯತೆ ಚೇತನ ಬುಕ್ ಹೌಸ್ ಮೈಸೂರು ೧೯೯೮.

೭. ದೇವಯ್ಯ ಹರವೆ, ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು. ೧೯೯೧.

೮. ದುರ್ಗಾದಾಸ್ ಕೆ.ಆರ್. ಮೂರು ದಲಿತ ಕಮ್ಮಟಗಳು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು. ೧೯೯೬.

೯. ನಾಗರಾಜ ಡಿ.ಆರ್. ಸಾಹಿತ್ಯ ಕಥನ, ಅಕ್ಷರ ಪ್ರಕಾಶನ ಸಾಗರ ೧೯೯೬.

೧೦. ನಾಗರಾಜ ಡಿ.ಆರ್. ಆವೃತ ಮತ್ತು ಗರುಡ, ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ ೧೯೯೮.

೧೧. ನಾಗರಾಜ ಡಿ.ಆರ್. ಶಕ್ತಿ ಶಾರದೆಯಮೇಳ, ಅಕ್ಷರ ಪ್ರಕಾಶನ ಸಾಗರ ೧೯೯೮.

೧೨. ನಾಗಭೂಷಣ ಸ್ವಾಮಿ ಒ.ಎಲ್. ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ ಬೆಂಗಳೂರು ೧೯೯೧.

೧೩. ಕೆ. ಪಿ. ಪೂರ್ಣಚಂದ್ರತೇಜಸ್ವಿ, ಅಣ್ಣನ ನೆನಪು, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೦೦

೧೪. ಕೆ. ಪಿ. ಪೂರ್ಣಚಂದ್ರತೇಜಸ್ವಿ, ಕರ್ವಾಲೋ, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೦೦

೧೫. ಕೆ. ಪಿ. ಪೂರ್ಣಚಂದ್ರತೇಜಸ್ವಿ, ಪರಿಸರದ ಕಥೆ, ಪುಸ್ತಕ ಪ್ರಕಾಶನ ಮೂಡಿಗೆರೆ, ೨೦೦೦

೧೬. ಕೆ. ಪಿ. ಪೂರ್ಣಚಂದ್ರತೇಜಸ್ವಿ, ಕಾಡಿನ ಕಥೆಗಳು, ಪುಸ್ತಕ ಪ್ರಕಾಶನ, ಮೂಡಿಗೆರೆ, ೧೯೯



೧೭. ಕೆ. ಪಿ. ಪೂರ್ಣಚಂದ್ರತೇಜಸ್ವಿ, ಕಿರಗೂರಿನ ಗಯ್ಯಾಳಿಗಳು, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೦೧

೧೮. ಕೆ. ಪಿ. ಪೂರ್ಣಚಂದ್ರತೇಜಸ್ವಿ, ಚಿದಂಬರ ರಹಸ್ಯ, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೦೨

೧೯. ಕೆ. ಪಿ. ಪೂರ್ಣಚಂದ್ರತೇಜಸ್ವಿ, ಅಲೆಮಾರಿಯ ಅಂಡಮಾನ್, ಪತ್ರಿಕೆ ಪ್ರಕಾಶನ, ಬಸವನಗುಡಿ, ಬೆಂಗಳೂರು, ೧೯೯೨

೨೦. ಕೆ. ಪಿ. ಪೂರ್ಣಚಂದ್ರ ತೇಜಸ್ವಿ, ರುದ್ರಪ್ರಯಾಗದ ಭಯಾನಕ ಚಿರತೆ, ಪುಸ್ತಕ ಪ್ರಕಾಶನ, ಮೂಡಿಗೆರೆ, ೧೯೯೮

೨೧. ಕೆ. ಪಿ. ಪೂರ್ಣಚಂದ್ರತೇಜಸ್ವಿ, ಜುಗಾರಿ ಕ್ರಾಸ್, ಪುಸ್ತಕ ಪ್ರಕಾಶನ, ಮೂಡಿಗೆರೆ, ೧೯೯೫

೨೨. ಶೇಷಗಿರಿರಾವ್. ಎಲ್.ಎಸ್. ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು, ೨೦೦೨.

೨೩. ಹನುಮಂತಯ್ಯ ಎಲ್. ಕಥಾಕಥನ ಬಂಡಾಯಕಥೆಗಳಲ್ಲಿ ದಲಿತ ಪ್ರಜ್ಞೆ ಸಿ.ವಿ.ಜಿ ಬೆಂಗಳೂರು, ೧೯೯೯.

೨೪. ಹೊನ್ನಯ್ಯ .ಸಿ.ಬಿ. ಕನ್ನಡ ಸಣ್ಣಕತೆಗಳಲ್ಲಿ ದಲಿತ ಸಂಸ್ಕೃತಿ ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ ಬೆಂಗಳೂರು, ೨೦೦೪.

೨೫. ಹನುಮಂತಯ್ಯ ಎಲ್. ದಲಿತ ಲೋಕದ ಒಳಗೆ, ಕರ್ನಾಟಕ ದಲಿತ ಪ್ರಕಾಶನ ಬೆಂಗಳೂರು, ೧೯೯೦.

೨೬. ಹಿರೇಮಠ ಎಸ್.ಎಸ್. ದಲಿತ ಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೦೧.



ಅನುಬಂಧ ಎರಡು

ತೇಜಸ್ವಿಯವರ ಕೃತಿಗಳು-ಪ್ರಶಸ್ತಿಗಳು





ಪೂರ್ಣಚಂದ್ರ ತೇಜಸ್ವಿ ಕೃತಿಗಳು - ಪ್ರಶಸ್ತಿಗಳು

೧೯೬೨ ಹುಲಿಯೂರಿನ ಸರಹದ್ದು ಕಥಾ ಸಂಕಲನ
ಸೋಮುವಿನ ಸ್ವಗತ ಲಹರಿ ಕವನ ಸಂಕಲನ
೧೯೬೪ ಯಮಳ ಪ್ರಶ್ನೆ ನಾಟಕ
ವ್ಯಕ್ತಿ ವಿಶಿಷ್ಟ ಸಿದ್ಧಾಂತ ವೈಚಾರಿಕ ಬರಹಗಳು
೧೯೬೬ ಸ್ವರೂಪ ಕಿರು ಕಾದಂಬರಿ
೧೯೭೩ ನಿಗೂಢ ಮನುಷ್ಯರು ಕಿರು ಕಾದಂಬರಿ
ಅಬಚೂರಿನ ಪೋಸ್ಟಾಫೀಸು ಕಥಾ ಸಂಕಲನ
೧೯೮೦ ಕರ್ವಾಲೋ ಕಾದಂಬರಿ
೧೯೮೫ ಚಿದಂಬರ ರಹಸ್ಯ ಕಾದಂಬರಿ
೧೯೯೦ ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್ ಪ್ರವಾಸ ಕಥನ
೧೯೯೧ ಪರಿಸರದ ಕಥೆ ಕಥಾತ್ಮಕ ಪ್ರಬಂಧಗಳು
ಕಿರುಗೂರಿನ ಗಯ್ಯಾಳಿಗಳು ಕಥಾ ಸಂಕಲನ
ಕಿರಿಯರಿಗಾಗಿ ಪರಿಸರ
೧೯೯೨ ಸಹಜ ಕೃಷಿ
ಮಿಸ್ಸಿಂಗ್ ಲಿಂಕ್
೧೯೯೩ ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು
ಕಾಡಿನ ಕಥೆಗಳು ಭಾಗ ೧
ಕಾಡಿನ ಕಥೆಗಳು ಭಾಗ ೨
ಫ್ಲೈಯಿಂಗ್ ಸಾಸರ್ಸ್ ಭಾಗ ೧
ಫ್ಲೈಯಿಂಗ್ ಸಾಸರ್ಸ್ ಭಾಗ ೨
ವಿಸ್ಮಯ ಭಾಗ ೧
ವಿಸ್ಮಯ ಭಾಗ ೨
ದಕ್ಷಿಣ ಭಾರತದ ಹಕ್ಕಿಗಳು
೧೯೯೪ ಕಾಡಿನ ಕಥೆಗಳು ಭಾಗ ೩
ಕಾಡಿನ ಕಥೆಗಳು ಭಾಗ ೪
ಮಿಂಚುಳ್ಳಿ ಕನ್ನಡ ನಾಡಿನ ಹಕ್ಕಿಗಳು ಭಾಗ ೧
ಜುಗಾರಿ ಕ್ರಾಸ್ ಕಾದಂಬರಿ
ವಿಸ್ಮಯ ಭಾಗ ೩
೧೯೯೫ ರುದ್ರಪ್ರಯಾಗದ ಭಯಾನಕ ನರಭಕ್ಷಕ
೧೯೯೬ ಅಣ್ಣನ ನೆನಪು ನೆನಪುಗಳ ಸಂಗ್ರಹ
ಹೆಜ್ಜೆ ಮೂಡದ ಹಾದಿ ಕನ್ನಡ ನಾಡಿನ ಹಕ್ಕಿಗಳು ಭಾಗ ೨
೧೯೯೭ ಹಕ್ಕಿಪುಕ್ಕ
ನಡೆಯುವ ಕಡ್ಡಿ ಹಾರುವ ಎಲೆ ಹುಳುಗಳ ವಿಸ್ಮಯ ಕೋಶ ೧



೧೯೯೭ ಮಿಲೆನಿಂಯ ಸರಣಿ

ಹುಡುಕಾಟ ೧

ಜೀವನ ಸಂಗ್ರಾಮ ೨

ಪೆಸಿಫಿಕ್ ದ್ವೀಪಗಳು

ಚಂದ್ರನ ಚೂರು

ನೆರೆ ಹೊರೆಯ ಗೆಳೆಯರು

ಮಹಾಯುದ್ಧ ೧

ಮಹಾಯುದ್ಧ ೨

ಮಹಾಯುದ್ಧ ೩

ದೇಶವಿದೇಶ ೧

ದೇಶವಿದೇಶ ೨

ದೇಶವಿದೇಶ ೩

ದೇಶವಿದೇಶ ೪

ವಿಸ್ಮಯ ವಿಶ್ವ ೧

ಮಹಾ ಪಲಾಯನ

ವಿಸ್ಮಯ ವಿಶ್ವ

ಅಡ್ವೆಂಚರ್

ಪ್ರಶಸ್ತಿಗಳು

ಲಿಂಗಬಂದ ಕಥೆ ಪ್ರಜಾವಾಮಿ ಕಥಾ ಪ್ರಶಸ್ತಿ

ಕರ್ವಾಲೋ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಚಿದಂಬರ ರಹಸ್ಯ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಪರಿಸರದ ಕಥೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಮಿಸ್ಸಿಂಗ್ ಲಿಂಕ್ ಶಿವರಾಮ ಕಾರಂತ ಪ್ರಶಸ್ತಿ

ಕಾಡಿನ ಕಥೆಗಳು ಭಾಗ ೨ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಮಾಯಾಮೃಗ ಕಥೆ ಕಥಾ ಪ್ರಶಸ್ತಿ

ಕರ್ನಾಟಕ ಸರ್ಕಾರದ ಪರಿಸರ ಪ್ರಶಸ್ತಿ

ಕನ್ನಡ ರಾಜ್ಯೋತ್ಸವ ಪ್ರಶಸ್ತಿ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ

ಸಂದೇಶ ಕನ್ನಡ ಸಾಹಿತ್ಯ ಪ್ರಶಸ್ತಿ

ಪಂಪ ಪ್ರಶಸ್ತಿ

ತಬರನ ಕಥೆ, ಕುಬಿ ಮತ್ತು ಇಯಾಲ, ಅಬಚೂರಿನ ಪೋಸ್ಟಾಫೀಸು ಚಲನಚಿತ್ರಗಳಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಶಸ್ತಿಗಳು ಅತ್ಯುತ್ತಮ ಕಥಾ ಲೇಖನ ಪ್ರಶಸ್ತಿಗಳು.

